ಪುಸ್ತಕ ಪ್ರಪಂಚ

ಸಂಪುಟ ೪೪ ಮೇ ೧೯೯೪ ಸಂಚಿಕೆ ೯



ವಿಷಯ ಸೂಚಿಕೆ

ಮುಖಚಿತ್ರ: ಟಿ. ಚೌಡಯ್ಯ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

ಸಂಪುಟ ೪೪ ಮೇ ೧, ೧೯೯೪ ಸಂಚಿಕೆ ೬

ಸಂಗೀತ ರತ್ನ ಸಂಗೀತ ಕಲಾನಿಧಿ
ಮೈಸೂರು ಟಿ. ಚೌಡಯ್ಯನವರು ಜೀವನ–ಸಾಧನೆ

ಪಿಟೀಲುವಾದಕರೆಂದರೆ ಚೌಡಯ್ಯನವರಯ್ಯಾ ಎಂದು 'ಏಕಚ್ಛತ್ರಾಧಿಪತಿ' ಗಳಾಗಿ ಮೆರೆದ ಈ ಕನ್ನಡನಾಡಿನ ಗಂಡುಗಲಿ ಅಸಾಧಾರಣ ಸಾಧಕ, ಅಪಾರ ವಿನಯಶಾಲಿ, ಅನುಪಮಗುರು ಮತ್ತು ವಾಗ್ಗೇಯಕಾರ. ಸಂಗೀತ ಪ್ರಪಂಚ ದಾಚೆಗೆ ತೀರ ಮುಗ್ಧ—ಇವರ ಸರ್ವ ಸಾಮರ್ಥ್ಯವನ್ನೂ ಸಂಗೀತಸಾಮ್ರಾಜ್ಞಿ ಸರಸ್ವತಿ ತನ್ನ ಕೈಂಕರ್ಯವೊಂದಕ್ಕೆ ಬಳಸಿಕೊಂಡಿದ್ದಳೋ ಎಂಬಂತೆ. ಎಂದೇ ಕಲಾವಿದ ಚೌಡಯ್ಯ ಮಾತ್ರವಲ್ಲ ವ್ಯಕ್ತಿ ಚೌಡಯ್ಯ (ತಮಿಳರ ಒಲುಮೆ ನುಡಿಗಳಲ್ಲಿ ಸೌಂಡಯ್ಯ—sound ಅಯ್ಯ, ನಾದಸುಖಜೀವ ಗುರು ಹಾಗೂ ಭದ್ರ ವೃತ್ತಿ ಕಲಾವಿದ) ಅನೇಕ ದಂತಕಥೆಗಳಿಗೂ ಕಾರಣರಾಗಿದ್ದಾರೆ. ಶ್ರೀಯುತರ ಅಗ್ರಮಾನ್ಯ ನೈಷ್ಠಿಕ ಗುರುಕುಲ ಶಿಷ್ಯರ ಪೈಕಿ ಒಬ್ಬರಾಗಿರುವ ಪ್ರೊ॥ ವಿ. ರಾಮರತ್ನಮ್ ಅವರ ಈ ನುಡಿನಮನ ಆ ಮಹಾ ಗುರುವಿನ ಜೀವನ ಪರಿಚಯ ನೀಡುತ್ತದೆ.

ಕಾವೇರಿ, ಕಪಿಲಾ ಮತ್ತು ಸ್ಫಟಿಕಸರೋವರ ಸಂಗಮಕ್ಷೇತ್ರವಾದ ತಿರಮಕೂಡಲು ನರಸೀಪುರ ಕರ್ನಾಟಕ ರಾಜ್ಯದಲ್ಲಿ ಹೆಸರುವಾಸಿಯಾದ ಯಾತ್ರಾಸ್ಥಳ. ಇದು ದಕ್ಷಿಣಕಾಶಿಯೆಂದೇ ಪ್ರಸಿದ್ಧವಾಗಿದೆ. ಇಲ್ಲಿ ಅಗಸ್ತ್ಯಮುನಿ ಗಳಿಂದ ಪ್ರತಿಷ್ಠಾಪಿತವಾದ ಅಗಸ್ತ್ಯೇಶ್ವರ ದೇವಾಲಯವಿದೆ. ಇದರ ಸಮೀಪದಲ್ಲಿ ಗುಂಜಾನರಸಿಂಹಸ್ವಾಮಿಯ ದೇವಸ್ಥಾನವೂ ಇದೆ. ಈ ಎರಡು ಕ್ಷೇತ್ರಗಳೂ ಮೈಸೂರಿಗೆ ಹದಿನೆಂಟು ಮೈಲಿಗಳ ದೂರದಲ್ಲಿದೆ. ಇಂಥ ಪುಣ್ಯಕ್ಷೇತ್ರದಲ್ಲಿ ಚೌಡಯ್ಯನವರು ೧೮೯೪ರಲ್ಲಿ ಜನಿಸಿದರು. ಇವರ ತಂದೆ ಅಗಸ್ತ್ಯಗೌಡರು, ತಾಯಿ ಸುಂದರಮ್ಮ. ಇವರಿಬ್ಬರೂ ಸಂಗೀತಪ್ರೇಮಿಗಳು. ಸುಂದರಮ್ಮನವ

ರಂತೂ ಸಂಗೀತ, ನೃತ್ಯ ಮತ್ತು ಸಂಸ್ಕೃತ ಭಾಷೆಯನ್ನೂ ಅಧ್ಯಯನ ಮಾಡಿದ್ದರು. ಮಗು ಚೌಡಯ್ಯನವರ ಜಾತಕವನ್ನು ಜ್ಯೋತಿಷಿ ಅಹೋಬಲಾಚಾರ್ಯರಲ್ಲಿ ತೋರಿಸಿದಾಗ, ಸಂಗೀತ ಕಲೆಯಲ್ಲಿ ಅವರು ಅದ್ಭುತ ಸಾಧನೆ ಮಾಡುವರೆಂದು ತಿಳಿಯಿತು. ಜೋತಿಷ್ಯದಲ್ಲಿ ಸಂಪೂರ್ಣ ನಂಬಿಕೆಯಿರಿಸಿದ್ದ ಅವರ ತಾಯಿ ಉತ್ತಮ ಗುರುಗಳಿಂದ ಪಾಠ ಹೇಳಿಸಿ ಚೌಡಯ್ಯನವರನ್ನು ಸಂಗೀತದಲ್ಲಿ ಮೇಲೆ ತರಬೇಕೆಂದು ನಿರ್ಧರಿಸಿದರು. ಹೀಗಾಗಿ ಆರಂಭದ ಪಾಠಗಳನ್ನು ಅವರೇ ಆರಂಭಿಸಿ, ಮುಂದೆ ಅವರ ಸಹೋದರ ಎ. ಚೌಡಯ್ಯನವರೊಂದಿಗೆ ಮಗನನ್ನು ಮೈಸೂರಿಗೆ ಕಳುಹಿಸಿಕೊಟ್ಟರು.

ಮೈಸೂರಿಗೆ ಬಂದ ತರುವಾಯ ಎ. ಚೌಡಯ್ಯನವರು ತಮ್ಮ ಸೋದರ ಅಳಿಯನಿಗಾಗಿ ಯೋಗ್ಯ ಗುರುಗಳನ್ನು ಅನ್ವೇಷಿಸುತ್ತಿದ್ದರು. ಈ ಅವಧಿಯಲ್ಲಿ ಬಿಡಾರಮ್ ಕೃಷ್ಣಪ್ಪನವರ ಸಂಗೀತಪಾಂಡಿತ್ಯದ ಬಗೆಗೆ ಅನೇಕರಿಂದ ಮೆಚ್ಚುಗೆಯ ಮಾತುಗಳು ಕೇಳಿಬಂದುವು. ಹೀಗಾಗಿ ಅವರಲ್ಲೇ ಚೌಡಯ್ಯನವರಿಗೆ ಸಂಗೀತ ಶಿಕ್ಷಣಕ್ಕಾಗಿ ವಿಚಾರಿಸುವುದೆಂದು ನಿರ್ಧರಿಸಿದರು. ಕೃಷ್ಣಪ್ಪನವರನ್ನು ಭೇಟಿಮಾಡಿ ತಮ್ಮ ಕೋರಿಕೆಯನ್ನು ಅವರ ಮುಂದಿಟ್ಟರು. ಸ್ವಲ್ಪ ಕಾಲ ಯೋಚಿಸಿದನಂತರ ಅವರು ಯುವ ಚೌಡಯ್ಯನವರನ್ನು ಶಿಷ್ಯನಾಗಿ ಸ್ವೀಕರಿಸಲು ಒಪ್ಪಿದರು. ೧೯೧೦ನೇ ಮೇ ತಿಂಗಳು ಆಷಾಢ ಬಹುಳ ಅಮಾವಾಸ್ಯೆಯಂದು ಅವರು ಈ ಹುಡುಗನಿಗೆ ಸಂಗೀತ ಶಿಕ್ಷಣ ಆರಂಭಿಸಿದರು.

ಕೃಷ್ಣಪ್ಪ ಸರಳ ಹೃದಯಿ, ಉದಾರಿಗಳೂ ಹೌದು. ಇವರ ಶಾರೀರ ಬಹಳ ಗಾತ್ರವಾಗಿತ್ತು. ಇವರು ಸಂಗೀತ ದಿಗ್ಗಜಗಳೆನಿಸಿದ್ದ ಗಿರಿಭಟ್ಟರತಮ್ಮಯ್ಯ, ಕರಿಗಿರಿರಾಯರು, ಸುಬ್ಬರಾಯರು, ಚಿಕ್ಕಸುಬ್ಬರಾಯರು, ಶೇಷಣ್ಣನವರು, ಕರೂರುರಾಮಸ್ವಾಮಿ ಮುಂತಾದವರಲ್ಲಿ ಶಿಷ್ಯವೃತ್ತಿ ಮಾಡಿದ್ದರೆಂದರೆ ಇವರ ಪಾಂಡಿತ್ಯದ ಬಗ್ಗೆ ಹೆಚ್ಚು ಹೇಳಬೇಕಾದುದಿಲ್ಲ. ಗಾಯನದಲ್ಲೇ ಅಲ್ಲದೆ ಪಿಟೀಲು ಹಾಗೂ ವೀಣಾವಾದನಗಳಲ್ಲೂ ಕೃಷ್ಣಪ್ಪ ಪರಿಣಿತರಾಗಿದ್ದರು. ಇವರು ಚೌಡಯ್ಯನವರನ್ನು ಶಿಷ್ಯರಾಗಿ ಸ್ವೀಕರಿಸಿದುದೇ ಮಹಾ ಭಾಗ್ಯವೆಂದು ಸೋದರಮಾವ ಪರಿಗಣಿಸಿದರು.

ಕೃಷ್ಣಪ್ಪನವರದು ವಿಶೇಷ ರೀತಿಯ ಪಾಠಕ್ರಮ. ಇದನ್ನು ಚೌಡಯ್ಯನವರೇ ತಮ್ಮ ಗುರುಗಳಿಂದ ನಿರ್ಮಿತವಾದ ರಾಮಮಂದಿರದಲ್ಲಿ ನಡೆದ ೨ನೇ ಸಂಗೀತ ಸಮ್ಮೇಳನದ ಅಧ್ಯಕ್ಷ ಪೀಠದಿಂದ ೧-೧೨-೧೯೫೮ ರಂದು ಹೀಗೆ ವರ್ಣಿಸಿದ್ದಾರೆ.

"ನನ್ನ ಪೂಜ್ಯ ಗುರುಗಳ ಸಂಗೀತ ಪಾಠ ಕ್ರಮವನ್ನು ನಾನು ಮತ್ತಾವ ವಿದ್ವಾಂಸರಲ್ಲೂ ಕಂಡಿಲ್ಲ. ಆರು ಕಾಲಗಳಲ್ಲಿ ಸ್ವರಾವಳಿಗಳನ್ನೂ ಅಕಾರಉಕಾರ ಗಳನ್ನೂ ಸಾಧನೆ ಮಾಡಿಸುತ್ತಿದ್ದರು. ಈ ಮೂಲಕ ಸ್ವರಜ್ಞಾನವುಂಟಾದ ನಂತರವೇ ಅವರು ಪ್ರೌಢರಚನೆಗಳಾದ ವರ್ಣ, ಕೃತಿ ಅಥವಾ ಪಲ್ಲವಿ ಗಳನ್ನು ಪಾಠಮಾಡುತ್ತಿದ್ದುದು."

ಮೂಲತಃ ಸಂಗೀತಾಸಕ್ತರಾಗಿದ್ದು, ತಾಯಿಯಲ್ಲಿ ಕೆಲಕಾಲ ಅಭ್ಯಾಸ ಮಾಡಿದ್ದ ಚೌಡಯ್ಯನವರು, ತಮ್ಮ ಗುರುಗಳ ಕಠಿಣತರ ಅಭ್ಯಾಸಕ್ರಮದಿಂದ ಅವರಲ್ಲಿ ಪಾಠವನ್ನು ಆರಂಭಿಸಿದ ಹತ್ತು ತಿಂಗಳನಲ್ಲೇ ಒಮ್ಮೆ ಗುರುಗಳಿಗೆ ಪಕ್ಕವಾದ್ಯ ನುಡಿಸುವ ಅವಕಾಶ ಒದಗಿತು. ಈ ವೇಳೆಗೆ ಚೌಡಯ್ಯನವರಿಗೆ ಶ್ರುತಿ, ಸ್ವರ, ತಾಳದ ಬಗೆಗಷ್ಟೆ ಜ್ಞಾನಲಭ್ಯವಾಗಿತ್ತಾದರೂ ಒಂದು ವರ್ಣಕೂಡ ಪಾಠವಾಗಿರಲಿಲ್ಲವಂತೆ. ಆದರೆ ಸಂಗೀತದ ಮೂಲಭೂತ ಅಂಶಗಳಾದ ಶ್ರುತಿ, ಸ್ವರ ತಾಳದ ಅರಿವಿನ ಆಧಾರದ ಮೇಲೆ ಅಂದು ಅವರು ಪಕ್ಕವಾದ್ಯದಲ್ಲಿ ಸಹಕರಿಸಲು ಸಾಧ್ಯವಾಯಿತೆಂದು ಅವರೇ ಹೇಳಿದ್ದಾರೆ. ಇಲ್ಲಿಂದ ಮುಂದೆ ಶಿಷ್ಯ ಸತತ ಸಾಧನೆಯಿಂದ ನುಡಿಸುವಿಕೆಯಲ್ಲಿ ಸಾರ್ವಭೌಮತ ವನ್ನು ಪಡೆದುದನ್ನು ಮೆಚ್ಚಿ ಬಹುತೇಕ ತಮ್ಮೆಲ್ಲ ಕಛೇರಿಗಳಿಗೂ ಪಕ್ಕವಾದ್ಯ ಕ್ಕಾಗಿ ಇವರನ್ನೇ ಕರೆದೊಯ್ಯುತ್ತಿದ್ದರು. ಹೀಗಾಗಿ ಚೌಡಯ್ಯನವರು ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶಗಳ ಹಲವಾರು ಮುಖ್ಯ ಪಟ್ಟಣ ಗಳಲ್ಲಿ ಕಛೇರಿಗಳಿಗೆ ನುಡಿಸಿ ಜನಪ್ರಿಯರಾದರು.

ಅಂದು ಕಛೇರಿಗಳಲ್ಲಿ ಬಳಸಲು ಧ್ವನಿವರ್ಧಕಗಳು ಇರಲಿಲ್ಲ. ಹೀಗಾಗಿ ಗುರುಗಳ ಗಾತ್ರವಾದ ಶಾರೀರದ ಮುಂದೆ ಚೌಡಯ್ಯನವರ ನಾಲ್ಕುತಂತಿಗಳ ಪಿಟೀಲಿನ ನಾದ ಕಛೇರಿಗಳಲ್ಲಿ ಹಿಂದೆ ಕುಳಿತ ಶ್ರಾವಕರನ್ನು ತಲಪುತ್ತಲೇ ಇರಲಿಲ್ಲ. ಇದನ್ನು ಗಮನಿಸಿದ ಚೌಡಯ್ಯನವರು ಪಿಟೀಲಿನ ನಾದದಲ್ಲಿ ಘೋಷ (volume) ತರುವ ದಿಶೆಯಲ್ಲಿ ಯೋಚಿಸತೊಡಗಿದರು. ಹಲವು ಹಂತಗಳಲ್ಲಿ ಪ್ರಯೋಗ ನಡೆಸಿ ಏಳುತಂತಿಗಳ ಪಿಟೀಲನ್ನು ನಿರ್ಮಿಸಿದರು. ಇದನ್ನು ನುಡಿಸ ಹೊರಟ ಮೊದಲ ದಿನಗಳಲ್ಲಿ ಕೃಷ್ಣಪ್ಪನವರಾದಿಯಾಗಿ ಮದ್ರಾಸಿನ ಸಂಗೀತ ಅಕಾಡೆಮಿಯಲ್ಲೂ ವಾದವಿವಾದಗಳುಂಟಾದುವು. ಆದರೆ ಚೌಡಯ್ಯನವರು ಇದರಲ್ಲಿಯ ನಾದವನ್ನು ಶ್ರಾವಕರಿಗೆ ಮನದಟ್ಟುಮಾಡಿಕೊಟ್ಟನಂತರ ಶೇಷಣ್ಣ ನವರಂಥ ಮಹಾವಿದ್ವಾಂಸರು ಪ್ರೋತ್ಸಾಹಿಸಲಾಗಿ, ಈ ವಾದ್ಯವನ್ನು ಹೆಚ್ಚು ಪ್ರಯೋಗಕ್ಕೆ ತಂದರು. ಸಂಗೀತ ಕ್ಷೇತ್ರಕ್ಕೆ ಏಳು ತಂತಿಗಳ ಪಿಟೀಲು ಚೌಡಯ್ಯನವರ ಅದ್ಭುತ ಕೊಡುಗೆಯೇ ಆಯ್ತು.

ಚೌಡಯ್ಯನವರು ತಮ್ಮ ಗುರುಗಳಿಗೇ ಅಲ್ಲದೆ ಇತರ ಕಲಾವಿದರಿಗೂ ಪಕ್ಕವಾದ್ಯ ನುಡಿಸಿದ್ದಾರೆ. ಇವರಲ್ಲಿ ಕೆಲವರೆಂದರೆ ವಾಸುದೇವಾಚಾರ್ಯರು, ಟೈಗರ್, ಅರಿಯಾಕುಡಿ, ಚೆಂಬೈ, ಮಧುರೈಮಣಿ ಅಯ್ಯರ್, ಜಿ.ಎನ್.ಬಿ., ಆಲತ್ತೂರು ಸಹೋದರರು. ಇವುಗಳಲ್ಲಿ ಅರಿಯಕುಡಿಯವರಿಗೆ ಮದ್ರಾಸಿನ ಸೌಂದರ್ಯ ಮಹಲ್‌ನಲ್ಲಿ ನುಡಿಸಿದ ಪಕ್ಕವಾದ್ಯ ಗಮನಾರ್ಹವಾದುದು. ಇದು ಒಂದರ್ಥದಲ್ಲಿ ಚೌಡಯ್ಯನವರಿಗೆ ಸತ್ವಪರೀಕ್ಷೆಯಾಗಿತ್ತೆಂದು ಅವರೇ ಹೇಳುತ್ತಿದ್ದರು. ಅಂದು ಕಛೇರಿ ಇನ್ನೇನು ಪ್ರಾರಂಭವಾಗುವುದರಲ್ಲಿತ್ತು. ಸಭಿಕರಲ್ಲಿ ಕೆಲವು ಮಂದಿ "ಇಂದು ಕಛೇರಿ ನಡೆಸಿಕೊಡಲಿರುವ ಈ ವಿದ್ವಾಂಸರು ತಮಿಳುನಾಡಿನ ಹಿರಿಯ ವಿದ್ವಾಂಸರ ಜೊತೆಗೆ ಸರಿತೂಗ ಬಲ್ಲರೆ?" ಎಂಬ ಹಗುರ ಮನೋಭಾವದಿಂದ ಮಾತನಾಡಿಕೊಳ್ಳುತ್ತಿದ್ದುದು ಕೇಳಿ ಬಂತು. ಕಛೇರಿಯ ಆರಂಭದಲ್ಲೇ ಚೌಡಯ್ಯನವರು ತಮ್ಮ ಕಲಾಸಾಮರ್ಥ್ಯದಿಂದ ಮೆರೆದರು. ಇದರಿಂದ ರಸಿಕರಿಗೆ ಸಂತೋಷವಾಯಿತು. ಅಂದಿನ ಕಛೇರಿಯಲ್ಲಿ ಐಯ್ಯಂಗಾರ್ಯರು ಕ್ಲಿಷ್ಟವಾದ ಒಂದು ಪಲ್ಲವಿಯನ್ನೇ ಹಾಡಿದರು. ಅದನ್ನು ಪ್ರಧಾನಗಾಯಕರಷ್ಟೇ ದಕ್ಷತೆಯಿಂದ ಚೌಡಯ್ಯನವರು ಪ್ರದರ್ಶಿಸಿ ಸಭೆಯ ಮೆಚ್ಚುಗೆಗೆ ಪಾತ್ರರಾದರು. ಈ ವಿಷಯವನ್ನು ಅವರ ಸಹೋದರ ಟಿ. ಗುರುರಾಜಪ್ಪನವರು ನನಗೆ ತಿಳಿಸಿದರು. ಈ ಕಛೇರಿಯನಂತರ ಮದ್ರಾಸ್ ಮತ್ತಿತರ ಸ್ಥಳಗಳಿಂದ ಚೌಡಯ್ಯನವರಿಗೆ ಹೆಚ್ಚು ಹೆಚ್ಚು ಆಹ್ವಾನಗಳು ಬರಲಾರಂಭವಾಯ್ತು. ಅಲ್ಲಿಂದ ಮುಂದೆ ಸುಮಾರು ನಾಲ್ಕು ದಶಕಗಳ ಕಾಲ ತನಿ ಕಛೇರಿಗಳನ್ನೂ, ಪಕ್ಕವಾದ್ಯವನ್ನೂ ನುಡಿಸಿದರು. ಇವರು ತಮ್ಮ ತನಿ ಕಛೇರಿಗಳಿಗೆ ಹೆಸರಾಂತ ವಿದ್ವಾಂಸರಾದ ಪುದುಕೋಟೈ ದಕ್ಷಿಣಾಮೂರ್ತಿಪಿಳ್ಳೈ, ಪಾಲ್ಘಾಟ್ ಮಣಿ ಅಯ್ಯರ್, ಪಳನಿ ಸುಬ್ರಮಣ್ಯಪಿಳ್ಳೈ ಮೊದಲಾದವರನ್ನು ಮೃದಂಗ ಪಕ್ಕವಾದ್ಯಕ್ಕಾಗಿ ಹಾಕಿಕೊಳ್ಳುತ್ತಿದ್ದರು. ಹೀಗೆ ಅತಿ ಹೆಚ್ಚು ಸಂಖ್ಯೆಯಲ್ಲಿ ಸಂಗೀತ ಕಛೇರಿಗಳನ್ನು ಮಾಡಿದ ಚೌಡಯ್ಯನವರ ಅಂತಿಮ ಕಛೇರಿ ೧೯೬೭ ರಲ್ಲಿ ಚೆಂಬೈವೈದ್ಯನಾಥ ಅಯ್ಯರ್‌ರವರಿಗೆ ಪಕ್ಕವಾದ್ಯ ನುಡಿಸಿದುದು.

ಚೌಡಯ್ಯನವರು ತಾವು ಪಾಠ ಕಲಿತ ರೀತಿಯಲ್ಲೇ ತಮ್ಮ ಶಿಷ್ಯರಿಗೂ ಪಾಠ ಹೇಳುತ್ತಿದ್ದರು. ಗಾಯನ ವಿದ್ಯಾರ್ಥಿಗಳಾಗಲಿ, ಪಿಟೀಲು ವಾದನದ ವಿದ್ಯಾರ್ಥಿಗಳಾಗಲಿ, ಬೆಳಗಿನ ಜಾವ ಎದ್ದು ಸ್ವರಾವಳಿ, ಅಕಾರಸಾಧನೆ, ಮಾಡಿದನಂತರ ಮೂರು ಕಾಲಗಳಲ್ಲಿ ವರ್ಣವನ್ನು ಹಾಡಬೇಕಿತ್ತು. ಹೀಗೆ

ಅಭ್ಯಾಸಿಸಿ ಶಾರೀರಶುದ್ಧಿ ಅಥವಾ ನುಡಿಸುವಿಕೆಯಲ್ಲಿ ಚುರುಕುಗೊಂಡನಂತರವೇ ಪಾಠ ಮುಂದುವರೆಯುತ್ತಿದ್ದುದು. ಈ ರೀತಿಯ ಅಭ್ಯಾಸ ಕ್ರಮದಿಂದ ಶಾರೀರದಲ್ಲಿ ಮತ್ತು ವಾದ್ಯದಲ್ಲಿ ಗಮಕಗಳು ನಿಯಂತ್ರಿತ ರೀತಿಯಲ್ಲಿ ಪ್ರಯೋಗಿಸಲು ಸಾಧ್ಯವಾಗುತ್ತಿತ್ತು.

ಚೌಡಯ್ಯನವರ ಸಂಗೀತದಲ್ಲಿ ಅನೇಕ ವಿಶಿಷ್ಟ ಅಂಶಗಳಿದ್ದವು. ಈ ಅಂಶಗಳೆಲ್ಲವನ್ನು ಅವರು ಮುಚ್ಚುಮರೆಯಿಲ್ಲದೆ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದರು. ಅವರು ಶಿಷ್ಯರಿಗೆ ನೀಡುತ್ತಿದ್ದ ಕೆಲವು ಮುಖ್ಯ ಸೂಚನೆಗಳೆಂದರೆ,

೧) ವಿಶಾಲವ್ಯಾಪ್ತಿವುಳ್ಳ ತೋಡಿ, ಕಲ್ಯಾಣಿ, ಶಂಕರಾಭರಣದಂಥ ರಾಗಗಳಿಗೆ ಮಾತ್ರ ವಿಸ್ತಾರವಾಗಿ ರಾಗಾಲಾಪನೆ ಸ್ವರಕಲ್ಪನೆ ಮಾಡುವುದು. ಅದರಲ್ಲಿ ಒಂದು ಅಂಶ ಆಲಾಪನೆ ಅಥವಾ ಸ್ವರ ಕಲ್ಪನೆ ರಚನೆಯ ಅಳತೆಗೆ ಅನುಗುಣವಾಗಿರಲಿ.

೨) ವಿರಳ ರಾಗಗಳನ್ನು ಅನವಶ್ಯವಾಗಿ ವಿಸ್ತರಿಸಿ ಸಂದಿಗ್ಧತೆ ತರಬಾರದು. ಇವು ಚಿಕ್ಕದಾಗಿ ಚೊಕ್ಕವಾಗಿರಲಿ.

೩) ಸಾಂಪ್ರದಾಯಿಕವಾದ ಪಲ್ಲವಿ ಪ್ರದರ್ಶನಗಳಲ್ಲಿ 'ಗಿಮಿಕ್ಸ್' ಬೇಡ. ಎರಡು ಮತ್ತು ನಾಲ್ಕು ಕಳೆಯ ಪಲ್ಲವಿಗಳನ್ನು ಆಯ್ದುಕೊಂಡು ಪ್ರಯೋಗಿಸಿ. ಚೌಡಯ್ಯನವರು ಪಲ್ಲವಿ ನುಡಿಸುವಾಗ ಎರಡು ಅಥವಾ ನಾಲ್ಕು ಕಳೆಯ ಪಲ್ಲವಿಯನ್ನೇ ಹೆಚ್ಚು ಆಯ್ದುಕೊಳ್ಳುತ್ತಿದ್ದುದು ಮುಖ್ಯವಾದ ಒಂದು ಅಂಶ.

ಸಂಗೀತ ಕಲಿಕೆಯಲ್ಲಿ ಗುರುಗಳಿಂದ ಕಲಿಯುವುದರಷ್ಟೇ ಮುಖ್ಯ. ಸಂಗೀತ ಕಛೇರಿಗಳನ್ನು ಕೇಳುವುದು. ಆದ್ದರಿಂದ ಚೌಡಯ್ಯನವರು, ವಿದ್ಯಾರ್ಥಿಗಳು ಹಾಗೂ ಇತರರ ಲಾಭಕ್ಕಾಗಿ ಅನೇಕ ಕಛೇರಿಗಳನ್ನು ಏರ್ಪಡಿಸುತ್ತಿದ್ದರು. ಇದರಲ್ಲಿ ಪರಸ್ಥಳದ ಕಲಾವಿದರೂ ಒಂದು ಕಛೇರಿ ನಡೆಸಿಕೊಡುತ್ತಿದ್ದರು. ಅಂದು ಕಛೇರಿಗಳಿಗೆ ಸಂಭಾವನೆಯಾಗಿ ನೀಡುತ್ತಿದ್ದ ಮೊತ್ತ ಸುಮಾರು ನೂರು ರೂಗಳಷ್ಟಿದ್ದು ಈ ಹಣ ಬೇರೆ ಸ್ಥಳಗಳಿಂದ ಬರುವ ಕಲಾವಿದರ ದಾರಿ ವೆಚ್ಚಕ್ಕೇ ಸಾಕಾಗುತ್ತಿರಲಿಲ್ಲ. ಆದರೂ ಚೌಡಯ್ಯನವರ ಮೇಲಿನ ಗೌರವಾಭಿಮಾನಗಳಿಂದ ಕಲಾವಿದರು ಬೇರೆಡೆಗಳಲ್ಲಿ ತಮ್ಮ ಕಛೇರಿಗಳು ಪೂರ್ವನಿಯೋಜಿತವಾಗಿದ್ದರೂ ಅವನ್ನು ಬಿಟ್ಟು ಚೌಡಯ್ಯನವರ ಆಹ್ವಾನಕ್ಕೆ

ಓಗೊಡುತ್ತಿದ್ದರು. ದೈವಿಕ ಪರಿಸರದಲ್ಲಿ ನಡೆಯುತ್ತಿದ್ದ ತಮ್ಮ ಗುರುಗಳ ರಾಮಮಂದಿರದಲ್ಲಿನ ಕಛೇರಿಗಳು ರಸಿಕರಿಗೆ ಔತಣ ನೀಡಿದರೆ ವಿದ್ಯಾರ್ಥಿಗಳಿಗೆ ಕಲಿಯುವಲ್ಲಿ ಬಹಳ ಸಹಾಯಕವಾಗುತ್ತಿದ್ದುವು. ರಾಮನವಮಿ ಮುಂತಾದ ವಿಶೇಷ ಸಂದರ್ಭಗಳಲ್ಲೂ ಈ ರೀತಿಯ ವಿಶೇಷ ಕಛೇರಿಗಳು ನಡೆಯುತ್ತಿದ್ದುವು.

ಚೌಡಯ್ಯನವರು ತಮ್ಮ ಶಿಷ್ಯರನ್ನು ಸ್ವಂತ ಮಕ್ಕಳಂತೇ ಕಾಣುತ್ತಿದ್ದರು. ಹಬ್ಬಹರಿದಿನಗಳಲ್ಲಿ ವಿಶೇಷ ತಿಂಡಿಗಳನ್ನು ಮಾಡಿಸಿ ಶಿಷ್ಯರಿಗೆ ಉಣಬಡಿಸಿದ ನಂತರವೇ ಅವರು ಊಟಮಾಡುತ್ತಿದ್ದುದು. ಊಟದ ಸಮಯದಲ್ಲಿ ಅವರು ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ನಡೆದುಕೊಳ್ಳುತ್ತಿದ್ದರು. ಪ್ರೀತಿಯ ಈ ಹಿನ್ನೆಲೆ ವಿದ್ಯಾರ್ಥಿಗಳಿಗೆ ಗುರುಗಳಲ್ಲಿ ಹೆಚ್ಚಿನ ಗೌರವಾದರಗಳನ್ನು ಮೂಡಿಸುತ್ತಿತ್ತು.

ಚೌಡಯ್ಯನವರಲ್ಲಿ ಶಿಕ್ಷಣ ಪಡೆದು ಪ್ರಖ್ಯಾತರಾದವರೆಂದರೆ ಆರ್. ಕೆ. ವೆಂಕಟರಾಮಾಶಾಸ್ತ್ರಿ (ದಿ), ವಿ. ಸೇತುರಾಮಯ್ಯ (ದಿ), ಖಂಡದೇವಿ ಅಳಗಿರಿಸ್ವಾಮಿ, ಪಾಲ್ಘಾಟ್ ಸಿ. ಆರ್. ಮಣಿ ಅಯ್ಯರ್, ಹೆಚ್. ಎಸ್. ಅನುಸೂಯ, ಹೆಚ್. ಆರ್. ಸೀತಾರಾಮಶಾಸ್ತ್ರಿ (ದಿ) ಮೊದಲಾದವರು. ಇವರಲ್ಲಿ ಮೊದಲ ನಾಲ್ಕು ಮಂದಿ ಪಿಟೀಲು ವಾದನದಲ್ಲೂ, ಉಳಿದವರು ಗಾಯನದಲ್ಲೂ ಪ್ರಖ್ಯಾತರಾಗಿದ್ದಾರೆ.

ಬಹುಮುಖ ಪ್ರತಿಭೆಯ ಚೌಡಯ್ಯನವರು ಸಂಗೀತಕ್ಕೆ ಮಾಡಿದ ಇನ್ನಿತರ ಸೇವೆಗಳೆಂದರೆ ಕಲಾಶಾಲೆಯ ಸ್ಥಾಪನೆ ಮಾಡಿದುದು, ಹಾಗೂ ವಾಗ್ಗೇಯಕಾರರಾಗಿ ತಮ್ಮ ರಚನೆಗಳಿಂದ ಕೃತಿ ಭಂಡಾರವನ್ನು ಸಮೃದ್ಧ ಪಡಿಸಿದುದು. ಇವರು ೧೯೪೫ರಲ್ಲಿ ಬಿಡಾರ ಕೃಷ್ಣಪ್ಪನವರ ರಾಮಮಂದಿರದಲ್ಲಿ ಸಂಗೀತ ಕಲಾಶಾಲೆಯೊಂದನ್ನು ಸ್ಥಾಪಿಸಿದರು. ತಮ್ಮ ಇಷ್ಟ ದೈವ ಅಯ್ಯಪ್ಪನವರ ಹೆಸರನ್ನೇ ಬಳಸಿ ಸಂಸ್ಥೆಗೆ 'ಅಯ್ಯನಾರ್' ಕಲಾಶಾಲೆ ಎಂದು ಹೆಸರಿಟ್ಟರು. ಇದರಂತೆಯೇ ೧೯೫೩ರಲ್ಲಿ ಬೆಂಗಳೂರಿನಲ್ಲೂ ಇದೇ ಹೆಸರಿನಲ್ಲಿ ಕಲಾಶಾಲೆಯನ್ನು ಪ್ರಾರಂಭಿಸಲಾಯಿತು. ಈ ಕಲಾಶಾಲೆಗಳಲ್ಲಿ ಅನೇಕರಿಗೆ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಉದ್ಯೋಗಗಳು ದೊರಕಿದುವು. ಚೌಡಯ್ಯನವರು ತಾವು ಮೈಸೂರಿನಲ್ಲಿದ್ದ ಅವಧಿಯಲ್ಲಿ ಕಲಾಶಾಲೆಗೆ ಬಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಮೈಸೂರಿನ ಈ ಶಾಲೆಯಲ್ಲಿ ಉಪಪ್ರಾಂಶುಪಾಲರಾಗಿ ರಾಮರತ್ನಂ ನೇಮಕಗೊಂಡಿದ್ದರು. ಈ ಶಾಲೆಗಳಲ್ಲಿ ಇಂದಿಗೂ ನೂರಾರು ವಿದ್ಯಾರ್ಥಿಗಳು ಸಂಗೀತಾಭ್ಯಾಸ ಮಾಡುತ್ತಿದ್ದಾರೆ.

ಚೌಡಯ್ಯನವರು ವಾಗ್ಗೇಯಕಾರರಾಗಿ ಮೆರೆದುದು ತಮ್ಮ ಅರುವತ್ತು ವರ್ಷಗಳ ಸಂಗೀತಾನುಭವದ ಪರಿಪಕ್ವತೆಯನಂತರ. ಈ ವೇಳೆಗೆ ಅವರು ಸಂಗೀತ ರಚನೆಗಳ ನಿಯಮಗಳನ್ನು ಹಲವು ಭಾಷೆಗಳನ್ನೂ ಅರಿತಿದ್ದರು. ಅಂದಿನ ಕಾಲದಲ್ಲಿ ಪ್ರಖ್ಯಾತವಾಗಿದ್ದ ರಾಗಗಳನ್ನು ಮಾತ್ರ ಅವರು ತಮ್ಮ ರಚನೆಗಳಲ್ಲಿ ಉಪಯೋಗಿಸಿಕೊಂಡಿದ್ದರು. ಸ್ವಂತ ವಾಗ್ಗೇಯಕಾರರ ರಚನೆಗಳನ್ನಾಧರಿಸಿ ತಾವು ಕೈಗೊಂಡಿದ್ದ ಕೃತಿಗಳಿಗೆ ಸಾಹಿತ್ಯವನ್ನು ಅಳವಡಿಸುತ್ತಿದ್ದರು. ಭಾಷೆಯು ಸುಲಭವಾಗಿದ್ದು ಸಂಗೀತಾಂಶವು ಸುಂದರವಾಗಿರುವಂತೆ ಚೌಡಯ್ಯನವರೇ ಧಾತು ಮಾತುಗಳೆರಡನ್ನೂ ಕಲ್ಪಿಸಿ ಹಲವು ಕೃತಿ ಮತ್ತು ತಿಲ್ಲಾನಗಳನ್ನು ರಚಿಸಿದರು. ಇವರ ರಚನಾ ಭಂಡಾರದಲ್ಲಿ ವಿಜಯನಾಗರಿ, ಕುಂತಲವರಾಳಿ ಬಹುದಾರಿಯಂಥ ಅಪರೂಪ ರಾಗಗಳೂ, ತೋಡಿ, ಭೈರವಿಯಂಥ ಪ್ರಸಿದ್ಧ ರಾಗಗಳ ರಚನೆಗಳೂ ಅಳವಟ್ಟಿವೆ. ಕ್ಷೇತ್ರದೇವತಾ ಸ್ತುತಿಗಳೂ, ಈ ಸಮುದಾಯ ದಲ್ಲಿದೆ. ಇವುಗಳಲ್ಲದೆ ಅನೇಕ ದೇವಿಸ್ತುತಿಗಳನ್ನು ಇವರು "ತ್ರಿಮಕುಟ" ಎಂಬ ಅಂಕಿತದಿಂದ ರಚಿಸಿದ್ದಾರೆ. 'ನಾಟರಾಗದ ಧೀಂದಿರೆನ' ಎಂದು ಆರಂಭವಾಗುವ ಇವರ ತಿಲ್ಲಾನವೊಂದು ಪಂಚನಡೆಯಲ್ಲಿದೆ. ಬಹುತೇಕ ರಚನೆಗಳಲ್ಲಿ ಆದಿ, ರೂಪಕತಾಳಗಳನ್ನು ಬಳಸಿದ್ದಾರೆ.

ಹೀಗೆ ಹಲವು ಮುಖಗಳಲ್ಲಿ ಸೇವೆ ಸಲ್ಲಿಸಿದ ಚೌಡಯ್ಯನವರು ೧೯೬೭ ರಲ್ಲಿ ಶರೀರ ತ್ಯಾಗ ಮಾಡಿದರೂ ಅವರ ಅನುಪಮ ಸೇವೆಯಿಂದಾಗಿ ಸಂಗೀತ ಕ್ಷೇತ್ರದಲ್ಲಿ ಅವರು ಅಮರರಾಗಿಯೇ ಇದ್ದಾರೆ.

ಪ್ರೊ॥ ವಿ. ರಾಮರತ್ನಮ್

ಆಶೆಯು ಬಹು ವಿಚಿತ್ರವಾದ ಒಂದು ಕುದುರೆಯಂತಿದೆ. ಆಶೆಯಿಂದ ಬಂಧಿತರಾದವರು ಅದರ ಹಿಂದೆಯೇ ಬಿಡುವಿಲ್ಲದೇ ಜಾರುತ್ತಲಿರು ತ್ತಾರೆ. ಅವರು ಎಂದು ನಿರಾಶರಾಗಿ ಒಂದು ಕಡೆ ವಿಶ್ರಮಿಸುವರೋ ಅಂದೇ ಅವರಿಗೆ ಮುಕ್ತಿ.

—ಭರ್ತೃಹರಿ

ಹೊಸ ಯುಗಾದಿ

ಖಗೋಳಾಭ್ಯಾಸಿಗಳಿಗೆ ಒಂದು ಸಂಗತಿ ಗೊತ್ತಿದೆ: ಸೂರ್ಯ ತನ್ನ ವಾರ್ಷಿಕ ಪರ್ಯಟನೆಯಲ್ಲಿ ವಿಷುವದ್ವೃತ್ತವನ್ನು ದಕ್ಷಿಣದಿಂದ ಉತ್ತರಕ್ಕೆ ಹಾಯುವ ದಿನವೇ ಹೊಸ ವರ್ಷದ (ಪರ್ಯಟನೆಯ) ಆರಂಭ. ಮಾರ್ಚ್ ೨೧ರಂದು ಈ ಘಟನೆ ಸಂಭವಿಸುತ್ತದೆ. ಅಂದು ಹಗಲು ಮತ್ತು ಇರುಳು ಸಮ ಅವಧಿಯವು, ಸೂರ್ಯ ಪೂರ್ವ ಬಿಂದುವಿನಲ್ಲಿ ಮೂಡಿ ಪಶ್ಚಿಮ ಬಿಂದುವಿನಲ್ಲಿ ಕಂತುತ್ತದೆ. ಆ ದಿನದಿಂದ ಮುಂದಕ್ಕೆ (ಜೂನ್ ೨೨ರ ತನಕ) ಸೂರ್ಯನ ಮೂಡು-ಕಂತು ಬಿಂದುಗಳು ಉತ್ತರಾಭಿಮುಖವಾಗಿ ಸರಿಯುತ್ತವೆ, ಒಂದಿಗೇ ಹಗಲಿನ ಅವಧಿ ಏರುತ್ತ (ಅದ್ದರಿಂದ ಇರುಳಿನ ಅವಧಿ ಇಳಿಯುತ್ತ) ಹೋಗುತ್ತದೆ. ಇದು ಹೇಗೇ ಇರಲಿ, ಸಾಮಾನ್ಯ ಜನತೆಗೆ ಯುಗಾದಿ ಇರುಳಿನ ಮೇಲೆ ಹಗಲಿನ ವಿಜಯದ ಪ್ರತೀಕ, ಅದ್ದರಿಂದ ಸಂಭ್ರಮ ಪ್ರದರ್ಶನದ ಅವಕಾಶ—ಹಬ್ಬ, ನಿಸರ್ಗದ ಕಬ್ಬ!

೧೧–೪–೯೪ನೇ ಸೋಮವಾರ ಹೊಸ ಯುಗಾದಿ ಹಬ್ಬದ ದಿನ. ಅಂದು ಶ್ರೀಮುಖ ಸಂವತ್ಸರ ಮುಗಿದು ಮುಂದಿನ ಭಾವ ಸಂವತ್ಸರದ ಆರಂಭ. ಆ ದಿನ ಯುಗಾದಿ ಹಬ್ಬ ಆಚರಿಸುವ ಸಂಪ್ರದಾಯ.

ಇದಕ್ಕೆ ಮೊದಲು, ಶಿಶಿರ ಋತುವಿನ ಶೋಷಣೆಯಿಂದ ಪ್ರಕೃತಿ ಮಾತೆ ಬಾಡಿ ಬೋಳಾಗಿದ್ದಳು. ಈಗ, ನವವಸಂತನ ಆಗಮನದಿಂದ ಮಾತೆಯ ಮುಖ ಹಸಿರು ಕೆಂಪಾಗಿ ಕಂಗೊಳಿಸುತ್ತಿದೆ. ಎಲ್ಲೆಲ್ಲೂ ಹರುಷ ತುಂಬುತ್ತಿದೆ. ಈ ಸುಂದರ ಸಂದರ್ಭವನ್ನು ಕವಿವರ ಬೇಂದ್ರೆಯವರು ಹೀಗೆ ಬಣ್ಣಿಸಿದ್ದಾರೆ.

> **'ಯುಗಯುಗಾದಿ ಕಳೆದರೂ, ಯುಗಾದಿ ಮರಳಿ ಬರುತಿದೆ;**
> **ಹೊಸ ವರುಷಕೆ ಹೊಸತನವ, ಹೊಸತು ಹೊಸತು ತರುತಿದೆ.'**

ಆತ್ಮಾವಲೋಕನ: ಈ ಹೊಸ ವರ್ಷದ ಯುಗಾದಿಯಂದು ನಾವು ಆತ್ಮಾವಲೋಕನ ಮಾಡಿಕೊಳ್ಳುವ ದಿನ. ದೊಡ್ಡ ದೊಡ್ಡ ಉದ್ಯೋಗಪತಿಗಳು ಹೊಸ ಹಣಕಾಸು ವರ್ಷಾರಂಭದ ಈ ದಿನ, ತಮ್ಮ ಸಂಸ್ಥೆಯ ಲಾಭ ನಷ್ಟ ಪಟ್ಟಿಯನ್ನು ಅಥವಾ ಬ್ಯಾಲೆನ್ಸ್‌ಶೀಟನ್ನು ತಯಾರಿಸಿ ಪರಿಶೀಲಿಸುತ್ತಾರೆ. ಕಳೆದ ವರ್ಷ ಏನೆಲ್ಲ ಲಾಭ ದೊರಕಿತು? ಯಾವ ವಿಚಾರದಲ್ಲಿ ನಷ್ಟ ಬಂತು? ಎಂದು ವಿಮರ್ಶಿಸಿ, ಹೊಸ ವರ್ಷದಲ್ಲಿ ಲಾಭವನ್ನು ಹಿಗ್ಗಿಸಿ, ನಷ್ಟ ಕುಗ್ಗಿಸುವುದಕ್ಕೆ ಯೋಜನೆ ಹಾಕಿಕೊಳ್ಳುತ್ತಾರೆ.

ಅದೇತರ, ಇಂದು ನಾವು ಸಹ ವೈಯಕ್ತಿಕ ಲಾಭ-ನಷ್ಟ ಪಟ್ಟಿಯನ್ನು ನೋಡಿಕೊಳ್ಳುವ ದಿನ. ತಾನು ವೈಯಕ್ತಿಕವಾಗಿ ಮತ್ತು ಸಮಾಜಕ್ಕಾಗಿ ಎಷ್ಟು ಒಳ್ಳೆಯ ಕೆಲಸ ಮಾಡಿದೆ? ಯಾವ ಕೆಟ್ಟ ಕೆಲಸ ನಡೆದುಹೋಗಿತ್ತು? ಎಂದು ಪರಿಶೀಲಿಸಿಕೊಳ್ಳಬೇಕು. ನಂತರ, ಕಳೆದ ವರ್ಷ ನಡೆಸಿದ ಒಳ್ಳೆಯ ಕೆಲಸಗಳನ್ನು ಹೆಚ್ಚಿಸುವ ಮತ್ತು ಪಾಪ ಕಾರ್ಯಗಳನ್ನು ಕುಗ್ಗಿಸುವ ದೃಢ ನಿರ್ಧಾರಕ್ಕೆ ಬರಬೇಕು. ಹಣಕಾಸಿನ ವ್ಯವಸ್ಥೆಯಲ್ಲಿ ಸಹ ಮುಂದಿನ ವರ್ಷ ಲಾಭ ಹೆಚ್ಚಿಸಿ, ನಷ್ಟ ಕಡಿಮೆಗೊಳಿಸಿ, ನೆಮ್ಮದಿಯ ಜೀವನ ನಡೆಸಬೇಕೆಂದು ಯೋಚಿಸುವ ದಿನ-ಇಂದು.

ಯುಗಾದಿಯಂದು ದೇವರನ್ನು ವಂದಿಸಿ ಬೇವು-ಬೆಲ್ಲ ತಿನ್ನುವ ಸಂಪ್ರದಾಯ ಇದೆ. ಅಂದರೆ–ಮುಂದಿನ ವರ್ಷ ಹೆಚ್ಚಿನ ಸಿಹಿ ಸಿಗಲಿ; ಕಹಿ ಕಡಿಮೆಯಾಗಲಿ. ಅದರೊಡನೆ ಸಿಹಿ–ಕಹಿಗಳನ್ನು ಅನುಭವಿಸಲು ಸಾಕಷ್ಟು ಶಕ್ತಿ ಸಾಮರ್ಥ್ಯ ಒದಗಲಿ ಎಂದು ದೇವರನ್ನು ಬೇಡುವುದು ಇದರ ಉದ್ದೇಶ.

ನಮ್ಮ ದೇಶದ, ಇನ್ನು ಕೆಲವೆಡೆ ಯುಗಾದಿಯಂದು ಬೆಳಗ್ಗೆದ್ದು ದೇವರನ್ನು ವಂದಿಸಬೇಕು; ಅನಂತರ ದರ್ಪಣ ದರ್ಶನ, ಅಂದರೆ–ಕನ್ನಡಿಯಲ್ಲಿ ಸ್ವ–ರೂಪವನ್ನು ನೋಡಿಕೊಳ್ಳಬೇಕು ಎಂಬ ಸಂಪ್ರದಾಯ ಇದೆ. ಅದರ ಉದ್ದೇಶ–ತನಗೆ ಮೂವತ್ತೋ ನಲವತ್ತೋ ವರ್ಷ ವಯಸ್ಸಾಯಿತು. ತಲೆ ಕೂದಲು ಬಿಳಿಯೋ ಬೋಳೋ ಆಗಿದೆ. ಈ ತನಕ ತಾನೇನು ಸಾಧಿಸಿದೆ? ಹೊಸ ವರ್ಷ ಯಾವ ಸತ್ಕಾರ್ಯ ಮಾಡಬೇಕು? ಯಾವದು ದುರಭ್ಯಾಸ ಬಿಡಬೇಕು? ಇವನ್ನೆಲ್ಲ ನಿರ್ಧರಿಸಿ ದೇವರ ಮುಂದೆ ಅದರಂತೆ ನಡೆಯಬೇಕೆಂಬ ಪ್ರತಿಜ್ಞೆ ಮಾಡಬೇಕು. ಅದೇ ದರ್ಪಣದರ್ಶನದ ಉದ್ದೇಶ.

ಮುಂದೆ ಮಾಡಬೇಕಾದ ಸತ್ಕಾರ್ಯ ಯಾವುದು? ಇದರ ಸಾರಾಂಶವನ್ನು ಭಗವದ್ಗೀತೆಯಲ್ಲಿ ಹೀಗೆ ಸಾರಿದ್ದಾರೆ. 'ಸಂತೋಷಂ ಜನಯೇತ್ ಪ್ರಾಜ್ಞಃ' ಅಂದರೆ ಸುಸಂಸ್ಕೃತನು ಇತರರಿಗೆ ಸಂತೋಷವನ್ನುಂಟುಮಾಡಬೇಕು. ಅದೇ ಭಗವಂತನ ಆರಾಧನೆ. ತನಗೆ, ತನ್ನ ಬಂಧು ಮಿತ್ರರಿಗೆ ಮತ್ತು ಸಮಾಜಕ್ಕೆ ಹಿತವಾದ ಕಾರ್ಯವನ್ನು ನಡೆಸಿ ಸಂತಸ ಮೂಡಿಸಬೇಕು. ದ್ವೇಷಾಸೂಯೆಗಳಿಗೆ ಒಳಗಾಗಿ ಪರರನ್ನು ಕೆಡಿಸಬಾರದು–ಎಂದಿದ್ದಾರೆ. ಅದನ್ನೇ–ಪರೋಪಕಾರ ಪುಣ್ಯ; ಪರಪೀಡನ ಪಾಪ–ಎಂದು ಹೇಳಿದ್ದಾರೆ. ಇವನ್ನೆಲ್ಲ ಅರಿತುಕೊಂಡು ಸಹನೆ ಶಾಂತಿಗಳನ್ನು ಪಾಲಿಸಿದಾಗ ಸಮಸ್ತ ಜನರೂ ಸುಖಿಗಳಾಗುತ್ತಾರೆ. ಹಾಗೆ ಆಗಲೆಂದು ಇಂದು ನಾವೆಲ್ಲ ಹಾರೈಸುವಾ.

ವಸಂತನ ಸೊಬಗು: ಯುಗಾದಿಯಿಂದಾರಂಭಿಸಿ ಎರಡು ತಿಂಗಳು ವಸಂತ ಋತು. ಈ ಸಮಯ ಬಹು ಸುಂದರ. ವಸಂತನ ಸೊಬಗನ್ನು ಕವಿಗಳೆಲ್ಲ ಬಾಯ್ತುಂಬ ಹೊಗಳಿದ್ದಾರೆ. ಆದಿಕವಿ ಕಾಳಿದಾಸ, ಈ ವಸಂತ-ಅತಿಮನೋಹರ ವಾಗಿದೆ ಎಂದಿದ್ದಾನೆ:

'ಕುಸುಮಭರಿತ ತರುಗಳಿಂದ, ಕಮಲವನದ ಕೊಳಗಳಿಂದ
ತಂಪುಸೂಸುವೆಲರಿನಿಂದ, ಸೊಬಗುಪಡೆದ ಸಂಜೆಯಿಂದ,
ರಮ್ಯವಾದ ದಿನಗಳಿಂದ, ರಾಗಭರಿತ ವಧುಗಳಿಂದ
ಸಂತಸವನೀವ ಈ ವಸಂತ, ಅತಿ ಮನೋಜ್ಞವಾಗಿದೆ'

ಇದು ಕನ್ನಡ ಕಾಳಿದಾಸ ಎಸ್. ವಿ. ಪರಮೇಶ್ವರಭಟ್ಟರ ಸರಳ ಭಾಷಾಂತರ. ಇದನ್ನೇ ಕವಿ ಕುಲಪತಿ ಬಿ. ಎಂ. ಶ್ರೀಕಂಠಯ್ಯನವರು :

'ವಸಂತ ಬಂದ, ಋತುಗಳ ರಾಜ ತಾ ಬಂದ
ಚಿಗುರನು ತಂದ, ಹೆಣ್ಗಳ ಕುಣಿಸುತ ಬಂದ
ಚಳಿಯನು ಕೊಂದ, ಹಕ್ಕಿಗಳುಲಿಗಳೆ ಚಂದ
ಕೂವೂ ಜಗ್, ಜಗ್, ಟುವ್ವೀ ಟುವ್ವೀ'

ಹೀಗೆ ವಸಂತ ಸಮಯದ ವೈಭವವನ್ನು ಕವಿಗಳೆಲ್ಲ ಹಾಡಿ ಹೊಗಳಿದ್ದಾರೆ. ಆದರೆ, ಇಂತಹ ಮನೋಹರ ಪರಿಸರ ನೋಡಿ, ಸುಂದರ ಸಂಜೆಯ ಸೊಬಗನು ಕಂಡು ಆನಂದಿಸುವುದಕ್ಕೆ ನಮ್ಮ ಮನಸ್ಸೂ ತಯಾರಿರಬೇಕು. ಕೋಗಿಲೆಯ ಕುಹೂ ನಾದ ಕೇಳಿ, ಬಣ್ಣ ಬಣ್ಣದ ಹೂಗಳ ಸುವಾಸನೆಯನ್ನು ಆಸ್ವಾದಿಸಿ ಸಂತಸಪಡಲಿಕ್ಕೆ ಹೃದಯವಂತಿಕೆಯನ್ನು ಬೆಳೆಸಿಕೊಂಡಿರಬೇಕು. ಕಿರಿಯರಿಗೆ, ಕೆಲವೇಳೆ ಹಿರಿಯರಿಗೂ, ಅಂದಚೆಂದಗಳನ್ನು ಮೆಚ್ಚಿ ಆನಂದಿಸಲು ತರಬೇತಿ ನೀಡಬೇಕು. ಇಲ್ಲವಾದರೆ ಇವೆಲ್ಲ 'ಕೋಣನ ಮುಂದೆ ಕಿನ್ನರಿ ಬಾರಿಸಿದಂತಾಗ ಬಹುದು. ಜೀವನ ನೀರಸವಾಗಬಹುದು.

ಇದನ್ನೇ ರಾಷ್ಟ್ರಕವಿ ಕುವೆಂಪು ಅವರು 'ಲೋಕದಲಿ ದುಃಖವಿರೆ ಆ ದುಃಖ ದೊಳಗರ್ಧ-ಹೃದಯ ದಾರಿದ್ರ್ಯದಿಂ ಬಂದಿಹುದು' ಎಂದಿದ್ದಾರೆ.

ಹೃದಯದ ಬಡತನಕ್ಕಿಂತ ಭಯಂಕರವಾದ ಬಡತನ ಇಲ್ಲ. ಹಣಕಾಸಿನ ಬಡತನವನ್ನು ಅವರಿವರ ಕಾಲು ಕಟ್ಟಿ ಪರಿಹರಿಸಿಕೊಳ್ಳಬಹುದು. ಅಮೆರಿಕಾ ದಿಂದಲೋ, ಜಪಾನಿಂದಲೋ ಬಂಗಾರ ಬೇಡಿತಂದು ನಗರ ಶೃಂಗಾರ ಮಾಡಿ ಕೊಳ್ಳಬಹುದು. ಆದರೆ ಹೃದಯದ ಬಡಿತಕ್ಕೆ ಮದ್ದನ್ನು ಎಲ್ಲಿಂದ ತರಬೇಕು?

'ಕಾವ್ಯದಾಸ್ವಾದನೆಗೆ, ಸೌಂದರ್ಯ ಸಾಧನೆಗೆ, ಕಲೆಯ ಆರಾಧನೆಗೆ,
ಮಾನವನೀಯುವ ಪುಣ್ಯಸ್ವರ್ಗ ಎಂದು ಬರುವುದೋ ಕಾಣೆ'

ಎಂದಿದ್ದಾರೆ ಕುವೆಂಪು.

ಇವನ್ನೆಲ್ಲ ಅರ್ಥಮಾಡಿಕೊಂಡರೆ, ಸೌಂದರ್ಯಾರಾಧನೆಯ ಆಸಕ್ತಿ ಮೂಡಿ ಬರುತ್ತದೆ. ಆಗ ಜನರು ಮನೆ ಮುಂದೆ ಗಿಡ ಮರಗಳನ್ನು ಬೆಳೆಸಿ, ತಂಪಾದ ಗಾಳಿಗೆ ಮೈಯೊಡ್ಡಿ, ಸಂತಸ ಪಡುತ್ತಾರೆ. ಬಣ್ಣ ಬಣ್ಣದ ಹೂಗಳು ಮೂಡಿ ಅರಳುವ ಗಿಡ ಬಳ್ಳಿಗಳನ್ನು ಬೆಳೆಸಿ, ನೋಡಿ ಆನಂದಿಸುತ್ತಾರೆ. ಅರಳಿದ ಹೂಗಳಲ್ಲಿ ಕೆಲವನ್ನು ದೇವರಿಗೆ ಸಮರ್ಪಿಸಿ, ಲಲನೆಯರು ತಲೆಗೆ ಮುಡಿದು ಹಿಗ್ಗುತ್ತಾರೆ. ಆನುಷಂಗಿಕವಾಗಿ ಮಾನವನ ಸುಖಜೀವನಕ್ಕೆ ಅಗತ್ಯವಾದ ಆಮ್ಲಜನಕವನ್ನು ಸೇವಿಸಿ ಗಟ್ಟಿಮುಟ್ಟಾಗಿರುತ್ತಾರೆ.

ಹೀಗೆ ಸುತ್ತಣ ಪರಿಸರಕ್ಕೆ ಸ್ಪಂದಿಸುವ ಸಹೃದಯತೆಯನ್ನೂ ನಾವು ಬೆಳೆಸಿಕೊಳ್ಳಬೇಕು. 'ಅದುವೆ ಸ್ವರ್ಗ ; ಇಲ್ಲವಾದರೆ ಇದುವೆ ನರಕ' ಆಗಬಹುದು.

ಆ ಕಾರಣ—ಇಲ್ಲೇ ಸುಲಭ ಲಭ್ಯ ಸ್ವರ್ಗಸುಖವನ್ನು ನಾವೇಕೆ ಭೋಗಿಸಬಾರದು ?

ಪ್ರೊ॥ ಕೆ. ರಾಮಕೃಷ್ಣ ಉಡುಪ



ಜ್ಞಾನವೇ ಶಕ್ತಿ, ಶಕ್ತಿಯೇ ಜೀವನ, ಅಜ್ಞಾನವೇ ದೌರ್ಬಲ್ಯ, ದೌರ್ಬಲ್ಯವೇ ಮರಣ.

—ರಮಣ ಮಹರ್ಷಿ

ನಿಮ್ಮ ಹೊಸ ವರ್ಷದ ಸಂಕಲ್ಪಗಳು ನಿಲ್ಲಬೇಕೆ ?

ಅವರಿವರ ನಂಬುಗೆಯ ಮಳಲ ರಾಶಿಯ ಮೇಲೆ ನಿಮ್ಮ ಬಾಳ ಕನಸಿನರಮನೆ ಕಟ್ಟದಿರಿ. ನಿಮ್ಮ ದೇಹ, ಮನಸ್ಸು, ಪರಿಸರ ಇವನ್ನು ಪರಿಗಣಿಸಿ ಹೇಗೆ ನಿಮ್ಮ ಬದುಕನ್ನು ಉತ್ತಮೀಕರಿಸಬಹುದೆಂಬುದನ್ನು ವ್ಯವಹಾರಿಕವಾಗಿ ಚಿಂತಿಸಿ ನಿಮ್ಮ ಯೋಜನೆಗಳನ್ನು ಕ್ರಮಶಃ ಕಾರ್ಯರೂಪಕ್ಕಿಳಿಸಿ. ಗೊಮ್ಮಟನ ಶಿಲ್ಪ ಶೂನ್ಯದಿಂದ ಏಳಲಿಲ್ಲ, ದಿಢೀರನೆಯೂ ವ್ಯಕ್ತಪಡೆಯಲಿಲ್ಲ.

ಹೊಸ ವರ್ಷ ಹತ್ತಿರವಾಗುತ್ತಿರುವಂತೆ ಒಂದು ವಿಶೇಷಸಿದ್ಧತೆ ಪ್ರಾರಂಭವಾಗುತ್ತದೆ. ಅದು, ನೀವು ಪ್ರಮಾಣ ಸ್ವೀಕರಿಸಿದಾಗ :....ಮಿತಾಹಾರಕ್ಕಾಗಲೀ, ಧೂಮಪಾನ ನಿಲ್ಲಿಸಲಾಗಲೀ ಅಥವಾ ವ್ಯಾಯಾಮ ಮಾಡುವುದಕ್ಕಾಗಲೀ ಇರಬಹುದು.

ನೀವು ಇದಕ್ಕೂ ಮುಂಚೆ ಖಂಡಿತವಾಗಿ ಪ್ರಯತ್ನಿಸಿದ್ದೀರಿ. ಅತ್ಯಂತ ಪ್ರಾಮಾಣಿಕ ಉದ್ದೇಶಗಳಿದ್ದಾಗ್ಯೂ ನಿಮ್ಮ ಸಂಕಲ್ಪಗಳು ಶಿಶಿರ ಋತುವಿನ ಹಿಮಕ್ಕಿಂತ ಬೇಗ ಕರಗಿಹೋಗಿವೆ. ಹಾಗಾದರೆ ಈ ಹೊಸ ವರ್ಷದ ಪ್ರಮಾಣ ಸ್ವೀಕಾರ ಪದ್ಧತಿ ಮೂರ್ಖತೆಯೇ? 'ಖಂಡಿತಾ ಇಲ್ಲ' ಎನ್ನುತ್ತಾರೆ ಬಲ್ಲವರು. "ಬದಲಾಗಲು ಬಿಲ್ಲೆದೆಬೇಕು. ಹೊಸ ವರ್ಷದ ಈ ಮಾನಸಿಕ ಪರಿಣಾಮ ನಮ್ಮ ಈ ಯತ್ನಕ್ಕೆ ಸ್ಫೂರ್ತಿ ನೀಡಬಹುದು" ಎನ್ನುತ್ತಾರೆ ನಡವಳಿಕೆಯ ಸಂಶೋಧಕ ಜೇಮ್ಸ್ ಪ್ರೊಚಸ್ಕ.

ಸರಿಯಾದ ಯೋಚನೆ ಹಾಗೂ ಯೋಜನೆಗಳಿಲ್ಲದ ಕಾರಣ ಮುಕ್ಕಾಲು ನಿರ್ಧಾರಗಳು ಸೋಲುವ ಸಂಭವವಿದೆ. ಈ ರೀತಿಯ ಸೋಲು, ನಿರ್ಧಾರವನ್ನೇ ತೆಗೆದುಕೊಳ್ಳದಿರುವುದಕ್ಕಿಂತ ಕೇಡು ಎನ್ನುತ್ತಾರೆ ಮನಶ್ಶಾಸ್ತ್ರದ ಪ್ರೊ|| ಜಿ. ಆ್ಯಲನ್ ಮಾರ್ಲಟ್. "ಹಿಂಜರಿಯುವಾತ ಈ ರೀತಿಯ ಸೋಲುಗಳಿಂದ ಬದಲಾಗುವ ಪ್ರಯತ್ನವನ್ನೇ ಬಿಟ್ಟುಬಿಡುತ್ತಾನೆ" ಎನ್ನುತ್ತಾರೆ ಅವರು.

ಪ್ರತಿಕೂಲವಾಗಿ, ಹೊಸ ವರ್ಷದ ನಿರ್ಧಾರಗಳನ್ನು ಕೈಗೊಳ್ಳುವುದರಿಂದ 'ನನ್ನಿಂದ ಇದು ಸಾಧ್ಯ' ಎನ್ನುವ ಹರ್ಷ ಮನೋಭಾವ ಉಂಟಾಗುತ್ತದೆ. ಈ ನಿರ್ಣಯಗಳು ಶಾಶ್ವತವಾಗಿ ನಿಲ್ಲಲು ನುರಿತವರು ನೀಡಿರುವ ಸಲಹೆಗಳಿವು :

೧೯೯೪ರ ಜನವರಿ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಎಡ್ವಿನ್ ಕೈಸ್ಟರ್ ಮತ್ತು ಸ್ಯಾಲಿ ವ್ಯಾಲಂಟೀಸ್ ಹೈಸ್ಟರ್ ಅವರುಗಳ "ಮೇಕ್ ಯುವರ್ ನ್ಯೂ ಇಯರ್ಸ್ ರೆಸೆಲ್ಯೂಷನ್ಸ್ ಸ್ಟಿಕ್" ಲೇಖನದ ಅನುವಾದ.

ಯೋಜನೆ ಹಾಕಿ: "ಸಾಮಾನ್ಯವಾಗಿ, ನಡೆಸುವ ಬಗೆ ಹೇಗೆಂಬುದನ್ನೇ ಯೋಚಿಸದೆ, ಒಂದು ಕ್ಷಣದಲ್ಲಿ ಸಂಕಲ್ಪಗಳನ್ನು ತೆಗೆದುಕೊಳ್ಳುವ ಜನರೇ ಹೆಚ್ಚು" ಎನ್ನುತ್ತಾರೆ ಮಾರ್ಲೆಟ್. ವರ್ಷದ ಕಡೆಯ ಎರಡು ವಾರಗಳು, ನೀವು ಬದಲಿಸಿಕೊಳ್ಳಬೇಕೆಂದಿರುವ ಚಾಳಿಯೊಂದನ್ನು ಗುರುತಿಸಿ, ಹಾಗೆ ಬದಲಿಸಿಕೊಳ್ಳುವುದರಿಂದ ಆಗುವ ಲಾಭ-ನಷ್ಟಗಳನ್ನು ಪಟ್ಟಿಮಾಡಿ. ಉದಾಹರಣೆಗೆ ಮಿತಾಹಾರ ಸೇವನೆಯಿಂದ, ನೀವು ಸುಂದರವಾಗಿ ಆರೋಗ್ಯವಾಗಿ ಕಾಣುವ ಲಾಭವಿದೆ. ಅಂತೆಯೇ ಮತ್ತೊಬ್ಬರು ಸಿಹಿಯನ್ನು ತಿನ್ನುವುದನ್ನು ನೀವು ನೋಡುವಾಗ ನಿಮ್ಮ ಮನಸ್ಸಿಗೆ ಚಿತ್ರಹಿಂಸೆಯಾಗಬಹುದು. ನಿಮಗಾಗುವ ಲಾಭಗಳು, ನಿಮ್ಮ ನಷ್ಟಗಳನ್ನು ಬದಿಗೊತ್ತುವಷ್ಟು ಶಕ್ತಿಶಾಲಿಯೇ ಎಂದು ಯೋಚಿಸಿ. ಹಾಗಿಲ್ಲವಾದಲ್ಲಿ ನಿಮ್ಮ ಸಂಕಲ್ಪವನ್ನು ಇನ್ನಷ್ಟು ಕಾಲ ತಳ್ಳಿಹಾಕುವುದೇ ಒಳ್ಳೆಯದು.

ನಿಮ್ಮ ಸಂಕಲ್ಪವನ್ನು ನೀವು ಆರಿಸಿ, ತೆಗೆದುಕೊಳ್ಳುವುದೆಂದೇ ನಿರ್ಧರಿಸಿದ ಮೇಲೆ ಅವನ್ನು ಬರೆದಿಡಿ. ಹಾಗೆ ಬರೆಯಲು ಪದಗಳನ್ನು ಆರಿಸುವಾಗ, ನೀವು ನಿಮ್ಮ ನಿರ್ಧಾರದ ಬಗ್ಗೆ ಹೆಚ್ಚು ಚಿಂತಿಸುವಿರಿ—ಹಾಗೂ ಅದನ್ನು ಜಾರಿಗೆ ತರುವ ಬಗ್ಗೆ ನಿಖರವಾಗಿ ಯೋಚಿಸುವಿರಿ.

ನೈಜ ಗುರಿಗಳನ್ನು ಇಡು: ಮಾರ್ಲೆಟ್ ಕಾಲೇಜಿನ ವಿದ್ಯಾರ್ಥಿಗಳಿಗೆ ತಮ್ಮ ಸಂಕಲ್ಪವನ್ನು ಬರೆದಿಡುವಂತೆ ಹೇಳಿದಾಗ, ಒಬ್ಬೊಬ್ಬರೂ ಮೂರೋ, ನಾಲ್ಕೋ ಬರೆದಿದ್ದರಂತೆ. ತಾವು ಧೂಮಪಾನ ಬಿಡುವುದಾಗಿಯೂ, ದೇಹದ ತೂಕ ಕಡಿಮೆ ಮಾಡುವುದಾಗಿಯೂ, ತಂದೆ-ತಾಯಿಯರಿಗೆ ವಿಧೇಯವಾಗಿರುವುದಾಗಿಯೂ—ಎಲ್ಲ ಸಂಕಲ್ಪಗಳನ್ನು ಒಟ್ಟಿಗೆ ತೆಗೆದುಕೊಂಡಿದ್ದರು. ಮುಂದೆ, ಅದೇ ವಿದ್ಯಾರ್ಥಿಗಳನ್ನು ಪರೀಕ್ಷಿಸಿದಾಗ, ಒಂದಕ್ಕಿಂತ ಹೆಚ್ಚು ನಿರ್ಧಾರಗಳನ್ನು ತೆಗೆದುಕೊಂಡವರು, ಅವನ್ನು ಜಾರಿಗೆ ತರುವುದರಲ್ಲಿ ಹೆಚ್ಚು ಹೆಚ್ಚಾಗಿ ಸೋತಿದ್ದರು. "ಸಂಪೂರ್ಣವಾಗಿ ಹೊಸ ಪುಟವನ್ನು ತಿರುವುತ್ತೇನೆ" ಎನ್ನುವುದು ಆತ್ಮವಂಚನೆ ಎನ್ನುತ್ತಾರೆ ಮಾರ್ಲೆಟ್. ಯಾವುದಾದರೂ ಒಂದು ಗುರಿಯತ್ತ ಕೇಂದ್ರೀಕರಿಸಿ, ಅದನ್ನು ಏಕಾಗ್ರತೆಯಿಂದ ಸಾಧಿಸುವುದು ಉತ್ತಮ.

ಮಾರ್ಷಲ್ ಲಂಸ್ಡನ್ ಒಬ್ಬ ಬರಹಗಾರ ಹಾಗೂ ಸುದ್ದಿ ಸಂಪಾದಕ. ಅವನಿಗೆ ತಿರುಗಾಟ ಬಹಳ ಇಷ್ಟ. ಅವನು ಪರ ಭಾಷೆಯನ್ನು ಕಲಿಯಲು ನಿರ್ಧರಿಸಿದ. ಎರಡು ಬಾರಿ ಫ್ರೆಂಚ್ ತರಗತಿಗಳಿಗೆ ನೋಂದಾಯಿಸಿಕೊಂಡರೂ, ಕಾಲದ ಅಭಾವದಿಂದ ಹೋಗಲಿಲ್ಲ. ಕಡೆಗೆ ಫ್ರೆಂಚ್ ಪಾಠಗಳನ್ನು ರೆಕಾರ್ಡ್-

ಮಾಡಿಕೊಂಡು, ತನ್ನ ಕಾರಿನಲ್ಲಿರುವಾಗಲೇ ಹಾಕಿ ಕಲಿತು, ಪ್ಯಾರಿಸ್‌ಗೆ ಒಂದು ಯಾತ್ರೆಯನ್ನೂ ಮಾಡಿ ಬಂದ. ಇದು ಗುರಿ ಸಾಧನೆಯ ಉತ್ತಮ ವಿಧಾನ.

ಮಾರ್ಗ ನಿರ್ದಿಷ್ಟವಾಗಿರಲಿ: ಅನೇಕ ಬಾರಿ, ಗುರಿಗಳು ತುಂಬ ಕ್ಲಿಷ್ಟ ರೂಪದಲ್ಲಿ ಹೇಳಲ್ಪಡುತ್ತವೆ. ಉದಾಹರಣೆಗೆ "ನಾನು ಒಳ್ಳೆಯವನಾಗಲು ನಿರ್ಧರಿಸಿದ್ದೇನೆ" ಅಥವಾ "ನನ್ನ ಮನಸ್ಸನ್ನು ತಿದ್ದಿಕೊಳ್ಳುತ್ತೇನೆ" ಎಂದು. ಈ ನಿರ್ಧಾರಗಳು ಇನ್ನೂ ಪರಿಣಾಮಕಾರಿಯಾಗಲು ನೀವು ಅವನ್ನು ಇನ್ನೂ ಸರಳವಾಗಿ ಸ್ಪಷ್ಟಪಡಿಸಿ. ನೀವೇನು ಮಾಡಬೇಕೆಂದಿರುವಿರೋ ಅದನ್ನೇ ನಿರ್ದಿಷ್ಟವಾಗಿ ಹೇಳಿ "ನಾನು ಸ್ನೇಹಶಾಲಿಯಾಗಬಯಸುತ್ತೇನೆ" ಎನ್ನುವ ಬದಲು" ಪ್ರತಿದಿನ ನನ್ನ ಸಹೋದ್ಯೋಗಿಗಳಿಗೆ 'ಗುಡ್‌ಮಾರ್ನಿಂಗ್ ಹೇಳುತ್ತೇನೆ' ಎನ್ನುವುದು ಹೆಚ್ಚು ಯುಕ್ತ. ಇದರಿಂದ ನಿಮ್ಮ ಪ್ರಗತಿಯನ್ನು ನೀವೇ ಅಳೆಯಬಹುದು.

'ನೀವೇನು' ಮಾಡಬೇಕೆಂದಿರುವಿರಿ ಎನ್ನುವುದರ ಜೊತೆಗೆ 'ಏಕೆ', 'ಹೇಗೆ' ಮಾಡುತ್ತೀರಿ ಎನ್ನುವುದೂ ಮುಖ್ಯ—ಉದಾಹರಣೆಗೆ "ನಾನು ಸಾಲ ಮಾಡುವುದಿಲ್ಲ" ಎಂದು ನೀವು ನಿರ್ಧರಿಸಿದ್ದರೆ ಅದಕ್ಕೆ ಮುಖ್ಯ ಕಾರಣ ನೀವೊಂದು ಮನೆಯನ್ನು ಕೊಂಡುಕೊಳ್ಳುವ ಯೋಜನೆ ಇಟ್ಟುಕೊಂಡಿರಬಹುದು. ಅದನ್ನು ಹೇಗೆ ಮಾಡುತ್ತೀರಿ ಎನ್ನುವುದು ಯೋಚಿಸತಕ್ಕದ್ದು. ಉಳಿತಾಯ ಯೋಜನೆಯಿಂದಲೋ, ಹೆಚ್ಚು ಸಂಬಳ ಬರುವ ಉದ್ಯೋಗದಿಂದಲೋ ಎಂದೂ ಮೊದಲೇ ನಿರ್ಧರಿಸಿಕೊಳ್ಳಿ.

ನಿಮ್ಮನ್ನು ಮೊದಲು ಮೆಚ್ಚಿಸಿಕೊಳ್ಳಿ : ಸೂಸನ್ ಕರಿ ಎನ್ನುವ ಆರೋಗ್ಯ ಶಾಸ್ತ್ರಜ್ಞೆ ಧೂಮಪಾನ ನಿಲ್ಲಿಸಿದವರನ್ನು ಎರಡು ಗುಂಪಾಗಿ ವಿಂಗಡಿಸಿದಳು. ೧) ತಮ್ಮದೇ ಕಾರಣಗಳಿಗಾಗಿ ಬಿಟ್ಟವರು. ೨) ಗೊಣಗುವ ಹೆಂಡತಿಯೋ ಅಥವಾ ಇತರೇ ಹೊರಗಿನವರ ಒತ್ತಾಯಕ್ಕಾಗಿ ಬಿಟ್ಟವರು. ಸ್ವಂತ ಸ್ಫೂರ್ತಿಯಿಂದ ಬಿಟ್ಟವರು ಮಿಕ್ಕವರಿಗಿಂತ ಹೆಚ್ಚು ಸಾಧಿಸಿದ್ದು ಅಚ್ಚರಿಯೇನಿಲ್ಲ.

ಈ ತತ್ವ ಎಲ್ಲ ಕಡೆ ಪ್ರಭಾವ ಬೀರುತ್ತದೆ ಎನ್ನುತ್ತಾಳೆ ಕರಿ. ತಂದೆ-ತಾಯಿಯರ ಒತ್ತಡದಿಂದ ಚೆನ್ನಾಗಿ ಓದಬೇಕೆಂದು ನಿರ್ಧರಿಸಿದ ಹುಡುಗ, ಕಡಿಮೆ ಅಂಕಗಳನ್ನು ತೆಗೆದುಕೊಳ್ಳುತ್ತಲೇ ಇದ್ದ. ಆದರೆ ತಾನೇ ಚೆನ್ನಾಗಿ

ಓದಬೇಕೆಂದು ಅವನು ನಿರ್ಧರಿಸಿದಾಗ ಇನ್ನೂ ಹೆಚ್ಚಿನ ಅಂಕಗಳನ್ನು ತೆಗೆದುಕೊಂಡ. ಹಲವೊಮ್ಮೆ ನೀವು ಎಷ್ಟು ಹೇಳಿದರೂ ನಿಮ್ಮವರು ಧೂಮಪಾನ ನಿಲ್ಲಿಸದೇ ಹೋದರೆ ನೀವು ಹೀಗೆಂದು ನೋಡಿ—"ಸಿಗರೇಟ್ ಸೇದುವುದರಿಂದ ನಿಮ್ಮ ಹಲ್ಲು ಕೊಳಗಾಗಿ ಕಾಣುತ್ತಿದೆ. ನೀವು ಕಡಿಮೆ ಸುಂದರವಾಗಿ ಕಾಣುತ್ತಿದ್ದೀರಿ" ಆಗ ನಿಮ್ಮವರು ಬದಲಿಸಲೂ ಬಹುದು.

ಸಹಾಯ ಕೋರಿ: ನಿಮ್ಮ ನಿರ್ಧಾರವನ್ನು ನಿಮ್ಮ ಮನೆಯವರಿಗೆ, ಮಿತ್ರರಿಗೆ ಹೇಳಿ. ಎಡ್ವರ್ಡ್ ಲಿಚ್‌ಟನ್‌ಸ್ಟೈನ್ ತನ್ನ ಸಂಶೋಧನೆಯಲ್ಲಿ 'ಶೇಕಡಾ ೮೫ ತಮ್ಮ ಸಂಕಲ್ಪಗಳನ್ನು ಬೇರೆಯವರಿಗೆ ಹೇಳುತ್ತಾರೆ' ಎಂದಿದ್ದಾನೆ. ಆದರೆ ನಿಮ್ಮ ನಿರ್ಧಾರಗಳನ್ನು ಅನಾವಶ್ಯಕವಾಗಿ ಜಗಜ್ಜಾಹೀರು ಮಾಡಬೇಡಿ ಎನ್ನುತ್ತಾರೆ ಮಾರ್ಲೆಟ್. ನಿಮಗೆ ನಿಜವಾಗಿ ಸಹಾಯ ಮಾಡುವ ಆತ್ಮೀಯರಿಗೆ ಹೇಳಿ. ಅವರ ಸಹಾಯ ಕೋರಿ. ನಿಮ್ಮ ಸಂಕಲ್ಪ ಮುರಿದಾಗ ಅವರು ನಿಮ್ಮನ್ನು ಹಾಸ್ಯ ಮಾಡುವಂತೆ ಹೇಳಿ ಆಗ ನೀವು ಮತ್ತೆ ಪ್ರಯತ್ನ ಮಾಡುತ್ತೀರಿ.

ಒಬ್ಬಾತ ವಾರದಲ್ಲಿ ಮೂರು ಸಂಜೆ ವ್ಯಾಯಾಮ ಮಾಡಲು ನಿರ್ಧರಿಸಿದ. ಆ ದಿನಗಳಲ್ಲಿ ಹೆಂಡತಿಗೆ ಹೊರಗಿನ ತಿರುಗಾಟಕ್ಕೆ ಕರೆಯಬೇಡವೆಂದು ಹೇಳಿದ. ಅದಕ್ಕೆ ಪ್ರತಿಯಾಗಿ ಅವಳನ್ನು ವಾರಕ್ಕೊಮ್ಮೆ ಹೋಟೇಲಿಗೆ ಕರೆದುಕೊಂಡು ಹೋಗುವ ವಚನ ನೀಡಿದ.

ಹೊಸ ಅಭ್ಯಾಸ ಬೆಳೆಸಿಕೊಳ್ಳಿ: ಒಳ್ಳೆಯ ಒಂದು ಅಭ್ಯಾಸವನ್ನು ಹೊಸದಾಗಿ ಪ್ರಾರಂಭಿಸುವುದು, ಹಳೆಯ ಕೆಟ್ಟ ಅಭ್ಯಾಸವನ್ನು ಬಿಡುವುದಕ್ಕಿಂತ ಸುಲಭ. ಇವೆರಡರ ಮಿಲನವಾದರೆ ಇನ್ನೂ ಒಳ್ಳೆಯದು. ಉದಾಹರಣೆಗೆ ಇಸ್ಪೀಟಾಟವನ್ನು ಬಿಟ್ಟು ಆ ವೇಳೆಯಲ್ಲಿ ಧರ್ಮಶಾಲೆಯೊಂದರ ನಿಸ್ವಾರ್ಥ ಸೇವೆ ಮಾಡುವುದು.

ಒಂದರ ಬದಲು ಇನ್ನೊಂದು ಉತ್ತಮ ಅಭ್ಯಾಸ ಬೆಳೆಸಿಕೊಳ್ಳುವುದು ಮತ್ತೂ ಒಳ್ಳೆಯದು. ಮಾರ್ಲಿನ್ ಷೆಪರ್ಡ್ ದೇಹದ ತೂಕ ಕರಗಿಸಲು, ಸಂಜೆಯ ತಿಂಡಿಯನ್ನು ವರ್ಜ್ಯ ಮಾಡಿ, ನಡೆಯಲು ನಿರ್ಧರಿಸಿದಳು. ಇವೆರಡನ್ನು ಒಟ್ಟಿಗೆ ನಡೆಸಲು ಅವಳೊಂದು ಯೋಜನೆ ಹಾಕಿದಳು. ಒಂದು ಜೊತೆ ನಡೆಯುವ ಚಪ್ಪಲಿಗಳನ್ನು ಕೊಂಡುಕೊಂಡು, ಸಂಜೆ ಕಛೇರಿಯಿಂದ ಮನೆಗೆ ನಡೆಯಲಾರಂಭಿಸಿದಳು. ಇದರಿಂದ ಅವಳಿಗೆ ವ್ಯಾಯಾಮವೂ ದೊರೆಯಿತು.

ಸಂಜೆಯ ತಿಂಡಿಯ ವೇಳೆ ತಪ್ಪಿ, ಊಟದ ಹೊತ್ತಿಗೆ ಮನೆ ತಲುಪಿದಂತಾಯಿತು.

ನೆನಪಿನ ಚೀಟಿಗಳನ್ನಿಡಿ : ವಾರಕ್ಕೊಂದು ಪುಸ್ತಕ ಓದುವ ನಿರ್ಧಾರ ತೆಗೆದುಕೊಂಡಿದ್ದರೆ ಟಿ.ವಿ.ಯ ಮೇಲೊಂದು ನೆನಪಿನ ಚೀಟಿ ಇಡಿ. ರಾತ್ರಿಯ ವೇಳೆ ಸಿಹಿ ಖಾರದ ತಿನಿಸುಗಳನ್ನು ತಿನ್ನಬಾರದೆಂದು ನಿರ್ಧರಿಸಿದ್ದರೆ, ಫ್ರಿಜ್ ಮೇಲೊಂದು ನೆನಪಿನ ಚೀಟಿ ಇಡಿ.

ಒಬ್ಬಳು ಹತ್ತು ಕಿಲೋಗಳನ್ನು ಕರಗಿಸುವ ನಿರ್ಧಾರ ಮಾಡಿ ತನ್ನ ಭಾವ ಚಿತ್ರವನ್ನು, ಈಜುಡುಗೆಯ ಹೆಣ್ಣಿನ ಚಿತ್ರದ ಪಕ್ಕ ತೂಗು ಹಾಕಿದಳು. ಈ ರೀತಿಯ ಆಕಾರ ವೈಷಮ್ಯ ಅವಳನ್ನು ಮಿತಾಹಾರಕ್ಕೆ ಪ್ರೇರೇಪಿಸಿತು. ಮುಂದಿನ ಹೊಸ ವರ್ಷಕ್ಕೆ ಅವಳೂ ಈಜುಡುಗೆಯ ಹೆಣ್ಣಿನಂತಾದಳು.

ಇಲ್ಲ ಎನ್ನಲೇಬೇಡಿ : 'ನಾನು ಸಾಲಗಳನ್ನು ತೀರಿಸುವವರೆಗೂ ಏನೂ ಬಟ್ಟೆಗಳನ್ನು ಕೊಳ್ಳುವುದಿಲ್ಲ' ಎಂಬ ನಿಮ್ಮ ನಿರ್ಧಾರ ಸೋಲಬಹುದು. ಅಗ್ಗದ ದರಕ್ಕೆ ಉಣ್ಣೆಯ ಬಟ್ಟೆಯೊಂದು ನಿಮ್ಮ ಕಣ್ಸೆಳೆದರೆ ನಿಮ್ಮ ನಿರ್ಧಾರವನ್ನು ಗಾಳಿಗೆ ತೂರಿಬಿಡುವಿರಿ. ಒಂದು ಉಳಿತಾಯ ಯೋಜನೆ ತಯಾರಿಸಿದರೆ, ನೀವು ಎಂದಾದರೊಮ್ಮೆ, ಕೊಳ್ಳುವುದೂ ತಪ್ಪಾಗಲಾರದು.

'ಅಸಾಧ್ಯವಾದದ್ದನ್ನು ಸಾಧಿಸಲು ಹೋಗದಿರಿ' ಎನ್ನುತ್ತಾರೆ ಮಾರ್ಲೆಟ್. ಡಿಸೆಂಬರಿನಿಂದ ಜೂನ್ ತಿಂಗಳ ಒಳಗೆ ಇಪ್ಪತ್ತೈದು ಕಿಲೋ ಇಳಿಸುವೆ ಎಂದು ಶಪಥ ಮಾಡಿದರೆ ಸಾಧಿಸಲು ಸಾಧ್ಯವೆ? ಅದರ ಬದಲು ಫೆಬ್ರುವರಿ ತಿಂಗಳ ವೇಳೆಗೆ ಮೂರು ಕಿಲೋ ಇಳಿಸುತ್ತೇನೆ ಎಂದು ನಿರ್ಧರಿಸಿ ಸಾಧಿಸಿದರೂ ಸಾಕು.

ಸಾಧಿಸಬಲ್ಲ ಗುರಿಗಳಿದ್ದರೂ, ಯೋಜನೆಯನ್ನು ಸರಿಯಾಗಿ ರೂಪಿಸಿಕೊಳ್ಳುವುದೂ, ಚಪಲಗಳನ್ನು ಹತ್ತಿಕ್ಕುವುದೂ ಮುಖ್ಯವೇ. ಒಬ್ಬರು ಸಿಗರೇಟ್ ಸೇವನೆ ನಿಲ್ಲಿಸಲು ಆ ಸಮಯದಲ್ಲಿ ಚೆಸ್ ಆಟ ಕಲಿತರು. ಮತ್ತೊಬ್ಬರು ಹೊರಗೆ ಮಳೆ ಬರುತ್ತಿದ್ದಾಗ ಮನೆಯಲ್ಲೇ ವ್ಯಾಯಾಮ ಮಾಡತೊಡಗಿದರು. ಮಾಡಬೇಕೆಂಬ ಮನಸ್ಸಿದ್ದರೆ ಹೀಗೂ ಮಾಡಬಹುದು.

ನಿರ್ಧಾರಗಳ ಕೈಬಿಡಬೇಡಿ : ಪ್ರತಿ ದಿನವೂ ಹೊಸವರ್ಷದ ಪ್ರಾರಂಭವೇ. ಈ ದಿನ ನೀವೊಂದು ಸಿಹಿ ತಿಂಡಿ ತಿಂದು, ನಿಮ್ಮ ಮಿತಾಹಾರದ ಸಂಕಲ್ಪ ಭಂಗ

ವಾದರೆ, ನಾಳೆಯೇ ಮತ್ತೆ ನಿರ್ಧಾರ ತೆಗೆದುಕೊಳ್ಳಿ. ಇಂದು ನೀವು ಕೋಪ ದಿಂದ ಮನೆಗೆ ಬಂದು, ಮಕ್ಕಳ ಮೇಲೆ ಎಗರಾಡಿದ್ದರೆ, ನೀವು ಮತ್ತೆ ನಿಮ್ಮ ಮನೆಯವರಿಗೆ ನಿಮ್ಮ ಸಂತೋಷದ ಮುಖ ತೋರಿಸಲು ಮುಂದಿನ ಜನವರಿಯ ವರೆಗೆ ಕಾಯಬೇಕಾಗಿಲ್ಲ ಅಲ್ಲವೇ?

ಹೊಸ ವರ್ಷದ ಆಗಮನ, ನಿಮ್ಮನ್ನು ನೀವು ತಿದ್ದಿಕೊಳ್ಳಲು ಒಂದು ಒಳ್ಳೆಯ ಅವಕಾಶ. ನಿಮ್ಮಲ್ಲಿ ಆಸೆಗಳನ್ನೂ, ಆತ್ಮವಿಶ್ವಾಸವನ್ನೂ ಮೂಡಿಸುವ ಕಾಲವಿದು. ಎಂತಲೇ ನೀವು 'ಹೊಸ ವರ್ಷ ಶುಭಾಶಯ'ಗಳನ್ನು ಹೇಳಿದೊಡನೆ 'ನಾನು ಈ ವರ್ಷ, ...ಹೀಗೆ ಮಾಡಲು ನಿರ್ಧರಿಸಿದ್ದೇನೆ' ಎನ್ನಿ. ಆ ನಿರ್ಧಾರ ವನ್ನು ಹೇಗೆ ನಡೆಸಬೇಕೆಂದು, ನಿಲ್ಲಿಸಿಕೊಳ್ಳಬೇಕೆಂದು ನಿಮಗೀಗ ತಿಳಿದಿದೆ ಯಲ್ಲಾ!

ಗೀತಾ ಸೀತಾರಾಮ್



ಪುಣ್ಯ ಪಾಪಗಳೆಂಬುದು ತಮ್ಮಿಷ್ಟ ಕಂಡಿರೇ, ಅಯ್ಯ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ, ದೇವಾ, ಭಕ್ತ ಜೀಯಾ, ಜೀಯಾ ಎಂಬ ನುಡಿಯೊಳಗೆ ಕೈಲಾಸ.

—ಬಸವಣ್ಣ

ಬಡವರಿಗಾಗಿ ಬ್ಯಾಂಕ್ ವ್ಯವಸ್ಥೆ

ಗ್ರಾಮೀಣ ಬ್ಯಾಂಕುಗಳು

ಒಂದು ವರುಷದ ಹಿಂದಷ್ಟೇ ಕೈಮೂನ್ ಅಲಿ, ಆಕೆಯ ಗಂಡ ಮಹಮ್ಮದ್ ಜುಬೈದ್ ಮತ್ತು ಅವರ ಮೂರು ಮಕ್ಕಳು ಬಾಂಗ್ಲಾದೇಶದ ಹಥಿಲ್ ಗ್ರಾಮದಲ್ಲಿ ಹೊಟ್ಟೆಗಿದ್ದರೆ ಬಟ್ಟೆಗಿಲ್ಲ. ಬಟ್ಟೆಗಿದ್ದರೆ ಹೊಟ್ಟೆಗಿಲ್ಲ ಎಂಬಂಥ ಸ್ಥಿತಿಯಲ್ಲಿ ಬಾಳುವೆಯನ್ನು ನಡೆಸಿದ್ದರು. ಜುಬೈದ್ ವೀಳ್ಯದೆಲೆಯ ತೋಟದಲ್ಲಿ ದಿನಗೂಲಿ ಕೆಲಸಗಾರನಾಗಿ ದುಡಿಯುತ್ತಿದ್ದ. ಅನಾರೋಗ್ಯ ದಿಂದಾಗಿ ಅವನು ಆಗಿಂದಾಗ್ಗೆ ಕೆಲಸಕ್ಕೆ ಗೈರುಹಾಜರಾಗುತ್ತಿದ್ದ. ಹಳ್ಳಿಯಲ್ಲಿನ ಇತರರಿಗಾಗಿ ಕೈಮೂನ್ ಹಾಸಿಗೆಯ ಮೇಲುಹಾಸುಗಳ ಕಸೂತಿಯ ಕೆಲಸ ವನ್ನು ಮಾಡುತ್ತ ಇದ್ದಳಾದರೂ, ದಿನಕ್ಕೆ ನಾಲ್ಕು 'ಟಕಾ'ಗಳಿಗಿಂತ (ಒಂದು 'ಟಕಾ' ಭಾರತೀಯ ನಾಣ್ಯ ವ್ಯವಸ್ಥೆಯ ೭೫ ಪೈಸೆಗಳಿಗೆ ಸಮ ಎಂದಿಟ್ಟು ಕೊಳ್ಳಬಹುದು) ಹೆಚ್ಚಿನ ಹಣವನ್ನು ಸಂಪಾದಿಸಲು ಸಾಧ್ಯವಾಗುತ್ತಿರಲಿಲ್ಲ. ಇಂದು ಆಕೆ ಬತ್ತದ ಹೊಟ್ಟು ತೆಗೆಯುವ ಸಣ್ಣ ವಹಿವಾಟಿನ ಒಡತಿಯಾಗಿದ್ದು, ಆಕೆಯ ಸಂಪಾದನೆ ಎರಡು ಪಟ್ಟಿಗಿಂತಲೂ ಹೆಚ್ಚಾಗಿದೆಯಾದರೂ, "ನಾವಿನ್ನೂ ಬಡವರಾಗಿಯೇ ಇದ್ದೇವೆ. ಆದರೆ ನಾವಿಂದು ಹೊಟ್ಟೆ ತುಂಬ ಊಟಮಾಡುತ್ತಿದ್ದೇವೆ. ನಮ್ಮ ಸ್ಥಿತಿಗತಿ ಸುಧಾರಿಸಬಹುದೆಂಬ ನಂಬಿಕೆ ಇದೆ" ಎಂದು ಆಕೆ ಹೇಳಿಕೊಳ್ಳುತ್ತಾಳೆ.

ನೀಗ್ರೋ ಜನಾಂಗದವರೇ ಹೆಚ್ಚಾಗಿರುವ ಫಿಲಿಪ್ಪೈನ್ಸ್ ದ್ವೀಪದಲ್ಲಿ ವಾಸಿಸುತ್ತಿರುವ ಲಿಯೊನೀಸಾ ಎಸ್ಮಯಾನಳಿಗೆ, ಮೀನುಗಾರನಾಗಿದ್ದ ತನ್ನ ಗಂಡ ಕ್ಷಯರೋಗಕ್ಕೆ ಒಳಗಾಗಿರುವ ವಿಚಾರ ತಿಳಿದುಬಂದಾಗ, ಮುಂದೇನು ಎಂಬ ಭಯದಿಂದ ತತ್ತರಿಸುವಂತಾಯಿತು. ಐದನೆಯ ತರಗತಿಗಿಂತ ಮುಂದೆ ಓದಿರದಿದ್ದ ತಾನು ತನ್ನ ಗಂಡ ಪ್ರೀದೆನ್ಸಿಯೋ ಮತ್ತು ತಮ್ಮ ಆರು ಮಂದಿ ಮಕ್ಕಳನ್ನು ಹೇಗೆ ಸಾಕಿಯೇನು ಎಂಬ ಚಿಂತೆಗೆ ಒಳಗಾಗಿದ್ದಳು. ಇಂದು ಲಿಯೊನೀಸಾ ಹಂದಿಗಳ ಸಾಕಣೆ ಕೇಂದ್ರವೊಂದನ್ನು ನಡೆಸುತ್ತಿದ್ದಾಳೆ. ಸ್ಥಳೀಯ ಮಾರುಕಟ್ಟೆ

೧೯೯೨ರ ನವೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟ ವಾಗಿರುವ ಅಶೋಕ್ ಮಹಾದೇವನ್ ಅವರ 'ಬ್ಯಾಂಕಿಂಗ್ ಆನ್ ದಿ ಪೂರ್' ಲೇಖನದ ಅನುವಾದ.

ಯಲ್ಲಿ ಮೀನು ಮತ್ತು ತರಕಾರಿ ಮಾರಾಟ ಮಾಡುತ್ತಿದ್ದಾಳೆ. ಇವುಗಳಿಂದ ತನ್ನ ಕುಟುಂಬಕ್ಕೆ ಆಸರೆಯನ್ನು ಒದಗಿಸುವುದು ಅವಳಿಗೆ ಸಾಧ್ಯವಾಗಿದೆ.

ಅಮೆರಿಕಾ ಸಂಯುಕ್ತ ಸಂಸ್ಥಾನದ ಪೈನ್‌ಬ್ಲಫ್ ನಗರದ ವಿವಿಯಾನ್ ಅಲೆಕ್ಸಾಂಡರ್ ಮನೆಮನೆಯ ಬಾಗಿಲಿಗೆ ಹೋಗಿ ಪ್ರಸಾಧನ ವಸ್ತುಗಳನ್ನು ಮಾರಾಟಮಾಡುತ್ತಿದ್ದಳು. ಆದರೆ, ಬೇಡಿಕೆ ಪಟ್ಟಿಯ ಅಗತ್ಯಗಳಿಗೆ ಅನುಗುಣವಾಗಿ ಪ್ರಸಾಧನ ಸಾಮಗ್ರಿಗಳ ದಾಸ್ತಾನನ್ನು ಇರಿಸಿಕೊಳ್ಳಲು ಸಾಧ್ಯವಾಗದೆ ಹೋಗುತ್ತಿದ್ದುದರಿಂದ, ಅನೇಕ ವೇಳೆ ತನ್ನ ಗ್ರಾಹಕರಿಗೆ ಪ್ರಸಾಧನ ಸಾಮಗ್ರಿಗಳನ್ನು ಸರಬರಾಜು ಮಾಡಲು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಇಂದು ಪ್ರಸಾಧನ ಸಾಮಗ್ರಿಗಳನ್ನು ಕೊಂಡು ಅವುಗಳನ್ನು ದಾಸ್ತಾನಿನಲ್ಲಿ ಇರಿಸಿಕೊಳ್ಳುವುದು ಅವಳಿಗೆ ಸಾಧ್ಯವಾಗಿದೆ ಹಾಗೂ ಅವಳ ವಹಿವಾಟು ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ.

ಬಡತನದ ವಿರುದ್ಧ ಹೋರಾಡುವ ಪ್ರಚೋದಕ ವಿಧಾನಕ್ಕೆ ಈ ಮಹಿಳೆಯರು ಉದಾಹರಣೆಯಾಗಿದ್ದಾರೆ. ಈ ವಿಧಾನ ಇಂದು ಜಗತ್ತಿನಾದ್ಯಂತ ಸುಮಾರು ೩೦ ದೇಶಗಳಲ್ಲಿನ ಲಕ್ಷೋಪಲಕ್ಷ ಮಂದಿಗೆ ನೆರವಾಗುತ್ತಿದೆ. ಮೂಲತಃ ಈ ವಿಧಾನ ನಮ್ಮ ಮುಂದೆ ಇರಿಸುವ ವಾದ ಇದು. ಬಹುಪಾಲು ಬಡವರು ತಮ್ಮ ಬಾಳಿಗೆ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳ ಬಯಸುತ್ತಾರೆ ಹಾಗೂ ಇದಕ್ಕಾಗಿ ಅವರು ಕಷ್ಟಪಟ್ಟು ದುಡಿಯಲೂ ಇಚ್ಛಿಸುತ್ತಾರೆ. ಮೇಲಾಗಿ, ನೇರವಾಗಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ನೆರವಾಗುವಂಥ ಸಣ್ಣಪುಟ್ಟ ವಹಿವಾಟುಗಳನ್ನು ಕೂಡಲೇ ಆರಂಭಿಸಲು ಅಗತ್ಯವಾಗಿರುವಂಥ ಕುಶಲತೆಗಳೂ ಅನೇಕರಲ್ಲಿ ಇವೆ. ಅವರಿಗೆ ಅಗತ್ಯವಾಗಿರುವುದು ಒಂದಿಷ್ಟು ಬಂಡವಾಳ—ಪೂರಕ ಜಾಮೀನನ್ನು ಒದಗಿಸದೆ, ನ್ಯಾಯೋಚಿತವಾದ ದರದ ಬಡ್ಡಿಯ ಮೇಲೆ ನೀಡಲಾಗುವ ಸಾಲ.

ಕಳೆದ ನಲವತ್ತು ವರ್ಷಗಳಲ್ಲಿ, ಅಂತರರಾಷ್ಟ್ರೀಯ ನೆರವು ಸಂಘಟನೆಗಳ ಬೆಂಬಲದೊಂದಿಗೆ, ಮೂರನೆಯ ಜಗತ್ತಿನ ಸರ್ಕಾರಗಳು, ಬಡವರಿಗಾಗಿ ಹಮ್ಮಿಕೊಳ್ಳಲಾಗಿರುವ ಸುಲಭ ಸಾಲನೀಡಿಕೆ ಕಾರ್ಯಕ್ರಮಗಳಿಗೆ ಹಲವಾರು ಶತಕೋಟಿ ಡಾಲರುಗಳಷ್ಟು ಹಣವನ್ನು ಸುರಿದಿವೆ. ಆದರೆ, ಆಡಳಿತಶಾಹಿಯ ಮತ್ತು ಭ್ರಷ್ಟಾಚಾರದ ಹುದಲಿನಲ್ಲಿ ಸಿಕ್ಕಿಕೊಂಡಿರುವುದರಿಂದ, ಅಗತ್ಯವಾಗಿರುವಂಥ ವ್ಯಕ್ತಿಗಳಿಗೆ ಈ ಕಾರ್ಯಕ್ರಮಗಳ ಪ್ರಯೋಜನಗಳು ಲಭಿಸಿಯೇ ಇಲ್ಲ. ಇಂಥ ಯೋಜನೆಗಳನ್ನು ಅರ್ಥಪೂರ್ಣ ರೀತಿಯಲ್ಲಿ ಕಾರ್ಯರೂಪಕ್ಕೆ ತರಬಹುದು

ಎಂಬುದನ್ನು ಅನೇಕ ಸಂಘಟನೆಗಳು ಇಂದು ತೋರಿಸಿಕೊಟ್ಟಿವೆ. ಬಡತನವನ್ನು ನಿವಾರಿಸುವುದಕ್ಕೆ ತಳವಟ್ಟದ ಬಂಡವಾಳವಾದೀ ವ್ಯವಸ್ಥೆಯೇ ನಮಗಿರುವ ಅತ್ಯುತ್ತಮ ಮಾರ್ಗಗಳಲ್ಲಿ ಒಂದಾಗಿದೆ ಎಂಬುದನ್ನು ಅವು ತೋರಿಸಿಕೊಟ್ಟಿವೆ.

ಬಾಂಗ್ಲಾದೇಶದಲ್ಲಿನ ಗ್ರಾಮೀಣ ಬ್ಯಾಂಕ್ ವ್ಯವಸ್ಥೆ ಇದಕ್ಕೆ ಕಣ್ಣು ಕೋರೈಸುವಂಥ ನಿದರ್ಶನವನ್ನು ಒದಗಿಸುತ್ತದೆ. ಕಳೆದ ಹದಿನಾರು ವರ್ಷಗಳಲ್ಲಿ ಅದು ಬಡತನದಲ್ಲಿ ಮುಳುಗೇಳುತ್ತಿದ್ದಂಥ ಸುಮಾರು ಒಂದು ದಶಲಕ್ಷಮಂದಿಯಷ್ಟು ರೈತಾಪಿ ಜನರಿಗೆ ಮಾರುಕಟ್ಟೆಯ ದರಗಳಲ್ಲಿ ೨೦೦ ದಶಲಕ್ಷ ಡಾಲರುಗಳಷ್ಟು ಹಣವನ್ನು ಸಾಲವಾಗಿ ನೀಡಿದೆ ಹಾಗೂ ಶೇ. ೯೮ರಷ್ಟು ಹಣವನ್ನು ಮರಳಿ ಪಡೆದಿದೆ. ಒಂದಿಷ್ಟು ಲಾಭವನ್ನೂ ಗಳಿಸಿದೆ. ಇವರುಗಳಲ್ಲಿ ಬಹುಪಾಲು ಮಂದಿ ಕೈಮೂನ್ ಅಲಿಯಂಥ ಬಡಮಹಿಳೆಯರೇ ಆಗಿದ್ದಾರೆ. ಇತರ ಕಡೆಗಳಲ್ಲಿ ಹಮ್ಮಿಕೊಳ್ಳಲಾಗಿರುವ ಈ ಬಗೆಯ ಗ್ರಾಮೀಣ ಬ್ಯಾಂಕ್ ಮಾದರಿಯ ಪ್ರಾಯೋಜನೆಗಳು ಈ ಬಗೆಯ ವ್ಯವಸ್ಥೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿಯೂ —ಉದಾಹರಣೆಗೆ, ಫಿಲಿಪ್ಪೀನ್ಸ್ ಮತ್ತು ಬುರ್ಕಿನ ಫ್ಯಾಸೋದಂಥ ರಾಷ್ಟ್ರಗಳಲ್ಲಿಯೂ—ಫ್ರಾನ್ಸ್, ಕೆನಡಾ, ನಾರ್ವೆ ಮತ್ತು ಸಂಯುಕ್ತ ಸಂಸ್ಥಾನಗಳಂಥ ಔದ್ಯಮೀಕೃತ ರಾಷ್ಟ್ರಗಳಲ್ಲಿ ಆಗಿರುವಷ್ಟು ಚೆನ್ನಾಗಿಯೇ ಯಶಸ್ವಿಯಾಗಬಲ್ಲದು ಎಂಬುದನ್ನು ತೋರಿಸಿಕೊಟ್ಟಿವೆ. ಮಲೇಷ್ಯಾದಲ್ಲಿ ಇಂಥ ಕಾರ್ಯಕ್ರಮವನ್ನು ಆರಂಭಿಸಿದ ಕೆನಡಾದ ರಾಜಕೀಯ ಅರ್ಥಶಾಸ್ತ್ರಜ್ಞ ಡೇವಿಡ್ ಗಿಬ್ಬನ್ಸ್ ಅವರು ಈ ವಿಚಾರದಲ್ಲಿ ಹೀಗೆಂದಿದ್ದಾರೆ. ಮಾರುಕಟ್ಟೆ ಆರ್ಥಿಕತೆ ಮತ್ತು ಅಷ್ಟೇನೂ ಗಂಭೀರವಾಗಿಲ್ಲದಿರುವಂಥ ರಾಜಕೀಯ ಮಧ್ಯ ಪ್ರವೇಶ—ಇವೇ ಗ್ರಾಮೀಣ ಸ್ವರೂಪದ ಕಾರ್ಯ ಯೋಜನೆಗಳ ಯಶಸ್ಸಿಗೆ ಅಗತ್ಯವಾಗಿರುವಂಥ ಎದ್ದು ಕಾಣುವ ಹಿನ್ನೆಲೆಯ ಸ್ಥಿತಿಗತಿಗಳು."

ಈ ಗ್ರಾಮೀಣ ಕಾರ್ಯವಿಧಾನ ಮಹಮ್ಮದ್ ಯೂನಸ್ ಅವರ ಕಲ್ಪನೆಯ ಶಿಶು. ಈತ ಬ್ಯಾಂಕಿಗನಾಗಿ ಪರಿಣಮಿಸಿದ ಮೃದುಭಾಷಿ ಅರ್ಥಶಾಸ್ತ್ರಜ್ಞ. ಆತನೇ ಹೇಳಿಕೊಂಡಿರುವಂತೆ, "ನೆಲದ ಬಾಳುವೆಗೆ ತುಂಬ ನಿಕಟವಾಗಿರುವಂಥ ಬಾಳುವೆಯ ಬಗೆಗಿನ ಕೀಟ–ದೃಷ್ಟಿಯನ್ನುಳ್ಳ ವ್ಯಕ್ತಿ." ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಗ್ರಾಮೀಣ ಸ್ವರೂಪದ ಸಾಲ-ಯೋಜನೆಯನ್ನು ಆರಂಭಿಸಿರುವ ಶಿಕಾಗೋ ಬ್ಯಾಂಕ್ ಆಗಿರುವ 'ಶೋರ್ ಬ್ಯಾಂಕ್ ಕಾರ್ಪೊರೇಷನ್ನಿ'ನ ಅಧ್ಯಕ್ಷರಾಗಿರುವ ಮೇರಿ ಹೌಫ್‌ಟನ್ ಅವರು ಯೂನಸ್ ಅವರ ಬಗ್ಗೆ ಹೀಗೆಂದು ಹೇಳಿದ್ದಾರೆ:" ಜನರು ವಾಸ್ತವವಾಗಿ ಹೇಗೆ ಆಲೋಚಿಸು

ತ್ತಾರೆ ಮತ್ತು ವರ್ತಿಸುತ್ತಾರೆ ಎಂಬುದನ್ನು ಆಧಾರವಾಗಿರಿಸಿಕೊಂಡಿರುವಂಥ ಕಾರ್ಯಕ್ರಮಗಳನ್ನು ರೂಪಿಸುವ ಅಸಾಧಾರಣ ಸಾಮರ್ಥ್ಯ ಅವರಲ್ಲಿದೆ. ಮುಂದುವರಿದು ಅವರು ಹೀಗೆಂದಿದ್ದಾರೆ. "ಮೇಲಾಗಿ ಅವರು ಪಟ್ಟು ಹಿಡಿದು ಕಾರ್ಯಸಾಧಿಸುವಂಥವರು."

ಆಭರಣಗಳ ಅಂಗಡಿಯ ಮಾಲೀಕರೊಬ್ಬರ ಮಗನಾಗಿರುವ ಯೂನಸ್ ಅವರು ೧೯೪೦ರಲ್ಲಿ ಚಿತ್ತಗಾಂಗ್‌ನಲ್ಲಿ ಹುಟ್ಟಿದರು. ಪ್ರತಿಭಾವಂತನೂ, ಸ್ವಾವಲಂಬಿಯೂ ಆಗಿದ್ದ ಈತ ಶಾಲಾ ದಿನಗಳಲ್ಲಿಯೂ ಅತ್ಯುತ್ತಮ ಸಾಧನೆಯ ಅಗ್ರಶ್ರೇಣಿಯ ವಿದ್ಯಾರ್ಥಿಯಾಗಿದ್ದರು. ಅಂತಿಮವಾಗಿ ಅವರು ಢಾಕಾ ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡು ಹೊರಬಂದರು. ೧೯೬೫ರಲ್ಲಿ ಅವರಿಗೆ ಫುಲ್‌ಬ್ರೈಟ್ ಶಿಷ್ಯವೇತನ ದೊರೆಯಿತು. ಅದರ ಫಲವಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿನ ವ್ಯಾಂಡೇರ್‌ಬಿಲ್ಟ್ ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ. ಪದವಿಯನ್ನು ಪಡೆದುಕೊಳ್ಳುವುದು ಅವರಿಗೆ ಸಾಧ್ಯವಾಯಿತು.

ಮಾರ್ಚ್ ೧೯೭೧ರಲ್ಲಿ ಯೂನಸ್ ಅವರು ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಬೋಧಕರಾಗಿದ್ದ ಅವಧಿಯಲ್ಲಿ, ಪಾಕಿಸ್ತಾನದಲ್ಲಿ ಅಂತರ್ಯುದ್ಧ ಸ್ಫೋಟಗೊಂಡಿತು. ಬಂಗ್ಲಾದೇಶದ ವಿಮೋಚನೆ ಸಾಧಿತವಾದ ಬಳಿಕ, ಯೂನಸ್ ಅವರು ತಾಯ್ನಾಡಿಗೆ ಹಿಂದಿರುಗಿದರು. ಆಗ ಅವರಿಗೆ ಹೊಸ ನಾಡಿನ ಆರ್ಥಿಕ ಅಧಿಕಾರಶಾಹಿ ವ್ಯವಸ್ಥೆಯಲ್ಲಿ ಉನ್ನತ ಹುದ್ದೆಯೊಂದನ್ನು ನೀಡಲಾಯಿತು. ಅಲ್ಲಿ ವಾಸ್ತವವಾಗಿಯೂ ನಿಜವಾದ ಕೆಲಸ ಅಷ್ಟಾಗಿ ಇಲ್ಲವೆಂಬುದನ್ನು ಕಂಡುಕೊಂಡ ಅವರು ಚಿತ್ತಗಾಂಗ್‌ಗೆ ಹಿಂದಿರುಗಿ, ಅಲ್ಲಿನ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸತೊಡಗಿದರು.

ವಿಷವೃತ್ತ: ಯೂನಸ್ ಅವರಿಗೆ ಶೈಕ್ಷಣಿಕ ಬಾಳುವೆಯೂ—ಅಂದರೆ, ಅಧ್ಯಾಪಕ ವೃತ್ತಿಯೂ-ತೃಪ್ತಿಯನ್ನು ತಂದುಕೊಡಲಿಲ್ಲ. ತಾವು ಬೋಧಿಸುತ್ತಿದ್ದ ಕೂಟತರ್ಕದ ಅರ್ಥಶಾಸ್ತ್ರಕ್ಕೂ ಬಾಂಗ್ಲಾದೇಶದ ಅತ್ಯಂತ ತೀವ್ರ ಸಮಸ್ಯೆಯಾದ ಅಲ್ಲಿಯ ಅಗಾಧ ಬಡತನಕ್ಕೂ ಯಾವುದೇ ಸಾಂಗತ್ಯ-ಸಂಬಂಧ ಇಲ್ಲವೆಂದು ಅವರಿಗೆ ತೋರಿತು. ತಮ್ಮ ಜ್ಞಾನ ಬಡವರಿಗೆ ನೆರವಾಗಲಾರದೆ ಹೋದರೆ, ಅದರಿಂದ ಏನು ಪ್ರಯೋಜನ ಎಂದು ಅವರು ತಮ್ಮನ್ನು ತಾವೇ ಕೇಳಿಕೊಳ್ಳತೊಡಗಿದರು.

ಹೀಗಾಗಿ, ಬಾಂಗ್ಲಾದೇಶದ ಸಮಾಜದಲ್ಲಿನ ತೀರ ಬಡಕುಟುಂಬಗಳ—ಜಮೀನು ಇಲ್ಲದ ಕುಟುಂಬಗಳ—ಸದಸ್ಯರೊಂದಿಗೆ ಮಾತನಾಡಿ, ಅವರ ಬಾಳುವೆಯನ್ನು ಹೇಗೆ ಉತ್ತಮ ಪಡಿಸಬಹುದೆಂಬುದನ್ನು ಕಂಡುಕೊಳ್ಳಬೇಕೆಂದು ಯೂನಸ್ ಅವರು ತೀರ್ಮಾನಿಸಿದರು. ಅವರು ಭೇಟಿ ಮಾಡಿದ ವ್ಯಕ್ತಿಗಳಲ್ಲಿ ಸೂಫಿಯಾ ಖಾತೂನ್ ಎಂಬ ಮಹಿಳೆಯೂ ಒಬ್ಬಳಾಗಿದ್ದಳು. ಆಕೆ ಬೆತ್ತದ ಕುರ್ಚಿಗಳನ್ನು ತಯಾರಿಸುವ ಉದ್ಯೋಗವನ್ನು ನೆಚ್ಚಿಕೊಂಡಿದ್ದಳು. ಬಹುತೇಕವಾಗಿ ಆಗಿಂದಾಗ್ಗೆ ನಿರುದ್ಯೋಗಿಯಾಗಿರುತ್ತಿದ್ದ ಕೃಷಿ ಕಾರ್ಮಿಕನೊಬ್ಬನಿಗೆ ಆಕೆಯನ್ನು ಮದುವೆ ಮಾಡಿಕೊಡಲಾಗಿದ್ದು, ಆಕೆಗೆ ಇಬ್ಬರು ಮಕ್ಕಳಿದ್ದರು. ವ್ಯಾಪಾರಿಯೊಬ್ಬನಿಂದ ತಿಂಗಳಿಗೆ ಶೇ. ೧೦ರ ಬಡ್ಡಿ ದರದಲ್ಲಿ ಆಕೆ ಹಣವನ್ನು ಸಾಲವಾಗಿ ಪಡೆದುಕೊಂಡು, ಅದರಿಂದ ಬೆತ್ತವನ್ನು ಖರೀದಿಸಿ, ಮತ್ತೆ ಆ ವ್ಯಾಪಾರಿ ಗೊತ್ತುಪಡಿಸಿದ ದರಕ್ಕೇ ಆ ಬೆತ್ತದ ಕುರ್ಚಿಗಳನ್ನು ಅವನಿಗೆ ಮಾರುತ್ತಿದ್ದಳು. ಯೂನಸ್ ಅವರು ಆಕೆಯನ್ನು ಕೇಳಿದರು: "ಇದರಿಂದ ನೀನೆಷ್ಟು ಲಾಭವನ್ನು ಗಳಿಸುತ್ತೀಯೆ?" "ಒಂದು ಕುರ್ಚಿಗೆ ಅರುವತ್ತೆರಡು ಪೈಸೆಯಷ್ಟು" ಎಂದು ಸೂಫಿಯಾ ಉತ್ತರಿಸಿದಳು.

"ಆ ವ್ಯಾಪಾರಿಗೇ ನೀನು ಕುರ್ಚಿಗಳನ್ನು ಮಾರದೆ ಇದ್ದಲ್ಲಿ, ನೀನು ಹೆಚ್ಚಿನ ಲಾಭವನ್ನು ಗಳಿಸಲು ಸಾಧ್ಯವಾಗುತ್ತದೆಯೆ?" ಎಂದು ಯೂನಸ್ ಅವರು ಆಕೆಯನ್ನು ಕೇಳಿದರು. ಆಕೆ ಹೇಳಿದಳು: "ಖಂಡಿತವಾಗಿಯೂ! ಆದರೆ, ಬೆತ್ತವನ್ನು ಕೊಳ್ಳಲು ನನಗೆ ಹಣ ದೊರೆಯುವುದಾದರೂ ಎಲ್ಲಿಂದ?"

ಯೂನಸ್ ಆಲೋಚನೆ ಮಾಡಿದರು: "ಈ ಮಹಿಳೆ ದುಬಾರಿ ದರದ ಬಡ್ಡಿಯನ್ನು ತೆರುತ್ತಿದ್ದಾಳೆ. ಮೇಲಾಗಿ ತನ್ನ ದುಡಿಮೆಗೆ ತಕ್ಕಷ್ಟು ಲಾಭವನ್ನೂ ಗಳಿಸುತ್ತಿಲ್ಲ. ಬೆತ್ತವನ್ನು ಕೊಳ್ಳಲು ವ್ಯಾಪಾರಿಯಿಂದ ಹಣವನ್ನು ಸಾಲವಾಗಿ ಪಡೆದುಕೊಳ್ಳುತ್ತ ಇರುವವರೆಗೆ ಆಕೆ ಬಡವಳಾಗಿಯೇ ಇರುತ್ತಾಳೆ."

ಸೂಫಿಯಾಳಂತೆ ಇತರ ಭೂರಹಿತ ವ್ಯಕ್ತಿಗಳೂ—ದುಬಾರಿ ಬಾಡಿಗೆಗೆ ಮಾಲೀಕರಿಂದ ರಿಕ್ಷಾಗಳನ್ನು ಪಡೆದು ಅವುಗಳನ್ನು ಎಳೆದು ತಮ್ಮ ಜೀವನವನ್ನು ಸಾಗಿಸುತ್ತಿದ್ದ ರಿಕ್ಷಾವಾಲಾಗಳು, ಅರ್ಧ ಕಿಲೋ ಅಕ್ಕಿಗೆ ಹಾಗೂ ತಿಂದು ಮಿಕ್ಕ ಕೂಳಿಗಾಗಿ ದಿನವಿಡೀ ಇತರರಿಗೆ ಸೇರಿದ ಬತ್ತವನ್ನು ಕುಟ್ಟುವ ಮಹಿಳೆಯರು, ಮಗ್ಗಗಳನ್ನಾಗಲೀ ನೂಲನ್ನಾಗಲೀ ಕೊಳ್ಳಲಾರದೆ ತೀರ ಕಡಿಮೆ ಕೂಲಿಗಾಗಿ ದಿನವಿಡೀ ದುಡಿಯುತ್ತಿದ್ದ ಕುಶಲ ಕಾರ್ಮಿಕರು ಮೊದಲಾದವರೆಲ್ಲ—ಇದೇ

ವಿಷವೃತ್ತದಲ್ಲಿ ಸಿಲುಕಿಕೊಂಡಿದ್ದರು. ಯೂನಸ್ ಹೀಗೆಂದು ತರ್ಕಿಸಿದರು: ಈ ಜನರಿಗೆ ಒಂದಿಷ್ಟು ಬಂಡವಾಳ ದೊರೆತಿದ್ದೇ ಆದರೆ, ಹೆಚ್ಚು ಹೆಚ್ಚು ಸಂಪಾದನೆ ಮಾಡಲು ಅವರಿಗೆ ಸಾಧ್ಯವಾಗುತ್ತದೆ."

ವಿಶ್ವವಿದ್ಯಾನಿಲಯದ ಆವರಣಕ್ಕೆ ಅಂಟಿಕೊಂಡಂತೆ ಇದ್ದ ಜೋಬ್ರಾ ಎಂಬ ಹಳ್ಳಿಯಲ್ಲಿ ಇಂಥ ೪೨ ಮಂದಿ ನಿವಾಸಿಗಳಿದ್ದಾರೆ ಎಂಬುದನ್ನು ಶೀಘ್ರವಾಗಿ ನಡೆಸಿದ ಸಮೀಕ್ಷೆಯೊಂದು ತೋರಿಸಿಕೊಟ್ಟಿತು. ತಮ್ಮದೇ ಆದ ವಹಿವಾಟನ್ನು ಆರಂಭಿಸಲು ಒಟ್ಟಾರೆಯಾಗಿ ಅವರಿಗೆ ೮೫೬ ಟಕಾಗಳಷ್ಟು ಬಂಡವಾಳ ಬೇಕಾಗಿತ್ತು. ಅವರೇ ಹೇಳಿಕೊಂಡಿರುವಂತೆ, "ಇಷ್ಟು ಅಲ್ಪ ಬಂಡವಾಳಕ್ಕಾಗಿ ಅಷ್ಟೊಂದು ಕುಟುಂಬಗಳನ್ನು ನಿರ್ಗತಿಕವಾಗಿಸಿರುವಂಥ ಸಮಾಜಕ್ಕೆ ಸೇರಿದವನಾಗಿರುವುದೇ ನಾಚಿಕೆಗೇಡಿನ ಸಂಗತಿ" ಎಂದು ಭಾವಿಸಿದ ಯೂನಸ್ ಅವರು ತಮ್ಮ ಸ್ವಂತ ಸಂಪಾದನೆಯ ಹಣದಿಂದ ೮೫೬ ಟಕಾಗಳನ್ನು ಆ ನಲವತ್ತೆರಡು ಕುಟುಂಬಗಳಿಗೆ ಬಡ್ಡಿ ರಹಿತ ಸಾಲವನ್ನಾಗಿ ನೀಡಿದರು.

ಈ ಔದಾರ್ಯಪೂರ್ಣ ಕಾರ್ಯ ಯೂನಸ್ ಅವರ ಮನಸ್ಸಿಗೆ ಸ್ವಲ್ಪಮಟ್ಟಿನ ಸಮಾಧಾನವನ್ನೇನೋ ತಂದಿತು. ಆದರೆ, ಬಾಂಗ್ಲಾದೇಶದ ಬಡತನದ ಸಮಸ್ಯೆಗೆ ಇದು ವ್ಯಾವಹಾರಿಕ ಸಮಾಧಾನವೇನೂ ಆಗಿರಲಿಲ್ಲ ಎಂಬುದು ಸ್ಪಷ್ಟವಾದ ಸಂಗತಿಯೇ ಆಗಿತ್ತು. ಸದಭಿಪ್ರಾಯವನ್ನುಳ್ಳ ವ್ಯಕ್ತಿಗಳು ನೀಡಬಹುದಾಗಿದ್ದ ಬಡ್ಡಿ ರಹಿತ ಸಾಲಗಳು ಲಕ್ಷಾಂತರ ಮಂದಿ ಬಡವರಿಗೆ ತಮ್ಮ ಕಾಲಿನ ಮೇಲೆ ನಿಂತುಕೊಳ್ಳುವಂತೆ ಮಾಡುವುದು ಸಾಧ್ಯವಿರಲಿಲ್ಲ, ಇದಕ್ಕಿಂತಲೂ ಉತ್ತಮವಾದ ಮಾರ್ಗವೊಂದನ್ನು ಇದಕ್ಕಾಗಿ ರೂಪಿಸಬೇಕಾಗಿತ್ತು.

ಬ್ಯಾಂಕುಗಳು ಬಡವರಿಗೆ ಸಾಲವನ್ನೇಕೆ ಕೊಡಬಾರದು? ಸರ್ಕಾರಿ ಸ್ವಾಮ್ಯದ ಜನತಾ ಬ್ಯಾಂಕಿನ ವಿಶ್ವವಿದ್ಯಾನಿಲಯ ಶಾಖೆಯ ವ್ಯವಸ್ಥಾಪಕರಿಗೆ ಯೂನಸ್ ಅವರು ಈ ಪ್ರಶ್ನೆಯನ್ನು ಹಾಕಿದಾಗ, ಅವರು ಈ ಸಲಹೆಯನ್ನು ಅಲ್ಲಗಳೆಯುತ್ತ ಹೀಗೆಂದರು. "ಇದು ತುಂಬ ಅಪಾಯಕಾರಿಯಾದ ಕ್ರಮವಾಗುತ್ತದೆ. ಈ ಜನರು ಪೂರಕ ಜಾಮೀನನ್ನೇನೂ ಕೊಡಲಾರರು. ಅವರೇನಾದರೂ ಸಾಲವನ್ನು ಹಿಂದಿರುಗಿಸದೆ ಹೋದಲ್ಲಿ, ನಮ್ಮ ಹಣವನ್ನು ವಸೂಲುಮಾಡಿಕೊಳ್ಳುವುದಕ್ಕೆ ನಮಗೆ ದಾರಿಯೇ ಇರುವುದಿಲ್ಲ." ಇದರಿಂದ ಎದೆಗುಂದದೆ, ಯೂನಸ್ ಅವರು ಢಾಕಾದಲ್ಲಿನ ಜನತಾ ಬ್ಯಾಂಕಿನ ಕೇಂದ್ರ ಕಛೇರಿಗೆ ಹೋಗಿ, ಒಟ್ಟಾರೆ ೧೫,೦೬೦ ಟಕಾಗಳಷ್ಟು ಮೊತ್ತದ ಏಳು ಸಾಲ ನೀಡಿಕೆ ಪ್ರಸ್ತಾವಗಳನ್ನು ಅನುಮೋದಿಸುವಂತೆ ಅಲ್ಲಿನ ಹಿರಿಯ ಅಧಿಕಾರಿಗಳ ಮನವೊಲಿಸಿದರು.

ಆದರೆ, ಇವರಲ್ಲಿ ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಯೂನಸ್ ಅವರೇ ಜಾಮೀನು ಒದಗಿಸಬೇಕಾಗಿಬಂತು.

ಕಾರ್ಯಸಾಧ್ಯ ಯೋಜನೆ: ತಮ್ಮ ಪ್ರಯತ್ನಕ್ಕೆ ದೊರೆತ ಯಶಸ್ಸು ಯೂನಸ್ ಅವರಿಗೆ ಸಂತೋಷವನ್ನು ತಂದಿತಾದರೂ, ಬ್ಯಾಂಕರುಗಳ ವಾದವಲ್ಲಿ ಸತ್ಯಾಂಶವೊಂದಿದೆ ಎಂಬುದು ಅವರಿಗೆ ಚೆನ್ನಾಗಿಯೇ ತಿಳಿದಿತ್ತು. ಜನರಿಗೆ ಸಾಲ ನೀಡಿ ಅವರು ಅದನ್ನು ಹಿಂದಿರುಗಿಸುತ್ತಾರೆಂದು ತೆಪ್ಪಗೆ ನಂಬಿ ಕುಳಿತಿರುವುದು ಸಾಧ್ಯವಿಲ್ಲ ಎಂಬುದೇ, ಆ ಸಂಗತಿಯಾಗಿತ್ತು. ಹೇಗಾದರೂ ಮಾಡಿ, ಈ ಪೂರಕ ಜಾಮೀನಿನ ಸಮಸ್ಯೆಗೆ ಪರಿಹಾರವೊಂದನ್ನು ಕಂಡುಕೊಳ್ಳಬೇಕಾಗಿತ್ತು.

ವಿವರಗಳನ್ನು ರೂಪಿಸುವುದಕ್ಕೆ ಸ್ವಲ್ಪ ಕಾಲ ಹಿಡಿಯಿತು. ಆದರೆ, ಯೂನಸ್ ಅವರು ಈ ಪೂರಕ ಜಾಮೀನಿಗೆ ಬದಲಾಗಿ ಸಮಾನ ಸ್ತರದ ಒತ್ತಾಯ ಕಾರ್ಯಶೀಲವಾಗಿರುವಂಥ ಯೋಜನೆಯೊಂದನ್ನು ರೂಪಿಸುವಲ್ಲಿ ಕೊನೆಗೂ ಯಶಸ್ವಿಯಾದರು. ಸಾಲಗಾರರು ತಮ್ಮ ತಮ್ಮಲ್ಲಿಯೇ ಐದು ಮಂದಿಯ ತಂಡಗಳನ್ನು ರಚಿಸಿಕೊಳ್ಳುವಂತೆ ಮಾಡುವುದೇ ಈ ಯೋಜನೆಯ ತಂತ್ರವಾಗಿತ್ತು. ಇವರೆಲ್ಲ ಒಂದೇ ಹಳ್ಳಿಯ ಮಿತ್ರವರ್ಗದವರಾಗಿದ್ದು ಸಾಲದ ಹೊಣೆಗಾರಿಕೆಯನ್ನು ಗೌರವಿಸುವಂತೆ ಪರಸ್ಪರ ಪ್ರೋತ್ಸಾಹಿಸುವಂತೆ ಮಾಡಲಾಗಿತ್ತು. ವಾರಕ್ಕೊಮ್ಮೆ ಈ ಮಿತ್ರವರ್ಗದ ಸಭೆ ನಡೆಯುವಂತೆ ಯೋಜಿಸಲಾಗಿದ್ದು, ಈ ಸಭೆಗೆ ಹಾಜರಾಗುವುದನ್ನು ಕಡ್ಡಾಯಗೊಳಿಸಲಾಗಿತ್ತು. ತಮ್ಮ ಗುಂಪಿನ ಸದಸ್ಯರಿಗೆ ದೊರೆಯಬೇಕಾಗಿರುವ ಸಾಲದ ಮೊಕ್ತ ಎಷ್ಟೆಂಬುದನ್ನು ಈ ಸಭೆಯೇ ತೀರ್ಮಾನಿಸುತ್ತಿತ್ತು. ಮರುಪಾವತಿಯ ಹೊಣೆಗಾರಿಕೆಯನ್ನು ಸುಲಭವಾಗಿಸುವ ಸಲುವಾಗಿ, ಒಂದು ವರ್ಷದ ಅವಧಿಗೆ ಹರಡಲಾದ ವಾರದ ಕಂತುಗಳಲ್ಲಿ ಸಾಲವನ್ನು ತೀರಿಸುವ ವ್ಯವಸ್ಥೆ ಮಾಡಲಾಗುತ್ತಿತ್ತು. ಒಂದು ಸಾಲವನ್ನು ಹಿಂದಿರುಗಿಸಿದ ಬಳಿಕ, ಸದಸ್ಯರು ಇನ್ನೊಂದು ಸಾಲವನ್ನು ಪಡೆದುಕೊಳ್ಳಬಹುದಾಗಿತ್ತು. ಆದರೆ, ಆ ತಂಡವನ್ನು ತನ್ನ ಸದಸ್ಯರ ಸಾಲಕ್ಕೋಲಗಳಿಗೆ ಜವಾಬುದಾರನನ್ನಾಗಿಸಲಾಗಿತ್ತು. ಒಬ್ಬನೇ ಒಬ್ಬ ಸದಸ್ಯ ಸುಸ್ತಿದಾರನಾದರೂ—ಅಂದರೆ, ಸಾಲದ ಕಂತುಗಳನ್ನು ಸರಿಯಾಗಿ ಪಾವತಿಮಾಡಲು ತಪ್ಪಿದರೆ, ಆ ತಂಡದ ಬೇರಾವ ಸದಸ್ಯನಿಗೂ ಇನ್ನು ಮುಂದೆ ಸಾಲ ದೊರೆಯುವುದಿಲ್ಲವೆಂಬ ನಿಬಂಧನೆಯನ್ನು ಹಾಕಲಾಯಿತು.

ಉಳಿತಾಯವೂ ಕಡ್ಡಾಯವೇ ಆಗಿತ್ತು. ಪ್ರತಿಯೊಂದು ಸಾಲದ ಶೇಕಾಡ ಐದರಷ್ಟು ಮೊತ್ತವನ್ನು ಬ್ಯಾಂಕುಗಳು ಹಿಡಿದಿಟ್ಟುಕೊಂಡು, ಅದನ್ನು 'ವಿಶೇಷ ನಿಧಿ'ಗೆ ವರ್ಗಾಯಿಸಲಾಗುತ್ತಿತ್ತು. ಇದಕ್ಕೆ ತಂಡದ ಪ್ರತಿಯೊಬ್ಬ ಸದಸ್ಯನೂ ವಾರಕ್ಕೊಂದು ಟಕಾ ದೇಣಿಗೆಯನ್ನು ಸಲ್ಲಿಸಬೇಕಾಗಿತ್ತು. ತಂಡದವರೇ ಗೊತ್ತು ಪಡಿಸಬಹುದಾದ ಷರತ್ತುಗಳ ಮೇಲೆ, ಈ ನಿಧಿಯಿಂದಲೂ ಸದಸ್ಯರು ಸಾಲವನ್ನು ಪಡೆದುಕೊಳ್ಳಬಹುದಾಗಿತ್ತು.

೧೯೭೮ರಲ್ಲಿ ಯೂನಸ್ ಅವರು ತಮ್ಮ ಈ ಸಾಲ ಯೋಜನೆಯನ್ನು ಜೋಬ್ರಾದ ಸುತ್ತಮುತ್ತಣ ಹಳ್ಳಿಗಳಿಗೆ ವಿಸ್ತರಿಸತೊಡಗಿದರು. ಈ ಯೋಜನೆಯ ಯಶಸ್ಸಿನ ಸುದ್ದಿ ಹರಡುತ್ತ ಬಂದಂತೆ, ಇತರ ಬ್ಯಾಂಕುಗಳೂ ಈ ಯೋಜನೆಗೆ ಹಣಕಾಸಿನ ಬೆಂಬಲವನ್ನು ನೀಡಲು ಮುಂದೆಬಂದುವು. ೧೯೮೧ರಲ್ಲಿ ಕೃಷಿ ವಿಕಾಸಕ್ಕಾಗಿ ಮೀಸಲಾಗಿದ್ದ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ನಿಧಿ, ಈ ಪ್ರಯೋಜನೆಯ ಮೇರೆಗೆ ಬಾಂಗ್ಲಾದೇಶದ ಇತರ ಭಾಗಗಳಲ್ಲಿಯೂ ಕಾರ್ಯಾರಂಭಮಾಡಲು ಅನುಕೂಲವಾಗುವಂತೆ ೩.೪ ದಶಲಕ್ಷ ಡಾಲರುಗಳಷ್ಟು ಮೊತ್ತದ ಸಾಲವನ್ನು ನೀಡಿತು. ಆದರೆ, ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ತುಂಬ ತೊಡಕಿನ ಕೆಲಸವೇ ಆಗಿತ್ತು. ಹೀಗಾಗಿ ೧೯೮೩ರಲ್ಲಿ ಬಾಂಗ್ಲಾದೇಶ ಸರ್ಕಾರ ಗ್ರಾಮೀಣ ಬ್ಯಾಂಕುಗಳ ಸ್ಥಾಪನೆಗೆ ಅನುಮೋದನೆ ನೀಡಿತು. ತೀರ ಬಡವರಾಗಿರುವಂಥ ವ್ಯಕ್ತಿಗಳಿಗೆ ಮಾತ್ರವೇ ಈ ಬ್ಯಾಂಕುಗಳು ಸಾಲ ನೀಡಬೇಕೆಂದು ಕಟ್ಟುಪಾಡು ಮಾಡಲಾಯಿತು. ಯೂನಸ್ ಅವರನ್ನು ಈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಲಾಯಿತು.

ಗ್ರಾಮೀಣ ಬ್ಯಾಂಕಿನ ಕಾರ್ಯ ಪ್ರಗತಿಯ ದಾಖಲೆ ಜಗತ್ತಿನಾದ್ಯಂತ ಅರ್ಥಶಾಸ್ತ್ರಜ್ಞರು ಕಿವಿ ಕೊಡವಿಕೊಂಡು ಕುಳಿತುಕೊಳ್ಳುವಂತೆ ಮಾಡಿತು. ಅಭಿವೃದ್ಧಿ ತಜ್ಞರು ಇದೇ ಮೊದಲಬಾರಿಗೆ ಬಾಂಗ್ಲಾದೇಶಕ್ಕೆ ಭೇಟಿಕೊಡ ತೊಡಗಿದರು— ಸಲಹೆ ನೀಡುವ ಸಲುವಾಗಿಯಲ್ಲ, ಬಾಂಗ್ಲಾ ದೇಶದ ಪ್ರಯೋಗದಿಂದ ಕಲಿತುಕೊಳ್ಳುವ ಸಲುವಾಗಿ. ಏಪ್ರಿಲ್ ೧೯೮೫ರಲ್ಲಿ ಯೂನಸ್ ಅವರನ್ನು ಭೇಟಿ ಮಾಡಿದ ಬಳಿಕ, ಮಲೇಷ್ಯಾದಲ್ಲಿ ಬೋಧಿಸುತ್ತಿದ್ದ ಡೇವಿಡ್ ಗಿಬ್ಬನ್ಸ್ ಅವರು ಮುಂದಿನ ವರ್ಷವೇ, ಗ್ರಾಮೀಣ ಬ್ಯಾಂಕ್ ಮಾದರಿಯ ಬಡತನವಿರೋಧಿ ಕಾರ್ಯಯೋಜನೆಯೊಂದನ್ನು ಆರಂಭಿಸಿದರು. ಇಂದು ಈ ಕಾರ್ಯಯೋಜನೆಯ ಮೇರೆಗೆ ೧೧,೦೦೦ಕ್ಕೂ ಹೆಚ್ಚು ಮಂದಿ ಸಾಲಗಾರರಿಗೆ ೩.೪ ದಶಲಕ್ಷ ಡಾಲರು

ಗಳಷ್ಟು ಮೊತ್ತದ ಸಾಲಗಳನ್ನು ವಿತರಿಸಲಾಗಿದ್ದು, ಇದು ಅವರ ಮಾಸಿಕ ಆದಾಯವನ್ನು ಶೇ. ೫೦ರಷ್ಟು ಹೆಚ್ಚಿಸಲು ನೆರವಾಗಿದೆ. ಮರುಪಾವತಿಯ ದರವೂ ಶೇ. ೯೯.೯ರಷ್ಟಾಗಿದೆ.

ಮಾರ್ಗದರ್ಶಿ ಸೂತ್ರ: ೧೯೮೬ರಲ್ಲಿ ಯೂನಸ್ ಅವರು ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಭೇಟಿ ಕೊಟ್ಟರು. ಅಲ್ಲಿ ಅವರು ಬಾಂಗ್ಲಾದೇಶದ ಬಡವರಿಗೂ ಅಮೆರಿಕಾದಲ್ಲಿನ ಬಡವರಿಗೂ ಅನೇಕ ಸಾಮ್ಯಗಳು ಇರುವುದನ್ನು ಗುರುತಿಸಿದರು. ಇಂದು ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಖಾಸಗಿ ಪ್ರತಿಷ್ಠಾನಗಳು ಮತ್ತು ಬ್ಯಾಂಕುಗಳು ಗ್ರಾಮೀಣ ಬ್ಯಾಂಕ್ ಪದ್ಧತಿಯ ಮೇರೆಗೆ ರೂಪಿಸಲಾಗಿರುವ ೨೦ಕ್ಕೂ ಹೆಚ್ಚು ಪ್ರಾಯೋಜನೆಗಳಿಗೆ ನಿಧಿಗಳನ್ನು ಒದಗಿಸುತ್ತಿವೆ. 'ಶಿಕಾಗೋ ಪೂರ್ಣ ವೃತ್ತ ನಿಧಿ'ಯನ್ನು ಆರಂಭಿಸಿರುವ 'ಮಹಿಳೆಯರ ಸ್ವಯಂ ಉದ್ಯೋಗ ಪ್ರಾಯೋಜನೆ'ಯ ಕಾರ್ಯಪಾಲಕ ನಿರ್ದೇಶಕರಾಗಿರುವ ಕಾನ್ನಿ ಇವಾನ್ಸ್ ಅವರು ಹೀಗೆಂದಿದ್ದಾರೆ. "ಜನರ ಸಾಮರ್ಥ್ಯ ಮತ್ತು ಘನತೆಯ ವಿಚಾರದಲ್ಲಿ ಯೂನಸ್ ಅವರು ಇರಿಸಿ ಕೊಂಡಿರುವ ಅವಿಚಲಿತ ವಿಶ್ವಾಸವೇ ನಮ್ಮ ಕಾರ್ಯಕ್ಕೆ ಮಾರ್ಗದರ್ಷಿ ಸೂತ್ರವಾಗಿದೆ." ೧೯೮೮ ರಿಂದ ಈಚೆಗೆ 'ಪೂರ್ಣವೃತ್ತ ನಿಧಿ' ೯೦ ಮಂದಿ ಸಾಲಗಾರರಿಗೆ ೧,೦೦,೦೦೦ ಕ್ಕೂ ಹೆಚ್ಚು ಡಾಲರುಗಳಷ್ಟು ಮೊತ್ತದ ಸಾಲವನ್ನು ನೀಡಿದ್ದು, ಪ್ರತಿಯೊಂದು ಸೆಂಟನ್ನೂ ವಾಪಸ್ಸು ಪಡೆದಿದೆ.

ಜಗತ್ತಿನಾದ್ಯಂತ ಇಂದು ಕಾರ್ಯಶೀಲವಾಗಿರುವ ಗ್ರಾಮೀಣ ಬ್ಯಾಂಕ್ ಮಾದರಿಯ ಪ್ರಾಯೋಜನೆಗಳಲ್ಲಿ ಕಂಡುಬರುತ್ತಿರುವಂತೆ ಬಾಂಗ್ಲಾದೇಶದಲ್ಲಿಯೂ ಬಹುಪಾಲು ಸಾಲಗಾರರು ಮಹಿಳೆಯರೇ ಆಗಿದ್ದಾರೆ. ಇದಕ್ಕೆ ಕಾರಣವೇನೆಂಬುದನ್ನು ಯೂನಿಸ್ ಅವರು ಹೀಗೆ ವಿವರಿಸುತ್ತಾರೆ. "ಗಂಡಸರಿಗಿಂತಲೂ ಹೆಚ್ಚಾಗಿ ಈ ಮಹಿಳೆಯರು ಬಡತನದ ಬವಣೆಯನ್ನೇ ತೀವ್ರವಾಗಿ ಅನುಭವಿಸುತ್ತಾರೆ. ಕುಟುಂಬದ ಸದಸ್ಯರಲ್ಲಿ ಯಾರಾದರೂ ಒಬ್ಬರು ಉಪವಾಸ ಮಾಡಬೇಕಾಗಿ ಬಂದಿತೆಂದರೆ, ಆ ವ್ಯಕ್ತಿ ತಾಯಿಯೇ ಆಗಿರುತ್ತಾಳೆ ಎಂಬುದು ಅಲಿಖಿತ ಕಾನೂನೇ ಆಗಿಬಿಟ್ಟಿರುತ್ತದೆ."

ಹೀಗಾಗಿ ತಮ್ಮ ಬಾಳುವೆಯನ್ನು ಉತ್ತಮಪಡಿಸಿಕೊಳ್ಳಲು ನೆರವಾಗುವಂಥ ಅವಕಾಶಗಳನ್ನು ಬಾಚಿಕೊಳ್ಳಲು ಮಹಿಳೆಯರು ವಿಶೇಷವಾಗಿ ಕಾತರದಿಂದ ಇರುತ್ತಾರೆ. ಸಾಲಗಾರರೆಲ್ಲರೂ ತಮ್ಮ ತಮ್ಮ ಹೆಸರುಗಳನ್ನು ಬರೆಯು

ವುದನ್ನು ಕಲಿತುಕೊಂಡಿರಬೇಕೆಂಬ ಷರತ್ತನ್ನು ಪೂರೈಸುವ ಸಲುವಾಗಿ ಬಾಂಗ್ಲಾದೇಶದ ೬೦ ವರ್ಷ ವಯಸ್ಸಿನ ಮಹಿಳೆಯೊಬ್ಬಳು ಎಷ್ಟು ಶ್ರಮ ವಹಿಸಿ ದುಡಿದಳು ಎಂಬುದನ್ನು ಗ್ರಾಮೀಣ ಬ್ಯಾಂಕಿನ ಅಧಿಕಾರಿಯೊಬ್ಬರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಆಕೆ ಅಡುಗೆ ಮಾಡುತ್ತಿದ್ದ ಅವಧಿಯಲ್ಲಿಯೂ ಕೈಯಲ್ಲಿ ಚಿತ್ತವೊಂದನ್ನು ಹಿಡಿದುಕೊಂಡು ನೆಲದ ಮೇಲೆ ತನ್ನ ಸಹಿಯನ್ನು ಅಭ್ಯಾಸ ಮಾಡಿಕೊಳ್ಳುತ್ತ ಇದ್ದಳು. ಇದಕ್ಕೆ ಆರು ತಿಂಗಳ ಅವಧಿಯೇ ಬೇಕಾಯಿತಾದರೂ, ಅಂತಿಮವಾಗಿ ಆಕೆ ತನ್ನ ಸಹಿ ಹಾಕುವುದನ್ನು ಕಲಿತು ಕೊಂಡಳು.

ಗಂಡಸರಿಗಿಂತಲೂ ಹೆಚ್ಚಿನ ಕಾಳಜಿಯಿಂದ ಹೆಂಗಸರು ತಮ್ಮ ಸಂಪನ್ಮೂಲ ಗಳನ್ನು ಪೋಷಿಸಿಕೊಂಡು ಬರುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರುತ್ತಾರೆ. ಒಬ್ಬ ಮಹಿಳೆ ತನ್ನ ಹೆಚ್ಚುವರಿ ಸಂಪಾದನೆಯಿಂದ ಸೊಳ್ಳೆಯ ಪರದೆಯೊಂದನ್ನು ಕೊಂಡುಕೊಂಡಳು—ತನಗಾಗಿ ಅಲ್ಲ, ತಾನು ಇತ್ತೀಚೆಗೆ ಸಾಲಮಾಡಿ ಕೊಂಡು ಕೊಂಡಿದ್ದ ಹಸುವಿಗಾಗಿ. ಗ್ರಾಮೀಣ ಬ್ಯಾಂಕಿನ ವ್ಯವಸ್ಥಾಪಕರಾಗಿದ್ದ ಮುಜಮ್ಮಲ್ ಹಕ್ ಅವರಿಗೆ ಈ ವಿಚಾರವನ್ನು ವಿವರಿಸುತ್ತ ಆಕೆ ಹೀಗೆಂದ ಳಂತೆ: “ನನ್ನ ರಕ್ತವನ್ನು ಸೊಳ್ಳೆಗಳು ಈಗಾಗಲೇ ಹೀರಿಬಿಟ್ಟವೆ. ಈ ಹಸು ಚೆನ್ನಾಗಿದ್ದರೆ, ನನ್ನ ರಕ್ತ ನನಗೆ ಹಿಂದಿರುಗಿ ಬರಬಹುದು.

ವಾಸ್ತವವಾಗಿ, ಮಹಿಳೆಯರ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸುವುದು ಎಲ್ಲ ದೃಷ್ಟಿಗಳಿಂದಲೂ ಅರ್ಥಪೂರ್ಣವಾಗಿದೆ. ಅದು ಬ್ಯಾಂಕಿಗೂ ಪ್ರಯೋಜನ ಕಾರಿಯಾಗುತ್ತದೆ—ಗಂಡಸರಿಗಿಂತಲೂ ಹೆಂಗಸರೇ ಸಾಲದ ವಿಚಾರದಲ್ಲಿ ಹೆಚ್ಚು ವಿಶ್ವಾಸಾರ್ಹರಾಗಿರುತ್ತಾರೆ. ಆದರಿಂದ ಹೆಚ್ಚು ಹೆಚ್ಚು ಜನರಿಗೂ ಉಪಕಾರ ವಾಗುತ್ತದೆ. ಇದರ ಬಗ್ಗೆ ಯೂನಸ್ ಅವರು ಹೀಗೆನ್ನುತ್ತಾರೆ: “ಬಡ ತಂದೆಯೊಬ್ಬ ಹೆಚ್ಚಿನ ಹಣವನ್ನು ಸಂಪಾದಿಸತೊಡಗಿದರೆ, ಅದನ್ನು ತನಗಾಗಿ ಖರ್ಚುಮಾಡತೊಡಗುತ್ತಾನೆ. ಆದರೆ, ಬಡ ತಾಯಿ ಅದನ್ನು ತನ್ನ ಮಕ್ಕಳಿಗಾಗಿ ಖರ್ಚು ಮಾಡುತ್ತಾಳೆ.”

ಮಹಿಳೆಯರನ್ನು ಈ ಪ್ರಾಯೋಜನೆಯಲ್ಲಿ ತೊಡಗಿಸುವ ಗ್ರಾಮೀಣ ಬ್ಯಾಂಕಿನ ಪ್ರಸ್ತಾವಕ್ಕೆ ಮೊದಲಿಗೆ ಗಮನಾರ್ಹ ಪ್ರಮಾಣದ ವಿರೋಧವೇ ವ್ಯಕ್ತವಾಯಿತು. ಸಂಪ್ರದಾಯವಾದಿಗಳಾಗಿದ್ದ ಧಾರ್ಮಿಕ ನೇತಾರರು ಬ್ಯಾಂಕುಗಳು ಇಸ್ಲಾಮ್ ತತ್ತ್ವಕ್ಕೆ ವಿರುದ್ಧವಾಗಿ ವರ್ತಿಸುತ್ತಿವೆಯೆಂಬ ಆರೋಪವನ್ನು ಹೊರಿಸಿದರು. ತಮ್ಮ ಹೆಂಡಂದಿರು ಹೆಚ್ಚು ಹೆಚ್ಚು ಸ್ವತಂತ್ರರಾಗಿ ಬಿಡಬಹುದೆಂದು

ಭಯಪಟ್ಟ ಅನೇಕ ಗಂಡಸರು, ಸಾಲಕ್ಕೇನಾದರೂ ಅರ್ಜಿಹಾಕಿದರೆ 'ತಲಾಖ್' ನೀಡುವುದಾಗಿ (ವಿವಾಹ ವಿಚ್ಛೇದನ ಮಾಡುವುದಾಗಿ) ತಮ್ಮ ಹೆಂಡಂದಿರಿಗೆ ಬೆದರಿಕೆ ಹಾಕಿದರು. ಆದರೆ ಅವರ ಅನುಭವ ಬಹುಬೇಗ ಅವರ ದೃಷ್ಟಿಕೋನ ವನ್ನು ಬದಲಾಯಿಸಿತು. ಗ್ರಾಮೀಣ ಬ್ಯಾಂಕಿನ ಕಾರ್ಯಕರ್ತರಲ್ಲಿ ಒಬ್ಬರಾದ ಮಹ್‌ಬುಬುರ್ ರಹಮಾನ್ ಅವರು ತನ್ನ ಗಂಡನ ವಿರೋಧವನ್ನು ಲೆಕ್ಕಿಸದೆ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಮಹಿಳೆಯೊಬ್ಬಳ ವಿಚಾರವನ್ನು ನೆನಪಿಸಿ ಕೊಳ್ಳುತ್ತ ಮುಗುಳ್ನಗೆಯೊಂದಿಗೆ ಹೀಗೆನ್ನುತ್ತಾರೆ: "ನನಗೆ ನನ್ನ ಹೆಂಡತಿಯ ವಿಷಯದಲ್ಲಿ ಅವೆಷ್ಟು ಅಭಿಮಾನವಿದೆ ಗೊತ್ತೆ? ಕುಟುಂಬದ ಆದಾಯಕ್ಕೆ ಅವಳು ಎಷ್ಟರ ಮಟ್ಟಿಗೆ ನೆರವಾಗುತ್ತ ಇದ್ದಾಳೆ ಎಂಬುದು ನಿಮಗೆ ಗೊತ್ತೆ? ಎಂದು ಎರಡು ವರ್ಷಗಳ ಬಳಿಕ ಅವನು ನನಗೆ ಹೇಳಿದ."

ಢಾಕಾದಲ್ಲಿ ನೆಲೆಗೊಂಡಿರುವ 'ಚಿಂತನ-ಚಿಲುಮೆ' ಯಾಗಿರುವ, 'ಅಭಿವೃದ್ಧಿ ಅಧ್ಯಯನ ಸಂಸ್ಥೆ' ಕೈಗೊಂಡ ಸರ್ವೇಕ್ಷಣೆಯೊಂದು ಗ್ರಾಮೀಣ ಬ್ಯಾಂಕಿನ ಸಾಲಗಾರರು ವಾರ್ಷಿಕವಾಗಿ ಸರಾಸರಿ ಶೇ|| ೧೭ ರಷ್ಟು ಪ್ರಮಾಣದ ಆದಾಯದ ಹೆಚ್ಚಳವನ್ನು ಸಾಧಿಸಿಕೊಳ್ಳುತ್ತಿದ್ದರೆಂದು ಸೂಚಿಸಿದೆ. ಇನ್ನೂ ಅನೇಕರು ಇದಕ್ಕಿಂತಲೂ ಹೆಚ್ಚಿನ ಸಾಧನೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ೧೯೮೩ರಲ್ಲಿ ಶಂಕರಿರಾಣಿ ಕರ್ಮರ್‌ಕರ್ ಎಂಬಾಕೆ ನೇಕಾರಳಾಗಿ ದಿನವಹಿ ೧೦ ಟಕಾಗಳನ್ನು ಸಂಪಾದಿಸುತ್ತಿದ್ದಳು. ಆಮೇಲೆ ಆಕೆ ಗ್ರಾಮೀಣ ಬ್ಯಾಂಕಿನಿಂದ ೧೦೦೦ ಟಕಾ ಗಳನ್ನು ಸಾಲವಾಗಿ ಪಡೆದುಕೊಂಡು, ಮಗ್ಗವೊಂದನ್ನು ಕೊಂಡುಕೊಂಡಳು. ಮಾರನೆಯ ವರ್ಷವೇ ಆಕೆ ಆ ಸಾಲವನ್ನು ಹಿಂದಿರುಗಿಸಿ, ಇನ್ನೊಂದು ಸಾಲವನ್ನು ಪಡೆದುಕೊಂಡು ಇನ್ನೊಂದು ಮಗ್ಗವನ್ನು ಕೊಂಡುಕೊಂಡಳು. ಇಂದು ಐದು ಮಗ್ಗಗಳ ಒಡತಿಯಾಗಿದ್ದು ಐವರು ನೇಕಾರರನ್ನು ನೇಮಿಸಿ ಕೊಂಡಿರುವ ಆಕೆ ವಾರ್ಷಿಕವಾಗಿ ೫೦,೦೦೦ಕ್ಕೂ ಹೆಚ್ಚು ಆದಾಯವನ್ನು ಗಳಿಸುತ್ತಿದ್ದಾಳೆ.

ತಮ್ಮ ಹೆಚ್ಚುವರಿ ಆದಾಯದಿಂದ, ಗ್ರಾಮೀಣ ಬ್ಯಾಂಕಿನ ಸಾಲಗಾರರೆಲ್ಲರೂ ೧೦೦ ಟಕಾಗಳ ಗ್ರಾಮೀಣ ಬ್ಯಾಂಕಿನ ಷೇರನ್ನು ಕೊಂಡುಕೊಳ್ಳಬೇಕೆಂದು ಒತ್ತಾಯಿಸಲಾಗಿದೆ. ಇದರ ಪರಿಣಾಮವಾಗಿ ೧೯೮೩ ರಲ್ಲಿ ಗ್ರಾಮೀಣ ಬ್ಯಾಂಕನ್ನು ಸ್ಥಾಪಿಸಿದಾಗ ಇದ್ದ ಬಾಂಗ್ಲಾದೇಶ ಸರ್ಕಾರದ ಹಿಡುವಳಿ ಶೇ. ೬೦ ರಿಂದ ಈಗ ಶೇಕಡಾ ೧೫ಕ್ಕೆ ಇಳಿದಿದೆ. ಯೂನಸ್ ಅವರು ಈ ವಿಚಾರದ ಬಗೆ ಹೀಗೆಂದು ಹೇಳುತ್ತಾರೆ: "ಇದು ಇನ್ನಷ್ಟು ಕಡಿಮೆಯಾಗುವುದನ್ನು ನಾನು

ಕಾಣಬಯಸುತ್ತೇನೆ. ಗ್ರಾಮೀಣ ಬ್ಯಾಂಕಿನ ಗ್ರಾಹಕರೇ ಅದರ ಒಡೆಯರಾಗ ಬೇಕು.

ಬ್ಯಾಂಕಿನ ೧೩ ಮಂದಿ ಸದಸ್ಯರ ನಿರ್ದೇಶಕ ಮಂಡಳಿಯಲ್ಲಿ ೯ ಮಂದಿ ಗ್ರಾಹಕರೇ ನಿರ್ದೇಶಕರುಗಳಾಗಿದ್ದಾರೆ. ಹೀಗಾಗಿ, ಅವಿದ್ಯಾವಂತರಾದ ರಿಕ್ಷಾ ವಾಲಾಗಳು, ಬುಟ್ಟಿ ಹೆಣೆಯುವವರು ಮತ್ತು ಸಿಹಿತಿಂಡಿ ಮಾರಾಟಗಾರರು ವಾರ್ಷಿಕವಾಗಿ ೧೫೦ ದಶಲಕ್ಷ ಟಕಾಗಳ ವಹಿವಾಟನ್ನು ಹೊಂದಿರುವ ಈ ಸಂಸ್ಥೆಯ ನೀತಿಗಳನ್ನು ನಿರ್ಧರಿಸುವಲ್ಲಿ ನೆರವಾಗುತ್ತಿದ್ದಾರೆ. ಗ್ರಾಮೀಣ ಬ್ಯಾಂಕಿನ ಉಪ ವ್ಯವಸ್ಥಾಪಕ ನಿರ್ದೇಶಕರಾಗಿರುವ ಖಲೀದ್ ಶಾಮ್ಸ್ ಅವರೆನ್ನುತ್ತಾರೆ: "ಮಂಡಳಿಯ ಪ್ರತಿಯೊಂದು ಸಭೆ ನಡೆಯುವುದಕ್ಕೆ ಮೊದಲು ಬ್ಯಾಂಕಿನ ಸಿಬ್ಬಂದಿ ಈ ಸಾಲಗಾರ ನಿರ್ದೇಶಕರಿಗೆ ಕಾರ್ಯಸೂಚಿಯ ಬಗ್ಗೆ ಮಾಹಿತಿ ನೀಡುತ್ತಾರೆ ಹಾಗೂ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. ನಿರ್ದೇಶಕರುಗಳು ತಮ್ಮ ಅಭಿಪ್ರಾಯಗಳನ್ನು ಬಲವಾಗಿಯೇ ಮಂಡಿಸುತ್ತಾರೆ." ಸಾಲಗಾರರಲ್ಲದ ಗ್ರಾಮೀಣ ಬ್ಯಾಂಕಿನ ನಿರ್ದೇಶಕರೊಬ್ಬರು "ನೀವು ಹೇಗೆ ಈ ಚರ್ಚೆಯನ್ನು ಅರ್ಥಮಾಡಿಕೊಳ್ಳಬಲ್ಲಿರಿ?" ಎಂಬುದಾಗಿ ಮಂಡಳಿಯ (ಸಾಲಗಾರ ಸದಸ್ಯ) ನಿರ್ದೇಶಕರಾದ ನೂರ್ ಜಹಾನ್ ಬೇಗಂ ಅವರು ಕ್ರುದ್ಧರಾಗಿ ಹೀಗೆಂದು ಉತ್ತರಿಸಿದ್ದರು: "ನಾನು ಮಕ್ಕಳನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಿದ್ದೇನೆ. ಕುಟುಂಬವೊಂದನ್ನು ನಡೆಸುತ್ತಿದ್ದೇನೆ. ಬಾಳಿನ ಒಗ್ಗೆ ಹಾಗೂ ನನ್ನ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರ ಬಗ್ಗೆ ನಾನು ಸಾಕಷ್ಟು ತಿಳಿದುಕೊಂಡಿದ್ದೇನೆ."

ವರದಕ್ಷಿಣೆ ವ್ಯವಹಾರ: ಗ್ರಾಮೀಣ ಬ್ಯಾಂಕ್ ತನ್ನ ಗ್ರಾಹಕರಿಗೆ ಮನೆ ಕಟ್ಟಲು ಸಾಲ ನೀಡುತ್ತದೆ ಹಾಗೂ ಅಸಲು ಬೆಲೆಯಲ್ಲಿ ಉಪಯುಕ್ತ ವಸ್ತುಗಳನ್ನು ಒದಗಿಸುತ್ತದೆ: ಉದಾಹರಣೆಗೆ, ತರಕಾರಿ ತೋಟಕ್ಕೆ ಬೇಕಾಗುವ ಬೀಜ ಮತ್ತು ಸಸಿಗಳು; ನೀರನ್ನು ಶುದ್ಧೀಕರಿಸುವುದಕ್ಕೆ ಬೇಕಾಗುವ ಪಟಿಕ; ಗಳಗಂಡ ರೋಗವನ್ನು ಎದುರಿಸುವ ಸಲುವಾಗಿ ಅಯೋಡೀಕೃತ ಉಪ್ಪು. ನಿಯತಕಾಲಿಕವಾಗಿ ಕಾರ್ಯಾಗಾರಗಳನ್ನೂ ನಡೆಸಲಾಗುತ್ತದೆ. ಇಂಥ ಕಾರ್ಯಾಗಾರಗಳಲ್ಲಿ ಬ್ಯಾಂಕಿನ ಸಿಬ್ಬಂದಿ ನೈರ್ಮಲ್ಯ, ಚಿಕ್ಕ ಕುಟುಂಬ, ಮಕ್ಕಳ ಶಿಕ್ಷಣ ಮತ್ತು ವರದಕ್ಷಿಣೆಯಂಥ ಸಾಮಾಜಿಕ ಪಿಡುಗನ್ನು ಎದುರಿಸುವುದು—ಇವೇ ಮೊದಲಾದ ವಿಚಾರಗಳ ಮಹತ್ವವನ್ನು ತಿಳಿಯಹೇಳುತ್ತಾರೆ.

ಇಂಥ ಸಲಹೆ–ಸೂಚನೆಗಳು ಅವರ ಮನಸ್ಸನ್ನು ತಟ್ಟುತ್ತವೆ. ಸಾಲಗಾರರು ಸಾವಿರಾರು ಸಂಖ್ಯೆಯಲ್ಲಿ ಗ್ರಾಮೀಣ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದ್ದಾರೆ. ತಮ್ಮ ವಂತಿಗೆಗಳಿಂದಲೇ ಇವಕ್ಕೆ ಅಗತ್ಯವಾದ ನಿಧಿಯನ್ನು ಸಂಗ್ರಹಿಸಿದ್ದಾರೆ. ಅನೇಕರು ಹೆಚ್ಚು ಪೋಷಕಾಂಶಗಳನ್ನುಳ್ಳ ಆಹಾರಗಳನ್ನು ಸೇವಿಸುತ್ತಿದ್ದಾರೆ ಹಾಗೂ ತಮ್ಮ ಕುಟುಂಬಗಳನ್ನು ಯೋಜಿಸುತ್ತಿದ್ದಾರೆ. ವರದಕ್ಷಿಣೆ ಪದ್ಧತಿಯ ಮೇಲೆ ಅವರೀಗ ಆಕ್ರಮಣವನ್ನೇ ಎಸಗಿದ್ದಾರೆ. ತನ್ನ ಭಾವೀ ಅಳಿಯ ಮತ್ತು ಅವನ ಸಂಬಂಧಿಕರು ವರದಕ್ಷಿಣೆಯಾಗಿ ಸೈಕಲ್ಲನ್ನು ನೀಡಬೇಕೆಂದು ತನ್ನನ್ನು ಒತ್ತಾಯಿಸುತ್ತಿದ್ದಾರೆ ಎಂಬುದನ್ನು ಕುರಿಪುರದ ಅಮೀನಾ ಬೇಗಂ ತನ್ನ ತಂಡದವರು ಒಪ್ಪಿಕೊಂಡಾಗ, ಈ ಮಹಿಳೆಯರು ಅವರಿಗೊಂದು ಪಾಠ ಕಲಿಸಬೇಕೆಂದು ತೀರ್ಮಾನಿಸಿದರು. ಅವರು ಬೈಸಿಕಲ್ಲನ್ನು ಕೊಂಡುಕೊಂಡರು. ಮದುವೆಯ ಸಂಸ್ಕಾರಗಳ ಒಂದು ಸಂದರ್ಭದಲ್ಲಿ ಔಪಚಾರಿಕವಾಗಿ ವರನ ಸಂಬಂಧಿಕರು ಹೆಣ್ಣನ್ನು ಕರೆತರಬೇಕೆಂದು ಸೂಚಿಸಿದಾಗ, ಬಣ್ಣ ಬಣ್ಣದ ಸೀರೆಗಳಿಂದ ಸಿಂಗರಿಸಿದ್ದ ಸೈಕಲ್ಲನ್ನು ಅಲ್ಲಿಗೆ ತಳ್ಳಿಕೊಂಡು ಬಂದರು.

ಆ ಮಹಿಳೆಯರು ಆಗ ಹೀಗೆಂದು ಹೇಳಿದರು: "ಇಲ್ಲಿ ನೋಡಿ, ನಿಮಗೆ ಬೇಕಾಗಿದ್ದುದು ಸೈಕಲ್ಲೇ ಹೊರತು ಹೆಂಡತಿಯಲ್ಲ." ವರ ಹಾಗೂ ವರನ ಸಂಬಂಧಿಕರು ನಾಚಿ ನಿಂತಾಗ, ಮುಂದುವರಿದು ಅವರು ಹೀಗೆಂದು ಹೇಳಿದರು: "ನಿನ್ನ 'ಹೆಣ್ಣು' ನಿನ್ನೊಡನೆ ಊರಿಗೆ ತೆರಳಿದ ಬಳಿಕ ಗ್ರಾಮೀಣ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡು, ಬತ್ತದ ಹೊಟ್ಟು ತೆಗೆಯುವ ವಹಿವಾಟನ್ನು ಆರಂಭಿಸಬೇಕೆಂದಿದ್ದಾಳೆ. ಬತ್ತವನ್ನು ತರಲು ಹಾಗೂ ಮಾರುಕಟ್ಟೆಯಲ್ಲಿ ಅಕ್ಕಿಯನ್ನು ಮಾರಿಕೊಂಡು ಬರುವ ಸಲುವಾಗಿ ಈ ಸೈಕಲ್ಲನ್ನು ಉಪಯೋಗಿಸು." ಈ ಘಟನೆ ನಡೆದು ಏಳು ವರ್ಷಗಳಾಗಿವೆ. ಇಂದಿಗೂ ಅವನು ತನ್ನ ಹೆಂಡತಿ ಸಿದ್ಧಪಡಿಸಿದ ಅಕ್ಕಿಯನ್ನು ಮಾರಿಕೊಂಡು ಬರಲು ಆ ಸೈಕಲ್ಲನ್ನು ಬಳಸುತ್ತಿದ್ದಾನೆ.

ಅತ್ಯುತ್ತಮವಾದ ಮರುಪಾವತಿ ದರದಿಂದಾಗಿ, ೧೨,೫೦೦ ಮಂದಿ ಉದ್ಯೋಗಿಗಳನ್ನು ಒಳಗೊಂಡಿರುವ ಗ್ರಾಮೀಣ ಬ್ಯಾಂಕ್ ತನ್ನ ದೈನಂದಿನ ಕಾರ್ಯಾಚರಣೆಗಳ ವಿಷಯದಲ್ಲಿ ಇಂದು ಸ್ವಾವಲಂಬಿಯಾಗಿ ಪರಿಣಮಿಸಿದೆ. ಇಂದಿಗೂ ಈ ಬ್ಯಾಂಕ್ ಅಂತರ-ರಾಷ್ಟ್ರೀಯ ಸಂಸ್ಥೆಗಳಿಂದ ಹಣವನ್ನು ಸಾಲವಾಗಿ ಪಡೆದುಕೊಳ್ಳುತ್ತಲಿದೆ—ಆದರೆ, ಹೀಗೆ ಮಾಡುತ್ತಿರುವುದು ಹೊಸ ಶಾಖೆಗಳ ಸ್ಥಾಪನೆಗಾಗಿ ಮಾತ್ರವೇ; ಪ್ರತಿ ವರ್ಷವೂ ಸುಮಾರು ಇನ್ನೂರು ಹೊಸ ಶಾಖೆಗಳನ್ನು

ತೆರೆಯಲಾಗುತ್ತಿದೆ. ೧೯೯೫ರ ಹೊತ್ತಿಗೆ ಬಾಂಗ್ಲಾದೇಶದ ೬೮,೦೦೦ ಹಳ್ಳಿಗಳಲ್ಲಿ ೪೦,೦೦೦ ಹಳ್ಳಿಗಳನ್ನು ಈ ವ್ಯವಸ್ಥೆಯು ಒಳಕ್ಕೆ ತರಲು ಸಾಧ್ಯವಾದೀತೆಂದು ಯೂನಸ್ ಅವರು ನಂಬಿದ್ದಾರೆ.

ಯೂನಸ್ ಅವರು ಢಾಕಾದಲ್ಲಿ ವಾಸಮಾಡುತ್ತಿದ್ದಾರೆ. ಭೌತವಿಜ್ಞಾನಿಯಾಗಿರುವ ಅವರ ಹೆಂಡತಿ ಅಫ್ರೋಜಿ ಅವರು ಹತ್ತಿರದ ಜಹಾಂಗೀರ್‌ನಗರ ವಿಶ್ವವಿದ್ಯಾನಿಲಯದಲ್ಲಿ ಬೋಧಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ಆರು ವರ್ಷದ ಮಗಳೊಬ್ಬಳಿದ್ದಾಳೆ. ಯೂನಸ್ ಅವರು ಬಾಂಗ್ಲಾದೇಶದ ಅತ್ಯುನ್ನತ ಪ್ರಶಸ್ತಿಯಾದ ಸ್ವಾತಂತ್ರ್ಯೋತ್ಸವ ಪ್ರಶಸ್ತಿಯನ್ನೂ, ನೊಬೆಲ್ ಬಹುಮಾನಕ್ಕೆ ಸರಿಸಮಾನವಾಗಿರುವ ಏಷ್ಯಾದ ಪ್ರಶಸ್ತಿಯೆಂದು ಭಾವಿಸಲಾಗಿರುವ ರ‍್ಯಾಮನ್ ಮ್ಯಾಗ್ಸೇಸೇ ಪ್ರಶಸ್ತಿಯನ್ನೂ ಗಳಿಸಿದ್ದಾರೆ. ಸರ್ಕಾರದಲ್ಲಿ ಅವರಿಗೆ ಮೇಲಿಂದ ಮೇಲೆ ಸಚಿವ ಸಂಪುಟದ ಸ್ಥಾನಮಾನವನ್ನೂ ಕೊಡುತ್ತ ಬರಲಾಗಿದೆ.

ಆದರೆ ಬಾಂಗ್ಲಾದೇಶದ ಬಡವರು ಇವರ ಮೇಲೆ ಸುರಿಸುತ್ತಿರುವ ಪ್ರೀತಿಯ ಸುರಿಮಳೆಯಷ್ಟರ ಮಟ್ಟಿಗೆ ಬೇರೆ ಯಾವ ಪ್ರಶಸ್ತಿಯೂ ಇವರಿಗೆ ತೃಪ್ತಿಯನ್ನು ತಂದುಕೊಟ್ಟಿಲ್ಲ ಎಂಬುದು ಇತ್ತೀಚೆಗೆ ಮನವರಿಕೆಯಾಯಿತು. ಅವರು ಪದೇ ಪದೇ ಕೈಗೊಳ್ಳುವ ಗ್ರಾಮಾಂತರ ಪ್ರದೇಶದ ಪ್ರವಾಸದ ಸಂದರ್ಭವೊಂದರಲ್ಲಿ ಅವರ ಜೊತೆಗೂಡಿ ಹೋಗಿದ್ದಾಗ, ರಸ್ತೆಗಳ ಉದ್ದಕ್ಕೂ ಸಾಲುಗಟ್ಟಿ ನಿಂತಿದ್ದ ಬಾಂಗ್ಲಾದೇಶೀಯರು ಉಲ್ಲಾಸಪೂರ್ಣ ಜಯಘೋಷಣೆಗಳಿಂದ ಅವರನ್ನು ಸ್ವಾಗತಿಸುತ್ತಿದ್ದುದನ್ನು ಕಂಡೆ. ಸಭೆಗಳು ನಡೆದ ಸಂದರ್ಭಗಳಲ್ಲಿ ತಮ್ಮ ಅತ್ಯುತ್ತಮ ಉಡುಗೆಗಳನ್ನು ತೊಟ್ಟುಕೊಂಡು ಬಂದಿದ್ದ ಸಾಲಗಾರರು, ಅವರ ಪಾದಗಳಿಗೆ ನಮಸ್ಕರಿಸಲು, ಕಾಣಿಕೆಗಳನ್ನು ಸಲ್ಲಿಸಲು ಅಥವಾ ಏನಿಲ್ಲವೆಂದರೂ ವಂದನೆಗಳನ್ನು ತಿಳಿಸಲು ಮುಂದಾಗುತ್ತಿದ್ದರು. ಒಮ್ಮೆ ನನ್ನತ್ತ ತಿರುಗಿ, ಯೂನಸ್ ಹೆಮ್ಮೆಯಿಂದ ಹೇಳಿದರು: "ಅವರನ್ನು ನೋಡಿ, ಒಮ್ಮೆ ಅವರೂ ಅನ್ಯಾಯ-ಕ್ರೌರ್ಯಗಳಿಗೆ ಒಳಗಾಗಿದ್ದರು ಅವರೀಗ ಏನು ಸಾಧಿಸಿದ್ದಾರೆ ಎಂಬುದನ್ನು ನೋಡಿ." ಆ ಬಳಿಕ ಅವರು ಚತುರೋಕ್ತಿಯಿಂದ ಹೇಳಿದರು: "ಎಲ್ಲ [illegible] ಆದರೂ, ಬಡವರು ಬಯಸುವುದು ಇಷ್ಟು ಮಾತ್ರ : ಘನತೆ-ಗೌರವಗಳಿಂದ ಕೂಡಿದ ಒಂದು ಅವಕಾಶ!"

ಪ್ರಧಾನ್ ಗುರುದತ್ತ

ಕೊಳಚೆ ಕೊಂಪೆಯ ಮಹಾನುಭಾವ

(ಮುಂದುವರೆದುದು)

ಚಿಕ್ಕಂದಿನಿಂದಲೂ ಅವರಿಗೆ ಡಾಕ್ಟರ್ ಆಗಬೇಕೆಂಬ ಆಸೆಯಿತ್ತು. ಆದರೆ ಕುಟುಂಬದ ಆರ್ಥಿಕಸ್ಥಿತಿ ಚೆನ್ನಾಗಿರದುದರಿಂದ, ವಿದ್ಯಾಭ್ಯಾಸ ನಿಲ್ಲಿಸಿ, ಜೆಸ್ಸೋಪ್ಸ್ ಎಂಜನಿಯರಿಂಗ್ ಸಂಸ್ಥೆಯಲ್ಲಿ ಅಕೌಂಟ್ಸ್ ಅಸಿಸ್ಟೆಂಟ್ ಆಗಿ ಸೇರಿದರು ಮ್ಯಾಕ್‌ಕನ್. ಜೀವನೋಪಾಯಕ್ಕಾಗಿ ಹೀಗೆ ಒಂದು ಖಾಯಂ ಉದ್ಯೋಗ ಹೊಂದಿದ್ದರೂ, ತಮ್ಮ ಸುತ್ತ ವ್ಯಾಪಿಸಿರುವಂತಹ ತೀವ್ರದಾರಿದ್ರ್ಯ ದಿಂದಾಗಿ ಅವರು ಚಿಂತಾಕುಲರಾಗಿದ್ದರು. ಬಡವರಿಗೆ, ಅವರಲ್ಲೂ ವಿಶೇಷವಾಗಿ ಬಡತನದಲ್ಲಿ ನರಳುತ್ತಿರುವ ಮಕ್ಕಳಿಗೆ, ಉಪಯುಕ್ತವಾಗಬಲ್ಲ ಏನಾದರೊಂದು ಕೆಲಸವನ್ನು ಮಾಡಲು ಅವರು ಹಂಬಲಿಸುತ್ತಿದ್ದರು. ಆ ಮಕ್ಕಳಿಗೆ ಮೂಲ ಶಿಕ್ಷಣ ಹಾಗೂ ತಿನ್ನಲು ಸಾಕಷ್ಟು ಆಹಾರ—ಇಷ್ಟು ಸಿಗುವಂತಾದರೂ ಸಾಕು, ದಾರಿದ್ರ್ಯದಲ್ಲಿಯೂ ಅವರು ಮುಂದೆ ಬರಬಲ್ಲರು ಎಂದು ನಂಬಿದ್ದರು. ಮ್ಯಾಕ್‌ಕನ್ ಅವರ ವಿಚಾರಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡ ಅವರ ಸಹೋದ್ಯೋಗಿ ಶಿಶಿರ್‌ದಾಸ್‌ಗುಪ್ತರು ನೆರವಿನ ಭರವಸೆ ನೀಡಿದರು. ಇಬ್ಬರೂ ಒಂದಾಗಿ, ಕೊಳಚೆ ಪ್ರದೇಶವೊಂದರಲ್ಲಿ ಶಾಲೆಯನ್ನು ಪ್ರಾರಂಭಿಸಲು ನಿರ್ಧರಿಸಿದರು.

ಅನೇಕ ನಿವೇಶನಗಳಿಗೆ ಭೇಟಿ ನೀಡಿದ ಅನಂತರ, ಆಗ್ನೇಯ ಕಲ್ಕತ್ತದ ಸಪ್ಗಾಚಿಯಲ್ಲಿರುವ ಒಡ್ಡೊಡ್ಡಾಗಿರುವ ಸ್ಥಳವೊಂದನ್ನು ಆಯ್ಕೆಮಾಡಿದರು. ಯಾವುದೇ ನಾಗರಿಕ ಸೌಲಭ್ಯಗಳಿರದ ಆ ಪ್ರದೇಶದಲ್ಲಿ ಹತ್ತಿರಹತ್ತಿರ ೧೦,೦೦೦ ಜನರಿದ್ದರು. ಜವುಗು ಭೂಮಿಯಲ್ಲಿ ಕಟ್ಟಲಾದ, ಇಂದೋ ನಾಳೆಯೋ ಬಿದ್ದು ಹೋದರೂ ಆಶ್ಚರ್ಯವಿಲ್ಲ ಎನಿಸುವಂತಹ, ಜೋಪಡಿಗಳಲ್ಲಿ ಆ ಜನರು ವಾಸ ಮಾಡುತ್ತಿದ್ದರು

ಸಪ್ಗಾಚಿಗೆ ಹೋಗಲು ರಸ್ತೆಗಳಿರಲಿಲ್ಲ, ಅಲ್ಲಿ ವಿದ್ಯುತ್ ಸೌಲಭ್ಯವಾಗಲಿ, ಒಳಚರಂಡಿ ವ್ಯವಸ್ಥೆಯಾಗಲಿ ಇದ್ದಿರಲಿಲ್ಲ. ತೆರೆದ ಚರಂಡಿಗಳಲ್ಲಿ ಯಾವಾಗಲೂ ಹೊಲಸು ನೀರು, ದುರ್ವಾಸನೆ ಬೀರುತ್ತ ಹರಿಯುತ್ತಿತ್ತು. ಮುಂಗಾರು ಮಳೆ ಯಿಂದ ಪ್ರವಾಹ ಉಂಟಾದಾಗ, ಸಾಮಾನ್ಯವಾಗಿ ಸ್ಕೂಟರ್ ಮೇಲೆ ಸಂಚರಿಸುವ ಮ್ಯಾಕ್‌ಕನ್, ಸ್ಕೂಟರಿನಿಂದಿಳಿದು ಕೊಳ್ಚೆ ನೀರಿನಲ್ಲಿ ಅದನ್ನು ಮುಂದೆ ತಳ್ಳುತ್ತಲೇ ಸಾಗಬೇಕಾಗುತ್ತಿತ್ತು.

ಪರಿಸರದಂತೆಯೇ ಅಲ್ಲಿಯ ನಿವಾಸಿಗಳೂ ಅಸಹಕಾರ ಮನೋಭಾವದವರೇ ಆಗಿದ್ದರು. ಶಾಲೆ ಪ್ರಾರಂಭಿಸುವ ಯೋಜನೆಯನ್ನು ಕುರಿತಂತೆ ಮಾತನಾಡಿದಾಗ, ಅನೇಕರು ಪರಿಹಾಸ್ಯ ಮಾಡಿದರು. ಕೆಲವು ಕೊಳಚೆನಿವಾಸಿಗಳಂತೂ, ಅಲ್ಲಿಂದ ಅವರನ್ನು ಓಡಿಸುವುದಾಗಿ ಬೆದರಿಸಿದರು. "ನಾನು ಅವರನ್ನು ಮತಾಂತರಗೊಳಿಸಲು ಬಂದ ಪಾದ್ರಿ ಎಂದೇ ಅವರು ಅನುಮಾನ ಪಟ್ಟಿದ್ದರು" ಎಂದು ಮ್ಯಾಕ್‌ಕನ್ ಈಗ ಕೂಡ ನೆನಪಿಸಿಕೊಳ್ಳುತ್ತಾರೆ.

ದೀರ್ಘಕಾಲ ತಗಲುವ ತಮ್ಮ ಶ್ರಮದಾಯಕ ಯೋಜನೆಯಿಂದ ಮುಂದೆ ಖಂಡಿತವಾಗಿ ಪ್ರಯೋಜನವಿದೆ ಎಂದು ಆ ಜನರಿಗೆ ಮನವರಿಕೆ ಮಾಡಿಕೊಡಲು ಮ್ಯಾಕ್‌ಕನ್ ತುಂಬ ತಾಳ್ಮೆಯಿಂದ ವರ್ತಿಸಬೇಕಾಯಿತು. ಕೊಳಚೆ ಪ್ರದೇಶದ ಚಿಕ್ಕಮಕ್ಕಳೊಂದಿಗೆ ಆಟವಾಡುತ್ತ ಅವರು ತಂದೆ-ತಾಯಿಗಳನ್ನು ಕೇಳುತ್ತಿದ್ದರು: "ಈ ಹುಡುಗ ಹುಡುಗಿಯರ ಜೀವನ ಉಜ್ವಲವಾಗಬೇಕೆಂದು ನೀವು ಬಯಸುವುದಿಲ್ಲವೇ? ಮಕ್ಕಳನ್ನು ಶಾಲೆಗೆ ಸೇರಿಸುವುದರಿಂದ ಅವರಿಗೆ ಉತ್ತಮ ಶಿಕ್ಷಣ ಹಾಗೂ ಉದ್ಯೋಗಗಳು ಸಿಗುವುದಲ್ಲದೆ, ಮುಂದೆ ಅವರು ಚೆನ್ನಾಗಿ ಜೀವಿಸಬಲ್ಲವರಾಗುತ್ತಾರೆ." ಹೀಗೆ ಆತ್ಮೀಯವಾಗಿ ಆ ಜನರೊಡನೆ ಬೆರೆತ ಮ್ಯಾಕ್‌ಕನ್ ಕ್ರಮೇಣ ಅವರ ವಿಶ್ವಾಸ ಗಳಿಸಿಕೊಂಡರು.

ಮೂವರು ಹಿರಿಯ ವ್ಯಕ್ತಿಗಳು ನೆರವಾಗಲು ಮುಂದೆ ಬಂದರು. ಅವರೇ ಮುಹಮ್ಮದ್‌ಜಾನ್, ಹುಸೇನ್‌ಅಲಿ ಹಾಗೂ ಸರ್‌ಫುದ್ದೀನ್ ಅಹಮದ್. ಗ್ಯಾರೇಜ್ ಮಾಲಿಕನಾದ ಜಾನ್, ಒಂದು ಕೊಠಡಿಯನ್ನೂ ದಾನವಾಗಿ ನೀಡಿದ. ಪಠ್ಯಪುಸ್ತಕ ಪೆನ್ಸಿಲ್ ಸ್ಲೇಟ್‌ಗಳನ್ನು ಖರೀದಿಸಿದ ಮ್ಯಾಕ್‌ಕನ್ ೧೯೬೮ ನೆಯ ಆಗಸ್ಟ್ ೧೮ ರಂದು ಅಲ್ಲಿ ಶಾಲೆಯನ್ನು ಪ್ರಾರಂಭಿಸಿಯೇ ಬಿಟ್ಟರು. ಮೊದಲ ತಂಡದಲ್ಲಿ ಸುಮಾರು ೪೦ ವಿದ್ಯಾರ್ಥಿಗಳಿದ್ದರು. ಶಿಶಿರ್ ದಾಸ್‌ಗುಪ್ತರಿಗೆ ಆಡಳಿತ ನಿರ್ವಹಣೆ ಪ್ರಿಯವಾಗಿದ್ದುದರಿಂದ, ಶಾಲೆಯ ಎಲ್ಲ ತರಗತಿಗಳನ್ನೂ ಮ್ಯಾಕ್‌ಕನ್ ಅವರೇ ತೆಗೆದುಕೊಳ್ಳುತ್ತಿದ್ದರು. ಬೆಳಗ್ಗೆ ೭ ರಿಂದ ೯ ರ ತನಕ ತರಗತಿಗಳನ್ನು ನಡೆಸಿದ ಅವರು ಅನಂತರ ತಮ್ಮ ಕೆಲಸಕ್ಕೆ ಧಾವಿಸುತ್ತಿದ್ದರು. ಕಚೇರಿ ಕೆಲಸ ಮುಗಿದ ಮೇಲೆ, ಸಂಜೆ ೬ ರ ವೇಳೆಗೆ, ಮತ್ತೆ ಬಸ್ತಿಗೆ ಬಂದು ಅಲ್ಲಿ ಮಕ್ಕಳೊಂದಿಗೆ ಆಟವಾಡುತ್ತಲೊ, ಅವರ ತಂದೆ ತಾಯಿಗಳ ಜೊತೆ ಹರಟೆ ಹೊಡೆಯುತ್ತಲೊ ಕಾಲ ಕಳೆಯುತ್ತಿದ್ದರು.

ಬರಬರುತ್ತ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಶಾಲೆಗೆ ಸೇರತೊಡಗಿದರು. ಮ್ಯಾಕ್‌ಕನ್ ಹೆಚ್ಚಿಗೆ ಕೊಠಡಿಗಳನ್ನು ಬಾಡಿಗೆಗೆ ಹಿಡಿಯಬೇಕಾಯಿತು.

ಅಧ್ಯಾಪಕರನ್ನು ನೇಮಿಸಿಕೊಳ್ಳಬೇಕಾಯಿತು. ದರ್ಜಿಯಾಗಿದ್ದ ಸರ್ ಫುದ್ದೀನ್ ಸ್ವಲ್ಪ ಜಮೀನನ್ನೂ ತನ್ನ ಕಾಣಿಕೆಯಾಗಿ ಕೊಟ್ಟ. ಉದ್ಯಮಪತಿಗಳಾದ ಕೆಲವು ಸ್ನೇಹಿತರಿಂದ ಧನಸಹಾಯವೂ ಸಿಕ್ಕಿತು. ಶಾಲಾ ಕಟ್ಟಡವೂ ನಿರ್ಮಾಣ ವಾಯಿತು.

ಆದರೆ ಶಾಲೆಯ ಕಾರ್ಯಚಟುವಟಿಕೆಗಳು ಪ್ರಾರಂಭವಾದ ಮೇಲೂ ಕೆಲವು ಜನರು ಮ್ಯಾಕ್‌ಕನ್ನರನ್ನು ವಿಶ್ವಾಸ ಯೋಗ್ಯರಾಗಿ ಪರಿಗಣಿಸಲಿಲ್ಲ; ಅವರಿಗೆ ತೊಂದರೆ ಕೊಡುತ್ತಿದ್ದರು. ಒಂದು ಅಪರಾಹ್ನ, ಸಪ್ಗಾಚಿಗೆ ಹೋಗುತ್ತಿದ್ದಾಗ ಯಾರೋ ಅವರ ತಲೆಯತ್ತ ಇಟ್ಟಿಗೆಯನ್ನು ಎಸೆದರು. ಏಟು ಗುರಿ ತಪ್ಪಿತು. ತಲೆಯೆತ್ತಿ ನೋಡಿದ ಮ್ಯಾಕ್‌ಕನ್ ತನ್ನ ಮೇಲೆ ದಾಳಿ ಮಾಡಿದ ವ್ಯಕ್ತಿಯನ್ನು ಗುರುತಿಸಿದರು. ಕೆಲದಿನಗಳ ತರುವಾಯ, ಅವನನ್ನು ಉಪಾಹಾರಕ್ಕೆ ತಮ್ಮ ಮನೆಗೆ ಆಹ್ವಾನಿಸಿದರು ಕೂಡ. ಅವರಿಬ್ಬರೂ ಸುಮಾರು ಒಂದು ಗಂಟೆ ಕಾಲ ಮಾತುಕತೆ ನಡೆಸಿದರು. ಮ್ಯಾಕ್‌ಕನ್ ತಮ್ಮ ಯೋಜನೆಗಳ ಬಗ್ಗೆ ಅವನಿಗೆ ವಿವರಿಸಿದರು. ಕೊನೆಗೂ ಬೀದಿ ಪೋಕರಿಯೆನಿಸಿದ ಆ ವ್ಯಕ್ತಿಗೆ ಮ್ಯಾಕ್‌ಕನ್ನರ ಸೇವಾಮನೋಭಾವನೆ ಹಾಗೂ ಪ್ರಾಮಾಣಿಕತೆಗಳ ಅರಿವಾಯಿತು.

ಸಪ್ಗಾಚಿಗೆ ವಿದ್ಯುತ್ ಸಂಪರ್ಕ ಏರ್ಪಟ್ಟಾಗ ಕೆಲವು ಹೊಸ ಸಮಸ್ಯೆಗಳು ಉದ್ಭವಿಸಿದುವು. ಎರಡು ಸಲ ಗಾಳಿ ಬೀಸಿದಾಗ ತಂತಿಗಳು ಕಡಿದುಹೋಗಿ, ಕೆಳಗೆ ಬಿದ್ದು ಜನರಿಗೆ ಭಯವುಂಟಾಯಿತು. "ಒಮ್ಮೆಯಂತೂ ನನ್ನಿಂದ ಕೆಲವೇ ಮೀಟರುಗಳಷ್ಟು ದೂರ ನಿಂತಿದ್ದ ಮೂರು ಹೋರಿಗಳು ನನ್ನೆದುರೇ ವಿದ್ಯುದಾಘಾತಕ್ಕೆ ಈಡಾಗಿ ಪ್ರಾಣ ಕಳೆದುಕೊಂಡುವು" ಎಂದು ನೆನಪಿಸಿಕೊಳ್ಳುತ್ತಾರೆ ಮ್ಯಾಕ್‌ಕನ್.

ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತ ಹೋದಂತೆ, ಸುಸಜ್ಜಿತ ಶಾಲಾ ಕಟ್ಟಡದ ನಿರ್ಮಾಣದ ಬಗ್ಗೆ ಮ್ಯಾಕ್‌ಕನ್ ಆಲೋಚಿಸತೊಡಗಿದರು. ಅಗತ್ಯವಾಗಿರುವ ಹಣವನ್ನು ಸಂಗ್ರಹಿಸಲು, ಪ್ರಚಾರ ಮಾಡಬೇಕಾಗಿತ್ತು. ಆದ್ದರಿಂದ ಅವರು ಕಲ್ಕತ್ತದ ಕೆಲವು ಗಣ್ಯವ್ಯಕ್ತಿಗಳನ್ನೂ ಪತ್ರಕರ್ತರನ್ನೂ ಸಪ್ಗಾಚಿಗೆ ಬರುವಂತೆ ಆಹ್ವಾನಿಸಿದರು. ಪರಿಣಾಮವಾಗಿ ಮ್ಯಾಕ್‌ಕನ್ನರ ಯೋಜನೆಗಳ ಬಗೆಗಿನ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿ, ಅಷ್ಟಿಷ್ಟು ಧನ ಸಹಾಯವೂ ಒದಗಿ ಬರತೊಡಗಿತು. ಆದರೆ ಯೋಜನೆಯ ಪೂರೈಕೆಗೆ ಸಂಗ್ರಹವಾದ ಹಣ ಸಾಲಲಿಲ್ಲ. ಹತಾಶೆಗೊಂಡ ಮ್ಯಾಕ್‌ಕನ್ ದೆಹಲಿಯಲ್ಲಿರುವ ಹಲವು ರಾಯಭಾರಿ ಕಚೇರಿ

ಗಳಿಗೆ ಸಹಾಯ ಯಾಚಿಸಿ ಪತ್ರ ಬರೆದರು. ಶಾಲೆಯ ನಿವೇಶನದ ಖರೀದಿ ಹಾಗೂ ಶಾಲೆಯ ನೆಲಮಹಡಿಯನ್ನು ಕಟ್ಟಲು ತಗಲುವ ವೆಚ್ಚ–ಇವುಗಳನ್ನು ಭರಿಸಲು ಕೆನಡಾದ ಹೈ ಕಮಿಷನರ್ ಮುಂದೆ ಬಂದರು. ಟಾಟಾ ಹಾಗೂ ಬಿರ್ಲಾ ಟ್ರಸ್ಟ್‌ಗಳೂ ಆರ್ಥಿಕ ನೆರವು ನೀಡಿದವು.

"ನಮ್ಮ ಭಾರೀ ಯೋಜನೆ ಕಾರ್ಯಗತವಾಗತೊಡಗಿದ್ದು ಹೀಗೆ" ಎಂದು ನೆನಪಿಸಿಕೊಳ್ಳುತ್ತಾರೆ ಮ್ಯಾಕ್‌ಕನ್. "ಅನತಿಕಾಲದಲ್ಲಿಯೆ ನನಗೆ ಚಿತ್ರನಟ ದೇವ್ ಆನಂದರ ಪರಿಚಯವಾಯಿತು. ನಮ್ಮ ಯೋಜನೆಗಾಗಿ ಸಹಾಯಾರ್ಥ ಪ್ರದರ್ಶನವೊಂದನ್ನು ನಡೆಸಿಕೊಡುತ್ತೀರಾ ಎಂದು ಅವರನ್ನು ಕೇಳಿದಾಗ, ಆಶ್ಚರ್ಯ! ಅವರು ಒಪ್ಪಿಯೇಬಿಟ್ಟರು". ಸಹಾಯಾರ್ಥ ಪ್ರದರ್ಶನದಿಂದ ಖರ್ಚು ಕಳೆದೂ ೫೦,೦೦೦ ರೂಪಾಯಿ ಕೈಗೆ ಬಂತು. ೧೯೭೨ ರ ವೇಳೆಗೆ 'ಬಂಸೇಸ'ದ ಮೂರು ಮಹಡಿಗಳ ಸಪ್ನಾ ಚಿ ಶಾಲೆಯ ನಿರ್ಮಾಣ ಪೂರ್ಣಗೊಂಡಿತು. ಈಗ ೧, ೨೦೦ ಕ್ಕಿಂತಲೂ ಹೆಚ್ಚು ಮಕ್ಕಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. 'ಟೆರ್ರೆ ಡೆಸ್ ಹೋಮ್ಸ್' ಅವರು ಈ ವಿದ್ಯಾರ್ಥಿಗಳಿಗೆ ಉಚಿತ ಭೋಜನವನ್ನೂ ಒದಗಿಸುತ್ತಿದ್ದಾರೆ. "ಭೋಜನ ಸೌಲಭ್ಯವಿರುವುದರಿಂದಾಗಿ, ಶಾಲೆಯಲ್ಲಿ ಮಕ್ಕಳ ಗೈರು ಹಾಜರಿ ಕಡಿಮೆಯಾಗಿದೆ; ಊಟ ತಪ್ಪಿಸಿಕೊಳ್ಳಲು ಯಾರೂ ಇಷ್ಟಪಡುತ್ತಿಲ್ಲ".

೧೯೭೪ ರಲ್ಲಿ "ಬಂಸೇಸ" ಹತ್ತು ಹಾಸಿಗೆಗಳ ಆಸ್ಪತ್ರೆಯೊಂದನ್ನು ಕಟ್ಟಿಸಿತು. ಸಂಪೂರ್ಣ ಸುಸಜ್ಜಿತಗೊಂಡ ಸಪ್ನಾ ಚಿಯ ಈ ಆಸ್ಪತ್ರೆಯಲ್ಲಿ ಈಗ 50 ಹಾಸಿಗೆಗಳಿವೆ. ಆಸ್ಪತ್ರೆಯ ಆವರಣದಲ್ಲಿರುವ ತರಬೇತಿ ಕೇಂದ್ರದಲ್ಲಿ ಕೊಳಚೆ ಪ್ರದೇಶಗಳ ಮಹಿಳೆಯರಿಗೆ ಹೊಲಿಗೆ, ಗೃಹವಿಜ್ಞಾನ, ಪ್ರಥಮ ಚಿಕಿತ್ಸೆ ಹಾಗೂ ಕರಕುಶಲ ಕಲೆಗಳಿಗೆ ಸಂಬಂಧಿಸಿದ ಶಿಕ್ಷಣ ನೀಡಲಾಗುತ್ತಿದೆ. ಆಸ್ಪತ್ರೆಯ ಸಮೀಪದಲ್ಲಿರುವ ಯಂತ್ರ ಕಾರ್ಯಾಗಾರದಲ್ಲಿ ೨೦ ಮಂದಿ 'ಬಸ್ತೀ' ಯುವಜನರಿಗೆ ಉದ್ಯೋಗ ದೊರೆತಿದೆ. 'ಬಂಸೇಸ'ಕ್ಕೆ ಹಲವು ವರ್ಷಗಳಿಂದ ನೆರವು ನೀಡುತ್ತ ಬಂದ ಸಂಸ್ಥೆಯಾಗಿರುವ ಟಿ. ಐ. ಎಲ್. ಲಿಮಿಟೆಡ್‌ನ ಅಧ್ಯಕ್ಷರೂ ಮ್ಯಾನೇಜಿಂಗ್ ಡೈರೆಕ್ಟರೂ ಆದ ಶ್ರೀ ಎ. ಮಜುಮ್‌ದಾರ್ ಅವರು ಹೇಳುವಂತೆ: "ಸಪ್ನಾ ಚಿಯ ಕೊಳಚೆ ಪ್ರದೇಶಗಳಲ್ಲಿ ಮ್ಯಾಕ್‌ಕನ್ ನಡೆಸುತ್ತಿರುವ ಕಾರ್ಯಚಟುವಟಿಕೆಗಳು ಜಾತ್ಯತೀತತೆಗೆ ಉತ್ತಮ ನಿದರ್ಶನವೊದಗಿಸುತ್ತವೆ. ಮುಖ್ಯವಾಗಿ ಮುಸ್ಲಿಮ್ ಪ್ರದೇಶವಾಗಿರುವ, ಆದರೆ ಬಹುತೇಕ ಹಿಂದೂಗಳಿರುವ, ಸಪ್ನಾ ಚಿಯ ಈ ಕಲ್ಯಾಣ ಸಂಘದ ರೂವಾರಿ ಒಬ್ಬ

ಕ್ರೈಸ್ತ. ಹೀಗಾಗಿ ಈ ಮೂರೂ ಧರ್ಮಗಳ ಸಾಮರಸ್ಯ ಇಲ್ಲಿ ಕಂಡು ಬರುತ್ತಿದೆ.”

ಕಲ್ಕತ್ತವೇ ಕೇಂದ್ರ ಬಿಂದುವಾಗಿರುವಂತಹ ಈ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರುತ್ತಿರುವ ಮ್ಯಾಕ್‌ಕನ್ ಅವರು ಗ್ರಾಮಾಂತರ ಪ್ರದೇಶದ ಮಕ್ಕಳನ್ನೇನೂ ಮರೆತಿಲ್ಲ. ೧೯೭೭ ರಲ್ಲಿ, ಮ್ಯಾಕ್‌ಕನ್ ಸ್ವಿಜರ್ಲೆಂಡಿನ ದಂಪತಿಗಳಾದ ಕುರ್ಟ್ ಹಾಗೂ ಎಡೆಲ್‌ಟ್ರೆಡ್ ಬರ್ಕಿ–ಇವರನ್ನು ಭೇಟಿ ಯಾಗುವ ಸಂದರ್ಭ ಬಂತು. ಭಾರತೀಯ ಶಿಶುವೊಂದನ್ನು ದತ್ತು ಪಡೆದಿದ್ದ ಈ ದಂಪತಿಗಳು ನೆರವು ನೀಡಲು ಮುಂದೆ ಬಂದಾಗ, ಕಲ್ಕತ್ತದಿಂದ ೪೦ ಕಿ.ಮೀ ದೂರದಲ್ಲಿರುವ ಉಶ್ತಿ ಎಂಬ ಚಿಕ್ಕ ಹಳ್ಳಿಯಲ್ಲಿ ಶಾಲೆ ಪ್ರಾರಂಭಿಸು ವಂತೆ ಸೂಚಿಸಿದರು ಮ್ಯಾಕ್‌ಕನ್. ಇಂದು ಸುಮಾರು ೪೦೦ಮಂದಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವದಷ್ಟೇ ಅಲ್ಲದೆ, ಉಶ್ತಿ ಯೋಜನೆ ವಿಸ್ತಾರ ಗೊಂಡಿದ್ದು, ಕುಡಿಯುವ ನೀರಿನ ಬಾವಿಗಳು, ಆರೋಗ್ಯ ಕೇಂದ್ರ ಹಾಗೂ ಹಲವು ವೃತ್ತಿ ಮತ್ತು ಕುಶಲಕಲೆಗಳಲ್ಲಿ ಔದ್ಯೋಗಿಕ ತರಬೇತಿ ನೀಡುವ ಸಂಸ್ಥೆಗಳನ್ನು ಒಳಗೊಂಡಿದೆ. ವಿದೇಶೀಯ ನೆರವಿನಿಂದ ನಡೆಯುವ ಇಂಥದೇ ಐದು ಗ್ರಾಮೀಣ ಯೋಜನೆಗಳ ಮೇಲ್ವಿಚಾರಣೆಯನ್ನು ಮ್ಯಾಕ್‌ಕನ್ ನೋಡಿಕೊಳ್ಳುತ್ತಿದ್ದಾರೆ.

೧೯೭೦ ರ ಕೊನೆಯ ವೇಳೆಗೆ, ‘ಬಂಸೇಸ’ದ ಕಾರ್ಯಚಟುವಟಿಕೆಗಳು ಎಷ್ಟರಮಟ್ಟಿಗೆ ವೇಗವಾಗಿ ಬಹುಮುಖವಾದುವೆಂದರೆ, ಜೆಸ್ಸೋಪ್ಸ್‌ನ ಇಂಜಿನಿಯರಿಂಗ್ ಸಂಸ್ಥೆಯಲ್ಲಿ ಅಕೌಂಟ್ಸ್ ಅಸಿಸ್ಟೆಂಟ್ ಆಗಿ ಮುಂದುವರಿಯು ವುದು ಅವರಿಗೆ ಕಷ್ಟವಾಯಿತು. ಆಗಷ್ಟೇ ಅವರು ಸಂಸ್ಥೆಯ ಖರೀದಿ ಮ್ಯಾನೇಜರ್ ಆಗಿ ಬಡ್ತಿ ಪಡೆದಿದ್ದರೂ, ೧೯೭೪ ರಲ್ಲಿ, ತಮ್ಮ ಯೋಜನೆಗಳಿ ಗಾಗಿ ಪೂರ್ಣಕಾಲವನ್ನು ವಿನಿಯೋಗಿಸುವ ಇಚ್ಛೆಯಿಂದ, ತಮ್ಮ ಉದ್ಯೋಗಕ್ಕೆ ರಾಜೀನಾಮೆ ನೀಡಿದರು.

ಛಲವಾದಿಗಳಾದ ಮ್ಯಾಕ್‌ಕನ್ ಹಿಡಿದ ಕೆಲಸವನ್ನು ಬಿಡದೆ ಮಾಡುವ ನಿಷ್ಠಾವಂತರೂ ಹೌದು. ಚಟುವಟಿಕೆಗಳಲ್ಲಿ ಒಪ್ಪ ಓರಣಗಳನ್ನು ಬಯಸುವ ಅವರು ಕೊಂಚ ಅವ್ಯವಸ್ಥೆಯನ್ನು ಗಮನಿಸಿದರೂ ಸಾಕು, ಕಿಡಿಕಿಡಿಯಾಗು ತ್ತಿದ್ದರು. ಅವರ ಹದ್ದಿನ ಕಣ್ಣಿಗೆ ಬೀಳದ ವಿಷಯವೇ ಇರುತ್ತಿರಲಿಲ್ಲ. ಗೋಡೆಗೆ ತಗುಲಿಸಿದ ಚಿತ್ರವೊಂದು ಸ್ವಲ್ಪ ಓರೆಯಾಗಿದ್ದರೂ ಅವನ್ನು ತತ್‌ಕ್ಷಣ ಗಮನಿಸಿ ನೇರಗೊಳಿಸುತ್ತಿದ್ದರು. ಒಮ್ಮೆ ತರಗತಿಗೆ ಹೋದೊಡನೆ, ಕಸ

ಗುಡಿಸದಿರುವುದನ್ನು ಗಮನಿಸಿದ ಅವರು, ತರಗತಿಯ ವಿದ್ಯಾರ್ಥಿಗಳೆಲ್ಲ ಆಶ್ಚರ್ಯ ಪಡುವಂತೆ, ಪೊರಕೆ ತಂದು ತಾವೇ ಕಸ ಗುಡಿಸಿದ್ದು ಉಂಟು.

ವಜ್ರದಂತೆ ಕಠಿಣರಾದ ಮ್ಯಾಕ್‌ಕನ್ ಕುಸುಮದಷ್ಟು ಮೃದು ಸ್ವಭಾವದವರೂ ಹೌದು. ಮಕ್ಕಳಿಗೆ ಅವರೆಂದರೆ ತುಂಬ ಪ್ರೀತಿ. ಈಚೆಗೆ ನಾನವರ ಜೊತೆ ಒಂದು ಶಾಲೆಗೆ ಭೇಟಿ ನೀಡಿದಾಗ ಹುಡುಗ ಹುಡುಗಿಯರೆಲ್ಲ ಅವರ ಸುತ್ತ ಗುಂಪುಗೂಡಿದ್ದು ನನಗಿನ್ನೂ ನೆನಪಿದೆ. ಅವರಿಗೆ ಮ್ಯಾಕ್‌ಕನ್ ಕಥೆಗಳನ್ನು ಹೇಳಿದರು; ಅವರೊಡನೆ ವಾಲಿಬಾಲ್ ಆಡಿದರು, ಅವರಿಗೆ ತಮಾಷೆ ಮಾಡಿ ನಗಿಸಿದರು; ತಾವೂ ನಕ್ಕರು.

೧೯೮೧ರ ಸುಮಾರಿನಲ್ಲಿ ಮ್ಯಾಕ್‌ಕನ್ ಪತ್ರಿಕಾ ಲೇಖನವೊಂದನ್ನು ಓದಿದರು. ಸೆರೆಮನೆಗಳಲ್ಲಿ ಬಾಲಾಪರಾಧಿಗಳು ಎದುರಿಸುವ ಸಮಸ್ಯೆಗಳನ್ನೂ, ಸೆರೆಮನೆಯ ಅಹಿತಕರ ಸ್ಥಿತಿಗತಿಗಳನ್ನೂ ಕುರಿತ ಆ ಲೇಖನದಿಂದ ತೀವ್ರ ಆತಂಕಗೊಂಡ ಅವರು ಪ್ರತ್ಯಕ್ಷ ವೀಕ್ಷಣೆಗಾಗಿ ಕೆಲವು ಸೆರೆಮನೆಗಳಿಗೆ ಭೇಟಿ ನೀಡಿದರು. ಅವುಗಳನ್ನು ಕಣ್ಣಾರೆ ಕಂಡ ಮ್ಯಾಕ್‌ಕನ್ ಅಲ್ಲಿ ಬಂಧಿತರಾದ ಎಳೆಯರ ಶೋಚನೀಯ ಬದುಕಿನ ಬಗ್ಗೆ ವ್ಯಾಕುಲಗೊಂಡರು. ಆ ಮಕ್ಕಳು ತಣ್ಣನೆಯ ನೆಲದ ಮೇಲೆ ಮಲಗಬೇಕಾಗಿತ್ತು; ಅವರಿಗೆ ಊಟಕ್ಕೆ ನೀಡಲಾಗುತ್ತಿದ್ದ ಅನ್ನದಲ್ಲಿ ಹುಳಹುಪ್ಪಟೆಗಳಿರುತ್ತಿದ್ದವು. ತಲೆಯಲ್ಲಿ ಹೇನು, ಮೈಯಲ್ಲಿ ಕಜ್ಜಿ ಹಾಗೂ ಬಗೆಬಗೆಯ ಕಾಯಿಲೆಗಳಿಂದ ನರಳುವಂತಹ ಈ ಮಕ್ಕಳನ್ನು 'ಬಿಡಗಡೆಗೊಳಿಸಲೇಬೇಕು' ಎಂದು ಮ್ಯಾಕ್‌ಕನ್ ಆ ದಿನವೇ ನಿರ್ಧರಿಸಿದರು.

ಬಾಲಾಪರಾಧಗಳಿಗಾಗಿ ಸೆರೆಮನೆ ಸೇರಿದ ಮಕ್ಕಳಲ್ಲಿ ಹೆಚ್ಚಿನವರು ದರಿದ್ರ ಕುಟುಂಬಗಳಿಗೆ ಸೇರಿದವರು. ಆರು ವರ್ಷದ ಸಾದಿಕನನ್ನೇ ತೆಗೆದುಕೊಳ್ಳಿ. ಮಲತಾಯಿ ಮನೆಯಿಂದ ಹೊರದೂಡಿದಾಗ ಅವನು ಅಲ್ಲಲ್ಲಿ ಅಲೆದಾಡಿ ಕೊನೆಗೆ ಹೌರ ನಿಲ್ದಾಣಕ್ಕೆ ಬಂದ. ತನ್ನ ಮನೆಯೆಲ್ಲೆಂದೇ ನೆನಪಿಸಿಕೊಳ್ಳಲಾದ ಅವನನ್ನು ಕಂಡ ರೈಲ್ವೆ ಪೋಲೀಸರು ಅವನನ್ನು ಅನಾಥಾಶ್ರಮಕ್ಕೆ ಸೇರಿಸಿದರು. ಅನಾಥಾಶ್ರಮದಿಂದ ಅನಾಥಾಶ್ರಮಕ್ಕೆ ವರ್ಗಾವಣೆ ಹೊಂದುತ್ತ ಬಂದ ಸಾದಿಕ್ ಕೊನೆಗೆ ಆಶ್ರಯ ಪಡೆದದ್ದು ಪ್ರೆಸಿಡೆನ್ಸಿ ಸೆರೆಮನೆಯಲ್ಲಿ.

ಸಾದಿಕನಂತ ಇತರ ಅನೇಕ ಬಡಪಾಯಿ ಮಕ್ಕಳ ಸಂಕಟಗಳಿಂದ ವ್ಯಥಿತರಾದ ಮ್ಯಾಕ್‌ಕನ್ ಯೋಜನೆಯೊಂದನ್ನು ಸಿದ್ಧಗೊಳಿಸಿದರು. ಇದಕ್ಕೆ ಟೆರ್ರೆ ಡೆಸ್ ಹೋಮ್ಸ್‌ನವರ ನೆರವು ದೊರೆಯಿತು. ಅಷ್ಟೇ ಅಲ್ಲ; ರಾಜ್ಯ

ಸರಕಾರವೂ ಇದಕ್ಕೆ ತನ್ನ ಅನುಮತಿ ನೀಡಿತು. ಅಲೆಮಾರಿ ಪುಂಡರೋ ಚಿಕ್ಕಪುಟ್ಟ ಕಳ್ಳತನಮಾಡಿ ಪೋಲಿಸರ ಕೈಗೆ ಸಿಕ್ಕಿಬಿದ್ದವರೋ ಆಗಿ ಸೆರೆಮನೆ ಸೇರಿದ ೯೩ ಎಳೆಯರನ್ನು ಮ್ಯಾಕ್‌ಕನ್ ಈವರೆಗೆ ಬಿಡುಗಡೆಗೊಳಿಸಿದ್ದಾರೆ. ಇದರೆಲ್ಲ ೬ ರಿಂದ ೧೬ ವರ್ಷಗಳ ಒಳಗಿನವರು. ಇವರಲ್ಲಿ ೧೭ ಮಂದಿ ತಮ್ಮತಮ್ಮ ಮನೆಗಳಿಗೆ ಹಿಂದಿರುಗಿದ್ದಾರೆ. ಸಾದಿಕನನ್ನೂ ಒಳಗೊಂಡಂತೆ ಉಳಿದವರು 'ಬಂಸೇಸ'ವೇ ಕಲ್ಕತ್ತದಿಂದ ೫೦ ಕೆ.ಮೀ. ದೂರದ ರಂಗೀಲಾ ಬಾದಿನಲ್ಲಿ ನಡೆಸುತ್ತಿರುವ ವಸತಿಶಾಲೆ 'ಶಿಶು ಉದ್ಯಾನ'ದಲ್ಲಿ ಸಂತೋಷವಾಗಿದ್ದಾರೆ.

ಈ ಶಿಶು ಉದ್ಯಾನಕ್ಕೂ ನಾನು ಭೇಟಿ ಕೊಟ್ಟಿದ್ದೇನೆ—ಮ್ಯಾಕ್‌ಕನ್ನರೊಂದಿಗೆ. ಅವರನ್ನು ನೋಡಿದ ಮಕ್ಕಳು ಮುತ್ತಿಗೆ ಹಾಕಿದರು; ಒಟ್ಟಿಗೇ ಮಾತನಾಡತೊಡಗಿದರು. ಕ್ರಿಕೆಟ್ ಪಂದ್ಯ ನಡೆಯುತ್ತಿರುವುದರಿಂದ, ಕಾಮೆಂಟ್ರಿ ಕೇಳಲು ಅನುಕೂಲವಾಗುವಂತೆ ಅಲ್ಲಿ ಒಂದು ರೇಡಿಯೊವನ್ನು ತಂದಿರಿಸಬೇಕೆಂಬ ಮನವಿಯನ್ನು ೧೪ ವರ್ಷ ಪ್ರಾಯದ ತರುಣ್ ಮಲ್ಲಿಕ್ ಮುಂದಿಟ್ಟ. ಆಗ ಮ್ಯಾಕ್‌ಕನ್ ಹೀಗೆಂದರು: "ನೀನೊಬ್ಬ ಇಂಜಿನಿಯರ್ ಆಗಬೇಕೆಂದಿರುವಿಯಲ್ಲ. ನೀನೇ ಒಂದು ರೇಡಿಯೊ ತಯಾರಿಸಿಬಿಡು. ಅದಕ್ಕೆ ಬೇಕಾದ ಬಿಡಿಭಾಗಗಳನ್ನೆಲ್ಲ ನಾನು ತಂದು ಕೊಡುತ್ತೇನೆ." ಶಿಶು ಉದ್ಯಾನದ ಆವರಣದಲ್ಲಿರುವ ಪಕ್ಷಿ ಗೃಹವೊಂದನ್ನು ನನಗೆ ತೋರಿಸುತ್ತ ಜಂಭದಿಂದ ಅವರೆಂದರು: "ಇದನ್ನು ಈ ಮಕ್ಕಳೇ ತಯಾರಿಸಿದ್ದು."

ಮ್ಯಾಕ್‌ಕನ್ನರ ಜೊತೆ ತಿರುಗುವಾಗ, ಅವರು ಆಗಾಗ ಮಾತ್ರೆಗಳನ್ನು ನುಂಗುತ್ತಿದ್ದುದನ್ನು ನೋಡಿದೆ. ಅನಂತರ ಕಚೇರಿಗೆ ಮರಳಿದಾಗ, ತಮಗೆ ದೃಷ್ಟಿ ದೋಷವಿರುವುದಾಗಿ ಅವರು ತಿಳಿಸಿದರು. ಅಲ್ಲದೆ ಇತರ ಅನಾರೋಗ್ಯ ಸಮಸ್ಯೆಗಳೂ ಇದ್ದವು. "ಇಷ್ಟೊಂದು ಶ್ರಮ ಪಡುವುದೇಕೆ? ಕೊಂಚ ವಿಶ್ರಾಂತಿ ಪಡೆಯಬಾರದೇ?" ಎಂಬ ನನ್ನ ಪ್ರಶ್ನೆಗೆ ಅವರ ಉತ್ತರ: "ಈ ಎಳೆಯರೇ ನನ್ನ ಬದುಕು. ನನ್ನೆಲ್ಲ ಪ್ರೀತಿಯನ್ನೂ ಇವರಿಗೆ ಧಾರೆ ಎರೆದಿದ್ದೇನೆ. ಇವರೂ ನನ್ನನ್ನು ಪ್ರೀತಿಸುತ್ತಿದ್ದಾರೆ. ಇವರೊಂದಿಗೆ ಹೀಗೆಯೇ ಯಾವಾಗಲೂ ಕೆಲಸ ಮಾಡುತ್ತಿರುವುದೇ ನನಗೆ ಇಷ್ಟ."

ಹಂಸ ಐತಾಳ

೧೪ ನೆಯ ಸಂಖ್ಯೆಯ ಮಗುವಿಗೆ ಜೀವದಾನ

ಬದುಕಿಗೆ ಆಹಾರ, ನೀರು ಮತ್ತು ಗಾಳಿ ಎಷ್ಟು ಅಗತ್ಯವೋ ಅನಿವಾರ್ಯವೋ ಅಷ್ಟೇ ಅಗತ್ಯ ಮತ್ತು ಅನಿವಾರ್ಯವಾದವು ಒಲುಮೆ, ಭರವಸೆ ಮತ್ತು ಅವಲಂಬನೆ.

ಬ್ರಿಂಕೋವೆನೆಸ್ಕ್ಯೀಯಲ್ಲಿಯ ರುಮೇನಿಯನ್ ಅನಾಥಾಲಯವನ್ನು ಬೇವ್‌ಸ್ಮಿತ್ ಎಂದೂ ಮರೆಯಲಾರರು. ಬುದ್ಧಿಶೂನ್ಯರಾಗಿದ್ದು ಹುಟ್ಟುದಡ್ಡರೆಂಬ ಹೆಸರು ಹೊತ್ತ ೩೦೦ ಮಂದಿ ಎಳೆಯ ವಿಕಲಾಂಗ ಮಕ್ಕಳನ್ನು ಆ ಅನಾಥಾಲಯ ಒಳಗೊಂಡಿತ್ತು. ಅಲ್ಲಿಯ ವಾತಾವರಣ ಮನೋವೇದಕವಾಗಿತ್ತು. ನಿಷ್ಪ್ರಯೋಜಕರೆಂದೂ ಕೆಲಸಕ್ಕೆ ಬಾರದವರೆಂದೂ ಭಾವಿಸಿದ್ದ ವಿಕಲಾಂಗ ಮಕ್ಕಳನ್ನು ಜನರು ಈ ಅನಾಥಾಲಯದಲ್ಲಿ ತೊರೆದುಬಿಡುತ್ತಿದ್ದರು. ಅನಾಥಾಲಯದಲ್ಲಿಯ ಹೊಲಸು ನಾಥದ, ಗೋಳೋ ಎಂದು ಅಳುತ್ತಿದ್ದ, ಕತ್ತೆಗಳಂತೆ ಕಿರಿಚುತ್ತಿದ್ದ ಮತ್ತು ಉಚ್ಚೆಯಿಂದ ತೋಯ್ದ, ಮಾನಮುಚ್ಚುವಷ್ಟೇ ಚೂರು ಬಟ್ಟೆಯನ್ನು ಸುತ್ತಿದ್ದ ಮಕ್ಕಳ ಆ ದಾರುಣ ದೃಶ್ಯ ಕಂಡು ಮನನೊಂದ ಬೇವ್‌ಸ್ಮಿತ್ ಅವರಿಗೆ ಕಲ್ಲುನೆಲದ ಮೇಲಿನ ಮಂಚದ ಕಂಬಗಳಿಗೆ ಜೋಲಿಯಾಡುತ್ತಿದ್ದ, ಹಿಡಿಗಂಬಗಳಿಗೆ ತಲೆಚಚ್ಚಿಕೊಳ್ಳುತ್ತಿದ್ದ, ವಿಕಲಾಂಗ ಮಕ್ಕಳನ್ನು ಕಂಡಾಗ ತುಂಬ ದುಃಖವಾಯಿತು. ಆದರೆ ಅಲ್ಲಿಯ ಸಿಬ್ಬಂದಿ ವರ್ಗದವರಿಗೆ ಇದಾವುದರ ಪರಿವೆಯೇ ಇಲ್ಲದೆ, ಎಂದಿನಂತೆ ಮೇಲಂಗಿ ಧರಿಸಿ ನಿರಾತಂಕವಾಗಿ ತಮ್ಮ ದೈನಂದಿನ ಕೆಲಸಕಾರ್ಯಗಳಲ್ಲಿ ಮಗ್ನರಾಗಿದ್ದರು. ಆದರೆ ಆ ದಾರುಣ ಪರಿಸ್ಥಿತಿಯನ್ನು ಹಿಂದೆಯೇ ಕೇಳಿದ್ದು, ಮನನೊಂದ ಬೇವ್‌ಸ್ಮಿತ್ ಅವರಿಗೆ ಆ ಅನಾಥಾಲಯವನ್ನು ನಿಜವಾಗಿ ಭೇಟಿಮಾಡಿದಾಗ ನರಕ ದರ್ಶನ ಮಾಡಿದಂತಾಯಿತು.

ಅನಾಥಾಲಯದ ವೈದ್ಯರ ಜೊತೆಯಲ್ಲಿ ಆ ಅನಾಥಾಲಯದ ಕೊಠಡಿಗಳನ್ನು ಹಾದು ಹೋಗುತ್ತಿದ್ದಾಗ ಬೇವ್‌ಸ್ಮಿತ್ ತನ್ನ ಜೀವನದಲ್ಲಿಯ ಅತ್ಯಂತ ಕ್ಲಿಷ್ಟಕರವಾದ ದೃಢ ನಿರ್ಧಾರವೊಂದನ್ನು ಕೈಗೊಳ್ಳಬೇಕಾಯಿತು.

ಸಂಖ್ಯೆ ೧೯೬೮ರ ಫೆಬ್ರವರಿ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಪೀಟರ್ ಬ್ರೌನ್ ಅವರ 'ಬೇಬಿ ನಂಬರ್ ೧೪ ಬ್ರಾಟ್ ಅಕ್ರೈನ್ ಜೈ ಲವ್' ಎಂಬ ಲೇಖನದ ಭಾವಾನುವಾದ.

ಹೆತ್ತವರ ಪ್ರೀತಿ, ಮಮತೆಗಳೆಂದರೇನೆಂಬುದನ್ನೇ ಅರಿಯದೆ, ಅಪಾರ ಯಾತನೆ ಅನುಭವಿಸುತ್ತಿದ್ದ ಸಾಲುಗಟ್ಟಳೆ ಮಕ್ಕಳ ಹಿಂಡಿನಿಂದ ಬೇವ್‌ಸ್ಮಿತ್ ಒಂದು ಮಗುವನ್ನೇ ಆಯ್ದು ದತ್ತು ತೆಗೆದುಕೊಳ್ಳಬೇಕಾಗಿತ್ತು.

ಅವರಲ್ಲಿ ಹೆಚ್ಚಿನ ಮಕ್ಕಳು ಸ್ಮಿತ್ ಅವರು ಪಕ್ಕದಿಂದ ಹಾದುಹೋದಾಗಲೂ ಯಾವ ಪ್ರತಿಕ್ರಿಯೆಯನ್ನೂ ತೋರಲಿಲ್ಲ. ನಿರಾಶಕ್ತಿ, ನಿರುತ್ಸಾಹಗಳೇ ಮೈವೆತ್ತಿದವರಂತೆ ಇದ್ದ ಆ ಮಕ್ಕಳ ಗುಂಪಿನಿಂದ ಒಂದು ಚಿಕ್ಕ ಹೆಣ್ಣು ಮಗು, ಸರಿಯಾಗಿ ನಿಲ್ಲಲಾರದೆ ಅತ್ಯಂತ ಪ್ರಯಾಸದಿಂದ ಬೇವ್‌ಸ್ಮಿತ್ ಅವರ ಬಳಿಗೆ ಬಂದು ನಿಂತಿತು. ಕನಿಕರದಿಂದ ಬೇವ್ ಅದನ್ನು ಮಂಚದಿಂದ ಎತ್ತಿ ಕೊಂಡರು, ಅದು ಆಗ ಸಂತೋಷದಿಂದ ಅವರನ್ನು ಬಿಗಿಯಾಗಿ ಅಪ್ಪಿಕೊಂಡಿತು ಮತ್ತು ಸ್ಮಿತ್ ಅವರ ಮುಖದ ಮೇಲೆ ಸಾಂತ್ವನದ ಭಾವವನ್ನು ಹುಡುಕುತ್ತಿದೆಯೋ ಎಂಬಂತೆ ಸ್ಮಿತ್ ಅವರ ಮುಖವನ್ನೇ ಮತ್ತೆ ಮತ್ತೆ ನಿಟ್ಟಿಸಿತು. ಇದರಿಂದ ಬೇವ್ ಸ್ಮಿತ್ ಅವರು ಅತಿಯಾಗಿ ವ್ಯಾಕುಲಗೊಂಡರು "ಅವಳನ್ನು ಆ ಅನಾಥಾಲಯ ದಿಂದ ಹೇಗಾದರೂ ಪಾರುಮಾಡುವವರು ಬೇಕಾಗಿತ್ತು."

ಬಳಿಕ ಬೇವ್‌ಸ್ಮಿತ್ ಅವರು ಆ ಹೆಣ್ಣುಮಗುವನ್ನು ಮೆತ್ತಗೆ ಮಂಚದ ಮೇಲೆ ಅಂಗಾತವಾಗಿ ಮಲಗಿಸಿದರು ಮತ್ತು ತಮ್ಮನ್ನು ಇತರ ವಾರ್ಡು ಗಳಿಗೂ ಕರೆದೊಯ್ಯಬೇಕೆಂದು ವೈದ್ಯರಿಗೆ ಹೇಳಿದರು.

ಆಯ್ದು ತೆಗೆದರು : ಅವರು ಈ ಮೊದಲೇ ನೋಡಿದ್ದ ಹೆಣ್ಣುಮಗುವಿದ್ದ ವಾರ್ಡಿಗೆ ಹಿಂತಿರುಗಿದಾಗ ಅವಳು ಮತ್ತೊಮ್ಮೆ ತೋಳುಗಳನ್ನು ಚಾಚಿ ಮೂಕ ವಾಗಿ ಅವರಲ್ಲಿ ಮೊರೆಯಿಟ್ಟಳು "ಅವಳು ತಾನೆ ಆಯ್ದುಕೊಂಡಳು" ಎಂದು ಬೇವ್ ಅವರು ಅಂದಿನ ಘಟನೆಯನ್ನು ನೆನೆಪಿಸಿಕೊಳ್ಳುತ್ತಾರೆ. ಅವರು ವೈದ್ಯರಿಗೆ ಆ ಹೆಣ್ಣು ಮಗುವನ್ನು ತೋರಿಸಿ ತಮಗೆ ದತ್ತು ತೆಗೆದುಕೊಳ್ಳಲು ಆ ಹೆಣ್ಣು ಮಗು ಆಗಬಹುದೆಂದು ತಲೆಯಾಡಿಸಿದರು. ಆಗ ವೈದ್ಯರು ತಮ್ಮ ಕೈಯಲ್ಲಿದ್ದ ಪಟ್ಟಿಯನ್ನು ನೋಡಿ "ಸಂಖ್ಯೆ ೧೩" ಎಂದರು. ಅದು ಆ ಮಗುವಿಗೆ ಅಂತಿಮ ಅವನತಿ ಎಂಬಂತೆ ತೋರಿತು. ಏಕೆಂದರೆ ಆ ಮಗುವಿಗೆ ಹೆಸರನ್ನೂ ಸಹ ಇಟ್ಟಿರಲಿಲ್ಲ. ಪರಿತ್ಯಕ್ತ ಮಗುವೊಂದನ್ನು ದತ್ತು ತೆಗೆದುಕೊಂಡು ಉದ್ಧರಿಸ ಬೇಕೆಂಬ ಮಹದಾಶಯ ಹೊತ್ತು ಅಂಥ ಮಗುವನ್ನು ಹುಡುಕಲಾರದೆ ಹತಾಶರಾದ ಬೇವ್ ಅವರು ಈ ಒಂದು ಮಗುವಿಗೆ ಇಂಗ್ಲೆಂಡ್‌ನಲ್ಲಿ ಮತ್ತೆ ಹೊಸ ಜೀವನವನ್ನು ನೀಡಲು ಸಿದ್ಧರಾಗಿ ಕೈಗೊಂಡರು.

ಶೆಫೀಲ್ಡ್‌ನ ಬಳಿಯಲ್ಲಿರುವ ಕಿಲ್ಲಾಮರ್ಶ್ ಎಂಬ ಇಂಗ್ಲಿಷ್ ಹಳ್ಳಿಯಲ್ಲಿಯ ತಮ್ಮ ಮನೆಯಲ್ಲಿ ಜೇವ್ ಮತ್ತು ಅವರ ಪತ್ನಿ ರೂತ್ ನಾಲ್ಕು ತಿಂಗಳ ಹಿಂದೆ, ಅಂದರೆ ೧೯೯೦ರ ಜನವರಿಯಲ್ಲಿ ದೂರದರ್ಶನವನ್ನು ವೀಕ್ಷಿಸುತ್ತಿದ್ದಾಗ ಮಿಲಿಯಾಂತರ ಪ್ರೇಕ್ಷಕರ ಹಾಗೆಯೇ ಬ್ರಿಂಕೋವೆನಸ್ಟಿಯನ್ನು ಕುರಿತ ಬಿಬಿಸಿ ವಾರ್ತೆಯನ್ನು ಕೇಳಿ ದಿಗಿಲುಗೊಂಡರು. ಅಲ್ಲಿಯ ನಿರಂಕುಶ ಪ್ರಭುವಾಗಿದ್ದ ಸೂಸೇಕು ಅವರ ಪತನವಾದ ಕೂಡಲೇ ತೋರಿಸಿದ್ದ ವರದಿಯಲ್ಲಿ ಮಕ್ಕಳನ್ನು ಹೆರಬಲ್ಲ ಸಾಮರ್ಥ್ಯವುಳ್ಳ ಪ್ರತಿಯೊಬ್ಬ ವಿವಾಹಿತೆ ಹೆಂಗಸು ಕನಿಷ್ಠಪಕ್ಷ ಐದೈದು ಮಕ್ಕಳನ್ನು ಹೊಂದುವಂತೆ ಬಲವಂತ ಮಾಡಲಾಗುತ್ತಿತ್ತು ಎಂದು ತಿಳಿಸಿ ರುಮೇನಿಯದಲ್ಲಿ ತಂದೆತಾಯಿ ಇಲ್ಲದ ತಬ್ಬಲಿ ಮಕ್ಕಳ ಪಾಡನ್ನು ಮೊದಲ ಬಾರಿಗೆ ತಿಳಿಸಲಾಗಿತ್ತು. ತಮ್ಮ ಮಕ್ಕಳನ್ನು ಪೋಷಿಸುವಂಥ ಸಾಮರ್ಥ್ಯವೂ ಇಲ್ಲವಂತಹ ಅನೇಕ ಕುಟುಂಬಗಳು ತಮ್ಮ ತಬ್ಬಲಿ ಮಕ್ಕಳನ್ನು ಹತಾಶರಾಗುವಂತೆ ತೊರೆದುಬಿಟ್ಟಿದ್ದರು. ಕೋಟಿಮನೆಯಲ್ಲಿಯು ಕುಲಗೆಟ್ಟ ಹುಟ್ಟಿನ ಕೆಲವು ಮಕ್ಕಳಲ್ಲಿ ತಲೆ ಕೆಟ್ಟುಹೋಗಿ ಬದುಕಿ ಉಳಿದ ಕೆಲವು ಮಕ್ಕಳ ಸ್ಥಿತಿ ಶೋಚನೀಯವಾಗಿತ್ತು.

ಈ ಡರ್ಬಿಶೈರ್ ದಂಪತಿಗಳು ಮದುವೆಯಾಗಿ ೨೮ ವರ್ಷಗಳು ಕಳೆದರೂ ಅವರು ಎಷ್ಟೊಂದು ಆತ್ಮೀಯರಾಗಿದ್ದರು ಎಂದರೆ ಇಬ್ಬರೂ ಒಂದೇ ರೀತಿಯಾಗಿ ಯೋಚಿಸುತ್ತಿದ್ದರು. ಬಿಬಿಸಿ ವರದಿಯನ್ನು ಕೇಳಿ ನೊಂದ ಶ್ರೀಮತಿ ರೂತ್ ಪತಿ ಜೇವ್‌ಸ್ಮಿತ್‌ನತ್ತ ತಿರುಗಿ "ನೀವು ಅಲ್ಲಿಗೆ ಯಾವಾಗ ಹೋಗುತ್ತೀರಿ?" ಎಂದು ಕೇಳಿದಳು.

ಸ್ಮಿತ್ ದಂಪತಿಗಳಿಗೆ ಅವರ ಈ ಕುಟುಂಬವೇ ಸರ್ವಸ್ವವಾಗಿತ್ತು. ಶ್ರೀಮತಿ ಸ್ಮಿತ್ ಆಗಿದ್ದ ರೂತ್ ೪೭ ವರ್ಷಗಳ ವಯಸ್ಸಿನ, ಆಕರ್ಷಕ ವ್ಯಕ್ತಿತ್ವದ ಕೋಮಲಹೃದಯದ ಉತ್ತಮ ಗೃಹಿಣಿಯಾಗಿದ್ದಳು. ಆಕೆಯಲ್ಲಿ ಅಪಾರ ಸಹನಾಶಕ್ತಿ ಮತ್ತು ತಾಳ್ಮೆ ಇತ್ತು. ೫೪ ವರ್ಷ ವಯಸ್ಸಿನ ಜೇವ್‌ಸ್ಮಿತ್ ಗುಜ್ಜಾರಿಯಾಗಿದ್ದ. ಎಂಥ ಕಷ್ಟಗಳಿಗೂ ಬಗ್ಗದ ಎದೆಗಾರಿಕೆಯುಳ್ಳ, ಮಹಾಯೋಧನಾಗಿದ್ದ ಮತ್ತು ಎಂತಹ ಆಪತ್ತೇ ಬಂದರೂ ಉಚಿತ ನಿರ್ಧಾರ ತೆಗೆದುಕೊಂಡು, ಅವನ್ನು ದಾಟಿ ಹೋಗಬಲ್ಲ ಅಪಾರ ಸಾಮರ್ಥ್ಯ ಪಡೆದಿದ್ದನು. ಅಲ್ಲಿಯವರೆಗೆ ಸುಗಮವಾಗಿ ನಡೆಯುತ್ತಿದ್ದ ಆತನ ಎಸ್ಟೇಟ್ ಏಜೆನ್ಸಿಯ ವ್ಯಾಪಾರ ಕಳೆದ ಏಳು ವರ್ಷಗಳಿಂದ ಕುಸಿದುಹೋಗಿದ್ದರಿಂದ ಅವನು ತನ್ನ ಪತ್ನಿ ರೂತ್ ಜೊತೆಗೆ ಐದು ಮಕ್ಕಳ ಲಾಲನೆಪಾಲನೆಯನ್ನು ಮಾಡಬೇಕಾಗಿತ್ತು. ಅವರಲ್ಲಿ

ಮೂವರು ಅವನ ಸ್ವಂತ ಮಕ್ಕಳು (ಒಬ್ಬಳು ಮನೋವಿಕಲಳಾಗಿದ್ದಳು.) ಮತ್ತು ಇಬ್ಬರು ದತ್ತುಪುತ್ರಿಯರಿದ್ದರು. ಅವರಲ್ಲಿ ಒಬ್ಬಳು ಆಟಿಸ್ಟಿಕ್ ರೋಗಿ. ಮತ್ತೊಬ್ಬಳಿಗೆ ಲಕ್ವಾ ಹೊಡೆದಿತ್ತು.

ಅವರಲ್ಲಿ ಹಣಕ್ಕೆ ಮುಗ್ಗಟ್ಟಾಗಿದ್ದರೂ ಪ್ರೀತಿಗೆ ಕೊರತೆಯಿರಲಿಲ್ಲ. ಹೀಗಾಗಿ ಅವರು ಇನ್ನೂ ಒಂದು ವಿಕಲಾಂಗ ಮಗುವನ್ನು ದತ್ತು ತೆಗೆದುಕೊಳ್ಳಲು ಆಗಲೇ ನಿರ್ಧರಿಸಿದ್ದರು. ರುಮೇನಿಯದ ಆ ಫಿಲಮನ್ನು ನೋಡಿ ಅಲ್ಲಿಯ ನಿರ್ಗತಿಕ ಮಕ್ಕಳ ದಾರುಣಸ್ಥಿತಿಯಿಂದ ಮನನೊಂದ ಅವರು ಕಾರ್ಯಪ್ರವೃತ್ತರಾದರು. ಅಲ್ಲಿಗೆ ಹೋಗಲು ಬೇವ್‌ಸ್ಮಿತ್‌ನಲ್ಲಿ ಹಣವಿರಲಿಲ್ಲ. ಬೇವ್ ಹದಿನೈದು ದಿನಗಳೊಡನೆ ಹೇಗೂ ೧೫೦ ಪೌಂಡುಗಳನ್ನು ಸಾಲವಾಗಿ ತಂದ ಮತ್ತು ಸಾಲ ರೂಪದಲ್ಲಿ ಇನ್ನೂ ೩೦೦ ಪೌಂಡುಗಳನ್ನು ತೆಗೆದುಕೊಂಡ ಮತ್ತು ಯೂರೋಪಿನಿಂದ ಆಚೆ ತೆರಳಿದರು.

ಬ್ರಿಂಕೋವೆನೆಸ್ಟಿಯತ್ತ ಬೇವ್‌ಸ್ಮಿತ್ ತನ್ನ ಆ ಮೊದಲ ಅಲ್ಪಾವಧಿಯ ಪ್ರವಾಸದಲ್ಲಿ ಅವನು ಅಪೇಕ್ಷಿಸಿಪಟ್ಟ ಒಂಬತ್ತು ವರ್ಷದ ಹುಡುಗಿಯನ್ನು ದತ್ತು ತೆಗೆದುಕೊಳ್ಳಲು ಪರವಾನಗಿ ನೀಡುವ ಭರವಸೆ ಸಿಕ್ಕಿತು. ಆದರೆ ಅನಂತರ ಅನೇಕ ತಿಂಗಳು ಕಳೆದುವು. ಅವನು ರುಮೇನಿಯಕ್ಕೆ ಮತ್ತೊಂದು ಪ್ರವಾಸ ಕೈಗೊಂಡು ರುಮೇನಿಯ ಹಾಗೂ ಬ್ರಿಟಿಷ್ ಸರ್ಕಾರಗಳು ಕೇಳುವ ಸಮಸ್ತ ದಾಖಲೆಗಳನ್ನು ಸಂಗ್ರಹಿಸಿದ, ಆದರೂ ಅಲ್ಲಿಂದ ಸಮಾಚಾರವೇನೂ ತಿಳಿಯದೆ ಇದ್ದುದರಿಂದ ಆತನು ಮತ್ತೆ ಕಾರಿನಲ್ಲಿ ಅಲ್ಲಿಗೆ ತೆರಳಿದ. ತಾನು ದತ್ತು ತೆಗೆದುಕೊಳ್ಳಬಯಸಿದ ಹುಡುಗಿಯನ್ನು ನಾರ್ವೇ ದೇಶದ ಒಬ್ಬ ದಂಪತಿಗಳಿಗೆ ನೀಡಲಾಗಿದೆಯೆಂದು ತಿಳಿಯಿತು. ಅವನ ಬಳಿಯಲ್ಲಿಯ ದಾಖಲೆಗಳೆಲ್ಲ ಸ್ಪಷ್ಟವಾಗಿಲ್ಲ ಎಂದು ಅವನಿಗೆ ತಿಳಿಸಲಾಯಿತು. ಆದರೆ ಈ ದತ್ತು ತೆಗೆದುಕೊಳ್ಳುವ ವಿಷಯದಲ್ಲಿ ಹಣದ ಪ್ರಭಾವ ನಡೆದಿದೆ ಎಂದು ಬೇವ್‌ನಿಗೆ ಅನಂತರ ತಿಳಿಯಿತು.

ಕೋಪಗೊಂಡು, ತನ್ನ ಪ್ರಯತ್ನವನ್ನು ನಿಲ್ಲಿಸದ ಬೇವ್, ಆ ಕೋಟೆ ಮನೆಯ ವಿಕಲಾಂಗ ಮಕ್ಕಳಲ್ಲಿ "ಸಂಖ್ಯೆ ೧೩" ಎಂಬ ಪಟ್ಟಿಯಲ್ಲಿಯ ಚಿಕ್ಕ ಹುಡುಗಿಯನ್ನು ದತ್ತು ತೆಗೆದುಕೊಳ್ಳಲು ತಾನು ಒಪ್ಪಿದ ಮಗುವೆಂದು ಆಯ್ದುಕೊಂಡನು.

ಕಚೇರಿಯ ಕಡತದಲ್ಲಿ ಕೇವಲ ಒಂದು ಹಾಳೆಯಲ್ಲಿ ಮಾತ್ರ ಎಮಿಸಳಿಗೆ ಸಂಬಂಧಿಸಿದಂತೆ ತಿಳಿದುಬಂದ ವಿವರಗಳನ್ನು ದಾಖಲಿಸಲಾಗಿತ್ತು. ಹೆಸರು

ಎಮಿಸಿ—(ಎಮ್-ಆರ್-ಶೀ ಎಂದು ಉಚ್ಚರಿಸಲಾಗುತ್ತಿತ್ತು) ಗ್ರ್ಯಾಬರ್. ವಯಸ್ಸು ಐದು ವರ್ಷ. ಐದು ಮಕ್ಕಳನ್ನೊಳಗೊಂಡ ಕುಟುಂಬದಿಂದ ಬಂದವಳು. ಅವಳೊಬ್ಬಳ ಹೊರತು ಉಳಿದವರೆಲ್ಲರೂ ಅನಾಥಾಲಯದಲ್ಲಿಯೇ ಇದ್ದರು. ಅವಳನ್ನು ಮಾತ್ರ ಮೂರು ವರ್ಷದ ಹಿಂದೆ ಬೀದಿಯಲ್ಲಿ ತೊರೆಯಲಾಗಿತ್ತು. ರೋಗನಿದಾನ—'ಮಾತನಾಡುವುದರಲ್ಲಿ–ತೀವ್ರತರ ಹಿಂಬೀಳಿಕೆ.'

ಬೇವ್‌ಸ್ಮಿತ್ ತನ್ನಲ್ಲಿದ್ದ ಸಮಸ್ತ ಆವಶ್ಯಕ ಗುರುತು ಪತ್ರಗಳನ್ನೆಲ್ಲ ಕಳೆದುಕೊಂಡುದರಿಂದ ಎಮಿಸಳ ತಾಯಿ ಎಲ್ಲಿದ್ದಾರೆ ಎಂಬುದನ್ನು ಅವರು ಕಂಡುಹಿಡಿಯಬೇಕಾಯಿತು. ಆಕೆ ಪಕ್ಕದ ರೆಗೀನ್‌ಸಲ್ಲಿರುವ ಒಂದು ಕೋಳಿ ಮಾರಾಟದಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಳೆ ಎಂಬ ಸಂಗತಿ ಸ್ಮಿತ್ ಅವರಿಗೆ ತಿಳಿಯಿತು. ಮಗಳ ಬಗೆಗೆ ಸ್ವಲ್ಪವೂ ಆಸಕ್ತಿಯಿಲ್ಲದ ಎಮಿಸಳ ತಾಯಿ ಮಗಳ ಬಿಡುಗಡೆ ಪತ್ರಗಳಿಗೆ ಕೂಡಲೇ ಸಹಿ ಹಾಕಿದಳು. ಎಮಿಸಳ ತಂದೆ ಅಲ್ಲಿಂದ ನೂರು ಕಿ. ಮೀ. ದೂರದ ಬಾರ್ಸೆಕ್‌ನಲ್ಲಿ ಗಣಿಕೆಲಸಗಾರನಾಗಿದ್ದ. ಅವನು ತನ್ನ ಮಗಳನ್ನು ಎಂದೂ ನೋಡಿರಲಿಲ್ಲ. ಆದರೂ ಬೇವ್‌ಸ್ಮಿತ್ ಕೇಳಿದ ಅಗತ್ಯವಾದ ಕಾಗದ ಪತ್ರಗಳಿಗೆ ಸ್ವಲ್ಪವೂ ವಿಳಂಬಿಸದೆ ತನ್ನ ಸಹಿ ಹಾಕಿದ. ಅನಂತರ ಬೇವ್‌ಸ್ಮಿತ್ ಎಮಿಸಿಗೆ ಬ್ರಿಟನ್‌ನಲ್ಲಿ ಪ್ರವೇಶಾವಕಾಶ ದೊರೆಯಬೇಕಾದರೆ ಅಗತ್ಯವಾಗಿದ್ದಂತಹ ವೈದ್ಯಕೀಯ ತಪಾಸಣೆ ನಡೆಸಲು ಕರೆದೊಯ್ದನು.

ಮೂಕಮನನಿ : ಮೂರು ವರ್ಷಗಳ ಒಟ್ಟು ಅವಧಿಯಲ್ಲಿ ಎಮಿಸಿ ಕೇವಲ ಮೂರು ಬಾರಿ ಮಾತ್ರ ಹೊರಾಂಗಣಕ್ಕೆ ಹೋಗಿದ್ದಳು. ಬಾಚಿದ ಕೂದಲುಳ್ಳ ತಲೆಯ ಮೇಲೆ ಟೋಪಿಯನ್ನು ಧರಿಸಿ ಕತ್ತಲು ತುಂಬಿದ್ದ ವಾರ್ಡನ್ನು ಬಿಟ್ಟು, ಇದುವರೆಗೆ ನಡೆಯಲಾಗದಂತಹ ಕಾಲುಗಳನ್ನು ನೆಲದ ಮೇಲೆ ಊರಿದಾಗ ಕಣ್ಣು ಕತ್ತಲೆ ಬಂದಂತೆ ತತ್ತರಿಸಿದಳು ಮತ್ತು ಆಧಾರಕ್ಕೆಂದು ಬೇವ್‌ಸ್ಮಿತ್ ಅವರ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡಳು. "ಇದುವರೆಗೆ ಆಕೆಯ ಬಾಯಿಯಿಂದ ಒಂದೇ ಒಂದು ಶಬ್ದ ಹೊರಟಿರುವುದನ್ನು ಯಾರೂ ಕೇಳಿರಲಿಲ್ಲ. ಆದರೆ ಕಾರಿನ ಹಿಂದಿನ ಸೀಟಿನಲ್ಲಿ ಕುಳಿತ ಆಕೆ ಚಾಲಕನ ಕನ್ನಡಿಯಲ್ಲಿ ಇಣಿಕಾಟ ನಡೆಸಿದಳು. ಅಲ್ಲಿ ಬುದ್ಧಿವಂತಿಕೆಯ ಮಿರುಗು ಇದೆ ಎನ್ನುವುದನ್ನು ಸ್ಮಿತ್ ಕಂಡುಕೊಂಡರು. ಅಲ್ಲಿ ಆಕೆಯ ಚೇಷ್ಟೆಗಳಲ್ಲಿ ಬುದ್ಧಿವಂತಿಕೆಯ ಮೆರುಗು ಇತ್ತು ಎಂದು ಸ್ಮಿತ್‌ರಿಗೆ ತಿಳಿದಿತ್ತು.

ಅವರು ಚಿಕಿತ್ಸಾಲಯಕ್ಕೆ ಹೋಗುತ್ತಿದ್ದ ಮಾರ್ಗದಲ್ಲಿ ಬೇವ್‌ಸ್ಮಿತ್ ಅವರ ಕಾರು ಒಂದುಸಲ ಉಯ್ಯಾಲಾಡಿಸಿದಂತಾಯಿತು. ಆಗ ಸ್ಮಿತ್ ಎಮಿಸಳನ್ನು ಎಚ್ಚರಿಕೆಯಿಂದ ಹಿಡಿದೆತ್ತಿ ಸೀಟಿನ ಮೇಲೆ ಕೂರಿಸಿಕೊಂಡನು. ಆಕೆಗೆ ಹಿಂದೆ ಮುಂದೆ ಜಗ್ಗು ಹಾಕಿದಂತೆ ಆಯಿತು. ಆಕೆಯ ಕಣ್ಣುಗಳಿಂದ ಸುರಿದ ನೀರು ಕೆನ್ನೆಯನ್ನೆಲ್ಲ ತೋಯಿಸಿತು. ಹೀಗೆ ಸಂತೋಷ ಹೆಚ್ಚಿದಾಗಲೂ ಮಕ್ಕಳು ಅಳುತ್ತವೆ ಎಂಬುದನ್ನು ಸ್ಮಿತ್ ಹಿಂದೆಂದೂ ನೋಡಿರಲಿಲ್ಲ. ಆಶ್ಚರ್ಯವೆಂದರೆ ಅದನ್ನು ನೋಡಿದ ಸ್ಮಿತ್ ಅವರಿಗೂ ಅಳು ಬಂತು. ಮಗುವನ್ನು ತಬ್ಬಿ ಹಿಡಿದಾಗ ಅದು ತನ್ನ ಮುಖವನ್ನು ಸ್ಮಿತ್ ಅವರ ಕೆನ್ನೆಗೆ ಒತ್ತಿದಳು. ಪಾರಿವಾಳದಂತಹ ಮೆಲುವಾದ ಕೂಜನಧ್ವನಿ ಮಾಡಿದಳು.

ಕೊನೆಗಾಣಿಸುವಿಕೆ: ದತ್ತು ತೆಗೆದುಕೊಳ್ಳುವ ನಿಯಮಗಳು ದಿನದಿನವೂ ಬದಲಾಗುತ್ತಿರುವಂತೆ ತೋರುವ ರುಮೇನಿಯದಂಥ ವಿಕ್ಷುಬ್ಧ ನಾಡಿನಲ್ಲಿ ಕೊನೆ ಎಂಬುದೇ ಇಲ್ಲದ ಈ ಸಮಸ್ಯೆಗಳನ್ನು ಬಗೆಹರಿಸಲು ಬೇವ್‌ಸ್ಮಿತ್ ಅಲ್ಲಿ ತಂಗಿದ. ಆತನ ಕೈಯ್ಯಲ್ಲಿದ್ದ ಹಣ ಕಡಿಮೆಯಾಗುತ್ತ ಬಂತು. ಹೀಗಾಗಿ ವಸತಿಗೃಹಕ್ಕೆ ಹೋಗದೆ ತನ್ನ ಕಾರಿನಲ್ಲಿಯೇ ರಾತ್ರಿಗಳನ್ನು ಕಳೆದ. ಅತ್ತಕಡೆ ಪತಿಯ ಆಧಾರವಿಲ್ಲದೆ ರೂತ್ ತುಂಬ ಕಠಿಣಪರಿಸ್ಥಿತಿಯನ್ನು ಎದುರಿಸ ಬೇಕಾಯಿತು. ರುಮೇನಿಯದ ಭೀಕರ ಭೂಕಂಪನ ಹಾಗೂ ಬುಖಾರೆಸ್ಟಿನ ಬೀದಿಬೀದಿಗಳಲ್ಲಿ ಮತ್ತೆ ಹೋರಾಟ ಆರಂಭವಾಗಿದೆ ಎಂಬ ಸುದ್ದಿ ರೂತ್‌ಳಿಗೆ ದೂರದರ್ಶನದ ವರದಿಯ ಮೂಲಕ ತಿಳಿದಾಗ ಆಕೆಗೆ ತುಂಬ ಆತಂಕವಾಯಿತು. ಶಿಥಿಲಗೊಂಡಿದ್ದ ದೂರವಾಣಿ ಸಂಪರ್ಕವೂ ಆ ವೇಳೆಗೆ ಕಡಿದುಹೋದುದರಿಂದ ಅವರಿಗೆ ಪರಸ್ಪರ ಸಂಪರ್ಕಿಸಿ ಯೋಗಕ್ಷೇಮವನ್ನು ತಿಳಿಯಲು ಸಾಧ್ಯವಾಗಲಿಲ್ಲ.

ರುಮೇನಿಯಾದ ನೌಕರಶಾಹಿ ಆಡಳಿತ ಹಾಗೂ ಅಲ್ಲಿಯ ಕೋರ್ಟುಕಚೇರಿಗಳೊಡನೆ ಐದು ವಾರಗಳ ಕಾಲ ಒಂದೇ ಸಮನೆ ಹೋರಾಟ ನಡೆಸಿದ ಬೇವ್ ಸ್ಮಿತ್ ೧೩ ಕಿಲೋ ದೇಹದ ತೂಕವನ್ನು ಕಳೆದುಕೊಂಡ. ಈ ನಡುವೆ ಜಿಪ್ಸಿಗಳು ಅವನಲ್ಲಿದ್ದ ಒಂದಿಷ್ಟು ಹಣಕಾಸನ್ನು ದೋಚಿಕೊಂಡರು. ಆತನ ಕಾರನ್ನು ಭಗ್ನಗೊಳಿಸಿದ ಭಾರಿ ಧ್ವಂಸದಿಂದ ಹೇಗೋ ಪಾರಾಗಿ ಮನೆಗೆ ಹಿಂತಿರುಗಲು ಮತ್ತು ಎಮಿಸಳಿಗೆ ಬ್ರಿಟನ್ ಪ್ರವೇಶವನ್ನು ಸುಗಮಗೊಳಿಸಲು ಸಾಧ್ಯವಾಯಿತು. "ಆಕೆಯನ್ನು ಆ ಕೋಟೆಯಲ್ಲಿ ಬಿಡುವುದು ಅವನಿಗೆ ಕಷ್ಟವಾಯಿತು. ಸಮಾಧಿ ಭೂಮಿಯ ಕಡೆಗೆ ಕುದುರೆಗಾಡಿಗಳ ಮೇಲೆ ಉರುಳಿಸಿ

ಕೊಂಡು ಚಿಕ್ಕಪುಟ್ಟ ಶವಸಂಪುಟಗಳನ್ನು ಸ್ಮಶಾನದತ್ತ ಕೊಂಡೊಯ್ಯುತ್ತಿದ್ದ ದೃಶ್ಯವನ್ನು ಮರೆಯಲು ಅವನಿಗೆ ಸಾಧ್ಯವಾಗಲಿಲ್ಲ.

ಎಮಿಸಳ ಪಾಸ್‌ಪೋರ್ಟಿನ ಭಾವಚಿತ್ರವನ್ನು ಕಂಡಾಗ ರೂತ್‌ಳ ಹೃದಯ ದ್ರವಿಸಿತ್ತು. ಜೀವನದ ಭರವಸೆಯನ್ನೇ ಕಳೆದುಕೊಂಡು ಶೂನ್ಯದೃಷ್ಟಿಯಿಂದ ಕ್ಯಾಮರವನ್ನೇ ದಿಟ್ಟಿಸುತ್ತಿದ್ದ ಆ ಭಾವಶೂನ್ಯ ನಿರ್ಜೀವ ಕಣ್ಣುಗಳನ್ನು ಆಕೆಯ ಮನಸ್ಸಿನಿಂದ ಕೀಳಲು ಸಾಧ್ಯವಾಗಲಿಲ್ಲ. "ಆಕೆಗೆ ನಿಸ್ಸಂಶಯವಾಗಿ ಬೇಕಾಗಿರುವಂಥ ತಾಯಿಯ ಮಮತೆಯನ್ನು ನಾನು ಅವಳಿಗೆ ಕೊಡಬೇಕು ಎಂದು ನನಗೆ ಕೂಡಲೇ ತಿಳಿಯಿತು" ಎನ್ನುತ್ತಾರೆ ರೂತ್.

ಬೇನ್‌ಸ್ಮಿತ್ ಅವರು ತಮ್ಮೊಡನೆ ಬಹುಮುಖ್ಯವಾದ ಒಂದು ದಾಖಲೆ ಯನ್ನು ತಂದರು. ಅದು ಅವರು ಮತ್ತು ರೂತ್ ಎಮಿಸಿಯನ್ನು ರುಮೇನಿಯ ದಲ್ಲಿ ವಿಧಿಪೂರ್ವಕವಾಗಿ ದತ್ತು ತೆಗೆದುಕೊಂಡಿರುವುದನ್ನು ಸಿದ್ಧಪಡಿಸುವ ಪರಿಣಾಮಕಾರಕ ದಾಖಲೆಯಾಗಿತ್ತು. ಆದರೆ ರುಮೇನಿಯದ ವೈದ್ಯಕೀಯ ವರದಿಯನ್ನು ಅವರ ಸ್ವದೇಶೀ ಕಚೇರಿ ಕಡೆಗಣಿಸಿತು. ಅದು ಮಗು ಎಮಿಸಿ ಯನ್ನು ಅತ್ಯಂತ ಮನೋವಿಕಲಳೆಂದೂ ಆಕೆಯ ಉಳಿದ ಜೀವಮಾನದುದ್ದಕ್ಕೂ ಆಕೆಯನ್ನು ಅತ್ಯಂತ ಎಚ್ಚರಿಕೆಯಿಂದ ಕಾಪಾಡಬೇಕಾಗಿದೆ ಎಂದೂ ತಿಳಿಸಿತು. "ಬಹುಶಃ ನಾವು ಕೆಲಕಾಲಾನಂತರ ಆಕೆಯನ್ನು ಇಷ್ಟಪಡದೆ ಹೋಗಬಹುದೆಂಬ ಭೀತಿ ಅವರಲ್ಲಿ ಉಂಟಾಗಿದ್ದಿರಬೇಕು" ಎಂದು ರೂತ್ ಹೇಳುತ್ತಾಳೆ.

ಆದರೆ ಕೊನೆಗೆ ಅವರು ಲೋಕಸಭಾ ಸದಸ್ಯರೊಬ್ಬರ ಮಧ್ಯಪ್ರವೇಶದಿಂದ ಎಮಿಸಳಿಗೆ ರುಮೇನಿಯವನ್ನು ಪ್ರವೇಶಿಸಲು ಅನುಮತಿ ದೊರೆಯಿತು. ಅವರ ಹಿಂದಿನ ದತ್ತು ಕಾರ್ಯಗಳನ್ನು ನಿರ್ವಹಿಸಿದ್ದ ಶಿಫೀಲ್ಡ್‌ನ ವರಿಷ್ಠ ಸಮಾಜ ಸೇವಕರೊಬ್ಬರ ಗೃಹ-ಅಧ್ಯಯನ ವರದಿ ಅಲ್ಲಿಯ ನಿರ್ಣಾಯಕ ಅಂಶವಾಗಿತ್ತು. "ಅದರಲ್ಲಿ ಅತ್ಯಂತ ಉದಾತ್ತಹೃದಯದ ಮಮತಾಮಯಿಗಳಾದ ದಂಪತಿ ಗಳೆಂದೂ ಅವರಲ್ಲಿ ಇನ್ನೊಂದು ವಿಕಲಾಂಗ ಮಗುವನ್ನು ದತ್ತು ತೆಗೆದು ಕೊಳ್ಳಲು ಬೇಕಾದ ಮಮತೆ, ಅನುಭವ, ಸಮಯ ಮತ್ತು ಶಕ್ತಿಸಾಮರ್ಥ್ಯ ಗಳಿವೆಯೆಂದೂ ತಿಳಿಸಲಾಗಿತ್ತು ಮತ್ತು "ಅವರದ್ದು ಒಂದು ಅತಿ ವಿಶೇಷ ಕುಟುಂಬ"ವೆಂದು ಸಂಕ್ಷಿಪ್ತವಾಗಿ ತಿಳಿಸಲಾಗಿತ್ತು.

ಬಂದುಹೋಗುವಿಕೆ: ಸುಜ್ಜುಗುಜ್ಜಾಗಿದ್ದ ಹಿಂದಿನ ಸಮತಲ ಭಾಗವನ್ನು ಹಾಸಿಗೆಯನ್ನಾಗಿ ಪರಿವರ್ತಿಸಿಕೊಂಡಿದ್ದ ತನ್ನ ಎಸ್ಟೇಟ್ ಕಾರಿನಲ್ಲಿಯೇ ಜೇನ್

ಸ್ಮಿತ್ ೧೯೯೦ರ ಆಗಸ್ಟ್‌ನಲ್ಲಿ ನಾಲ್ಕನೆಯ ಬಾರಿಗೆ ಅನಾಥಾಲಯಕ್ಕೆ ಬಂದ. ಜೊತೆಗೆ ಸುಂದರ ಪೋಷಾಕು ಧರಿಸಿದ ರೂತ್ "ಯುಕೆಗೆ ಒಂದೇ ಪ್ರಯಾಣ" ಎಂಬ ಮುದ್ರೆ ಒತ್ತಿದ ಆಕೆಯ ಹೊಸ ರುಮೇನಿಯದ ಪಾಸ್‌ಪೋರ್ಟನ್ನು ತನ್ನೊಡನೆ ಇಟ್ಟುಕೊಂಡಿದ್ದಳು. ತಾನು ಈವರೆಗೆ ಇದ್ದ ಅನಾಥಾಲಯವನ್ನು ಬಿಟ್ಟು ಹೊರಟಾಗ ಎಮಿಸಿಯ ಮುಖದಲ್ಲಿ ಯಾವ ಬಗೆಯ ಭಾವೋದ್ರೇಕವೂ ಕಾಣಿಸಲಿಲ್ಲ.

ಬೇವ್‌ಸ್ಮಿತ್ ಎರಡು ದಿನಗಳಲ್ಲಿ ಐದು ದೇಶಗಳ ಮೂಲಕ ೨೫೦೦ ಕಿ.ಮೀ. ದೂರದವರೆಗೆ ಕಾರನ್ನು ಓಡಿಸಿದಾಗ ಎಮಿಸಿಯು ದಾರಿಯಲ್ಲಿ ಬಹುಮಟ್ಟಿಗೆ ಕಾರಿನಲ್ಲಿ ಮಲಗಿಕೊಂಡಿದ್ದಳು. ಆದರೆ ಅವರು ಕಿಲಾರ್‌ಮರ್ಶ್‌ಗೆ ಬಂದು ತಲುಪಿದಾಗ ರೂತ್‌ಳು ಕಂಡ ಮೊದಲ ಸಂಗತಿಯೇನೆಂದರೆ ಬಿಳಿಯ ಚಿಕ್ಕ ಮುಖವು ತನ್ನ ಕಂದು ಕಣ್ಣುಗಳಿಂದ ಕಾರಿನ ಕಿಟಕಿಯಿಂದ ಇಣಿಕಿ ನೋಡುತ್ತಿರುವುದನ್ನು ಕಂಡಳು. "ರೂತ್ ಎಮಿಸಿಯನ್ನು ತಬ್ಬಿಕೊಂಡಳು ಮತ್ತು ಆಕೆಯ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಅದೊಂದು ಆ ಕ್ಷಣದಲ್ಲಾದ ಹೊರಮೂಡಿದ ಪ್ರೀತಿಯ ಬಂಧನ" ಎಂದು ಬೇವ್‌ಸ್ಮಿತ್ ನೆನಪಿಸಿಕೊಳ್ಳುತ್ತಾರೆ.

ಅವರ ದೊಡ್ಡ ಮನೆ ತುಂಬಾ ಮಿತ್ರರೆಲ್ಲರೂ ಅವರನ್ನು ಸ್ವಾಗತಿಸಲಿಕ್ಕೆಂದು ಸೇರಿದ್ದರು. "ಎಮಿಸಿಯು ದ್ವಾರದಲ್ಲಿ ನಿಂತು ಸುತ್ತಲು ನೋಡಿದಳು" ಬಳಿಕ ಆಕೆ ಆ ಸಣಕಲಾದ, ದುರ್ಬಲವಾದ ಕಾಲುಗಳಿಂದ ತತ್ತರಿಸುತ್ತ ಒಳಗೆ ಹೋಗಿ ಪ್ರತಿಯೊಬ್ಬರ ಸುತ್ತು ತೆಗೆಯುತ್ತ ಅವರನ್ನು ಮುಟ್ಟಿ ನೋಡುತ್ತ, ಅವರನ್ನು ತಟ್ಟುತ್ತ, ತಬ್ಬಿಕೊಳ್ಳುತ್ತ ಸುತ್ತತೊಡಗಿದಳು. ಮನುಷ್ಯ ಸಂಪರ್ಕಕ್ಕಾಗಿ ಆಕೆ ಹಸಿದಿದ್ದಳು. ಜನರು ತನ್ನನ್ನು ಎತ್ತಿಕೊಂಡು ಪ್ರೀತಿಯಿಂದ ತಬ್ಬಿಕೊಳ್ಳ ಬಯಸುತ್ತಾರೆ ಎನ್ನುವುದು ಆಕೆಗೆ ಗೊತ್ತಿರಲಿಲ್ಲ.

ಬಿಟ್ಟುಹೋದ ಅಸಹ್ಯವಾದ ಆಸ್ತಿಗಳು: ಕೋಟಿಮನೆ ಎಮಿಸಳ ಮೇಲೆ ತನ್ನ ಗುರುತನ್ನು ಬಿಟ್ಟುಹೋಗಿತ್ತು. ಅವಳಂತೂ ಕರುಣೆ ಬರುವಷ್ಟರ ಮಟ್ಟಿಗೆ ತುಂಬ ದುರ್ಬಲಳಾಗಿದ್ದಳು. ಅವಳ ತೂಕ ೧೩ ಕಿಲೋಗಳಿಗಿಂತ ಕಡಿಮೆಯಿತ್ತು. ಆಕೆಯ ತಲೆಯಲ್ಲಿ ಹೇನು ತುಂಬಿತ್ತು. ಮಂಚದ ಪಟ್ಟಿಗಳಿಗೆ ಕೈಗಳನ್ನು ಬಡಿದುಕೊಂಡುದರಿಂದ ಆಕೆಯ ಮಣಿಕಟ್ಟುಗಳಲ್ಲಿ ಆಳವಾದ ಹುಣ್ಣುಗಳಾಗಿದ್ದುವು. ಹೊರಗೆ ಬಂದರೆ ಆಕೆ ಕಪ್ಪು ಕನ್ನಡಕವನ್ನು ಧರಿಸ

ಬೇಕಾಗಿತ್ತು, ಇಲ್ಲದಿದ್ದರೆ ಆಕೆಯ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಸ್ನಾನವೆಂದರೆ ಆ ಮೂಕ ಮಗುವಿಗೆ ದಿಗಿಲು ಹುಟ್ಟಿಸಿತು. ಏಕೆಂದರೆ, ಅವಳು ಬಂದಿದ್ದಂಥ ಅನಾಥಾಲಯದಲ್ಲಿ ಕೇವಲ ತಣ್ಣೀರು ಸುರಿದು ಸ್ನಾನ ಮಾಡಿಸಲಾಗುತ್ತಿತ್ತು. ಹೀಗಾಗಿ ಮೊದಲ ಹತ್ತು ದಿನಗಳಲ್ಲಿ ರೂತ್ ಎಮಿಸಿಯನ್ನು "ಕೋತಿಯಂತೆ ನನ್ನನ್ನು ತಬ್ಬಿಹಿಡಿದ ಎಮಿಸಿಯೊಂದಿಗೆ ಆಕೆ ಸ್ನಾನಗೃಹವನ್ನು ಹತ್ತಬೇಕಾಯಿತು. ಇದರಿಂದ ಆಕೆ ಗುಣಹೊಂದಿದ ಕೂಡಲೇ ಆಕೆಗೆ ತಿರುಚಿಕೊಂಡ ಅಂಡನಾಳದ ಶಸ್ತ್ರಚಿಕಿತ್ಸೆಯನ್ನು ನಡೆಸಬೇಕಾಗಿತ್ತು.

ಅನಾಥಾಲಯದಲ್ಲಿ ಒಂದು ಚೂರು ಒಣಕಲು ಬ್ರೆಡ್‌ನ ತುಣುಕಿಗಾಗಿ ಎಮಿಸಿ ಹೋರಾಡುತ್ತಿದ್ದುದನ್ನು ಬೇವ್ ಅವರು ನೋಡಿದ್ದರು. ಈಗ ಆಡಿಗಡಿಗೆ ಹಸಿದು ತನ್ನ ಮಂಕುಹಿಡಿದಂತಿದ್ದ ಸೋದರಿಯರ ತಟ್ಟೆಗಳಿಂದ ತಿನ್ನುತ್ತಿರುವುದನ್ನೂ ಮತ್ತು ಅದೇ ತನ್ನ ಕೊನೆಯ ಊಟವೋ ಎಂಬಂತೆ ಪ್ರತಿಸಲವೂ ಹೊಟ್ಟೆಬಾಕಿಯಂತೆ ಬಕಬಕನೆ ಮುಕ್ಕುತ್ತಿದ್ದಳು. ಮೊದಲ ವಾರದಲ್ಲಿಯಂತೂ ಆಕೆಯು ಅಡುಗೆಮನೆಯ ಸುತ್ತಲೂ ಹಾರಾಡುತ್ತಿದ್ದ ಹಾರು-ಹುಳುವನ್ನು ಹಿಡಿದುಕೊಂಡು ಬಾಯಿಗೆ ತುರುಕುವಷ್ಟರಲ್ಲಿ ಅದನ್ನು ಕಂಡ ರೂತ್ ಅವಳು ಅದನ್ನು ಬಾಯಿಗೆ ತುರುಕಿಕೊಳ್ಳದಂತೆ ನೋಡಿಕೊಂಡಳು.

ಎಮಿಸಿಯು ಪ್ರತಿಯೊಂದು ವಸ್ತುವೂ ಹೊಸತಾಗಿರುವಂಥ ಒಂದು ಆಕರ್ಷಕ ಜಗತ್ತನ್ನು ಸುತ್ತನೋಡಿ ಪರೀಕ್ಷಿಸತೊಡಗಿದಳು. ದೂರದರ್ಶನವನ್ನು ಹಾಕಿ ತೋರಿಸಲಾಯಿತು ಮತ್ತು ಅದನ್ನು ಥಟ್ಟನೆ ಮುಗಿಸಲಾಯಿತು, ಆಕೆಗೆ ಯಾವಾಗಲೂ ಮನೆ ಹೊರಗಡೆ ಇರುವುದೇ ಇಷ್ಟವಿತ್ತು. ಮುಖದ ಮೇಲೆ ಮಳೆಯ ಹನಿ ಬಿದ್ದರೆ ಸೂರ್ಯನ ಶಾಖ ತಟ್ಟಿದರೆ ಆಕೆಗೆ ಸಂತೋಷವಾಗುತ್ತಿತ್ತು. ಕತ್ತಲೆಯಾದ ಮೇಲೆ ರೂತ್ ಆಕೆಯ ಪಕ್ಕದಲ್ಲಿ ಕುಳಿತು, ಆಕೆಗೆ ಚಂದ್ರೋದಯವನ್ನು ಸವಿಯಲು ನೆರವಾಗುತ್ತಿದ್ದಳು. ಆಕೆಗೆ ಪ್ರತಿದಿನವೂ ಒಂದೊಂದು ಅದ್ಭುತವನ್ನು ತಂದು ತೋರಿಸುತ್ತಿತ್ತು. ಆಕೆಯ ಕೈಮೇಲೆ ಒಂದು ಜೀರುಂಡೆ ಜಾತಿಯ ಕೀಟ, ಮರಗಳಿಂದ ಉದುರುತ್ತಿರುವ ಎಲೆಗಳು, ತಲೆಯ ಮೇಲೆ ಹಾರಾಡುತ್ತಿರುವ ವಿಮಾನ—ಹೀಗೆ ದಿನದಿನವೂ ಆಕೆ ಹಲವು ವಿಚಿತ್ರ ಸಂಗತಿಗಳನ್ನು ಕಾಣುತ್ತಿದ್ದಳು.

ಆಕೆ ಒಮ್ಮೆ ಒಂದು ಡಾಂಡೆಲಿಯನ್ ಅನ್ನು ಎತ್ತಿಕೊಂಡಳು. ಅದರ ಬಣ್ಣ, ಆಕಾರಗಳಿಂದ ಆಕರ್ಷಿತಳಾದ ಆಕೆ ಅದನ್ನು ತನ್ನೊಡನೆ ಗಂಟೆಗಟ್ಟಲೆ ಸುತ್ತಿಸಿ

ದಳು ಎಂದು ನೆನಪಿಸುತ್ತ ರೂತ್ ಅವರು "ಅವಳು ನಿಜವಾಗಿ ತನ್ನ ಬಾಲ್ಯಾವಸ್ಥೆಯಲ್ಲಿಯೇ ಇದ್ದಾಳೋ ಎಂಬಂತೆ ತೋರುತ್ತಿತ್ತು" ಎಂದು ಜ್ಞಾಪಕ ಮಾಡಿಕೊಳ್ಳುತ್ತಾರೆ.

ದಿಗ್ಭ್ರಮೆಗೊಳಿಸುವಂತೆ ಆಡಿದಳು: ಎಂದೂ ಗೊಂಬೆಯನ್ನೇ ಕಂಡರಿಯದ ಐದು ವರ್ಷದ ಮಗು ಎಮಿಸಿ ತಮಗಾಗಿಯೇ ಮೀಸಲಾಗಿರುವ ಇಡಿ ಕೊಠಡಿಯುಳ್ಳ ಮನೆಯನ್ನು ಕಂಡಳು. ಮಗುವಿನ ಆಟದ ಸಂಗೀತಕರಡಿ (ಬೊಂಬೆ)ಯನ್ನು ಕಂಡು ಆಕೆಗೆ ಆಹ್ಲಾದ ಉಂಟಾಯಿತು. ಆಗ ಅವಳಿಗೆ ಬೇರೆ ಯಾರೂ ತೋರಿಸದಿದ್ದರೂ ಕೂಡ ಆಕೆ ಆ ಬೊಂಬೆಕರಡಿಗೆ ಉಣ್ಣಿಸಲಿಕ್ಕೆಂದು ತಟ್ಟೆ ಮತ್ತು ಚಮಚವನ್ನು ಕೈಗೆತ್ತಿಕೊಂಡಳು. ಮನೋವಿಕಲತೆಯ ಮಕ್ಕಳ ವರ್ತನೆಯ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದ ಬೇವ್‌ಸ್ಮಿತ್ ಮತ್ತು ರೂತ್ ಅವರು ಇದರಿಂದ ವಿಸ್ಮಯಗೊಂಡರು. ಅನಂತರ ಅವಳು ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಬಗೆ ಬಗೆಯ ಆಕಾರದ ಮರದ ತುಂಡುಗಳನ್ನು ನಿಪುಣಳಂತೆ ಜೋಡಿಸುವುದರಲ್ಲಿ ತನ್ಮಯಳಾಗಿರುವುದನ್ನು ಕಂಡರು. ದಿನ ಕಳೆದಂತೆ ಈ ಬಗೆಯ ನಿದರ್ಶನಗಳು ಹೆಚ್ಚಿದುವು. ಧ್ವನಿಗಳನ್ನು ಜ್ಞಾಪಿಸಿಕೊಳ್ಳುವುದು, ಪುಸ್ತಕಗಳಿಗೆ ಬಣ್ಣ ಹಾಕುವುದು, ಹಾರಿ ಚೆಂಡನ್ನು ಹಿಡಿಯುವುದು ಮುಂತಾದವುಗಳಲ್ಲಿ ಆಕೆಯ ಜಾಣ್ಮೆ, ನೈಪುಣ್ಯಗಳು ದಿನೇ ದಿನೇ ಹೆಚ್ಚಿದುವು.

ಇದನ್ನು ಕಂಡು ನಾವು ಬೆಚ್ಚಿ ಬೆರಗಾದೆವು ಎನ್ನುತ್ತಾರೆ ಬೇವ್‌ಸ್ಮಿತ್. ನಾವು ನೋಡುತ್ತಿರುವುದೇನು? ಇದೆಲ್ಲ ನಿಜವೇ ಎಂದು ನಂಬಲು ಸಾಧ್ಯವೇ ಆಗಲಿಲ್ಲ. ಆವರೆ ಅಂದು ಮಾನಸಿಕ ವಿಕಲತೆಯಿಂದ ಬಳಲುತ್ತಿದ್ದ ತಮ್ಮ ಮಗಳು ಇತರ ಹುಡುಗಿಯರಂತೆ ನಾರ್ಮಲ್ ಆಗಿದ್ದಳು" ಎಂದು ರೂತ್ ನೆನಪಿಸಿಕೊಳ್ಳುತ್ತಾರೆ. "ಆಕೆಗೆ ಸದಾ ಕಲಿಯಬೇಕೆಂಬ ಆಸೆ. ಪ್ರತಿಯೊಂದೂ ವಿಷಯವೂ ಆಕೆಯಲ್ಲಿ ಭಾವೋದ್ರೇಕವನ್ನುಂಟುಮಾಡುತ್ತಿತ್ತು. ಕೇವಲ ಒಂದು ಸಲ ಮಾತ್ರ ಅವಳಿಗೆ ಹಳೆಯ ಸಂಗತಿಗಳು ಮರಳಿ ನೆನಪಿಗೆ ಬಂದುವು. ಆಕೆ ಸ್ಮಿತ್-ರೂತ್ ದಂಪತಿಗಳ ಮನೆಗೆ ಬಂದ ಮೇಲೆ ಹತ್ತು ತಿಂಗಳ ಅನಂತರ ಅವಳಿಗೆ ನಾಮಕರಣ ಮಾಡಿದ ಸಂದರ್ಭದಲ್ಲಿ ಎಮಿಸಿಯು ಅತಿಯಾದ ಸಂಕಟದಿಂದ ನಡುಗತೊಡಗಿದಳು. ಬಹುಶಃ ಚರ್ಚ್‌ನ ಕಲ್ಲು ಗೋಡೆಗಳನ್ನು ಮತ್ತು ಕಮಾನುಗಳನ್ನು ಕಂಡಾಗ ಆಕೆಗೆ ತನ್ನ ಕೋಟೆಯ ಮನೆಯ ನೆನಪುಂಟಾಗಿ ಆಕೆ ನಡುಗುವಂತೆ ಮಾಡಿದ್ದಿರಬೇಕು ಎಂದು ಸ್ಮಿತ್ ದಂಪತಿಗಳಿಗೆ ಅನ್ನಿಸಿತು.

ಮೊದಲ ಏಳು ತಿಂಗಳವರೆಗೆ ಎಮಿಸಳಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಲು ಮತ್ತು ತನಗೆ ಇನ್ನು ಇಲ್ಲಿ ಯಾವ ಭಯವೂ ಇಲ್ಲವೆಂದು ದೃಢನಂಬಿಕೆ ಬರಿಸಲು ಮತ್ತು ಆಕೆ ಆರೋಗ್ಯವಂತೆಯಾಗುವಂತೆ ಮಾಡಲು ಸ್ಮಿತ್ ದಂಪತಿಗಳು ಶ್ರಮವಹಿಸಿ ದುಡಿದರು. ಆಕೆಯ ಚರ್ಮ ಮತ್ತು ಹಲ್ಲುಗಳು ಕೆಟ್ಟಿದ್ದುವು. ಸ್ನಾಯುಗಳು ಸೆಟೆದುಕೊಂಡಿದ್ದುವು. ಹೀಗಾಗಿ ಆಕೆಯಲ್ಲಿ ಶಕ್ತಿ ಕೂಡಿಕೊಳ್ಳಲು ಸ್ಮಿತ್ ದಂಪತಿಗಳು ಆಕೆಯಿಂದ ಆಟ ಆಡಿಸಿದರು. ಗೀರುಗಳನ್ನೆಳೆದು ಜೀವನವೆಂದರೇನೆಂದು ಕಲಿಸಿದರು. "ತಮಗೆ ಒಂದು ಹೊಸ ಮಗುವನ್ನು ಪಡೆದಂತಾಗಿದೆ ಎಂದೂ ತಾವು ಆ ಮಗುವಿನ ಬಾಲ್ಯ ಕಾಲದ ಮೊದಲ ಅಮೂಲ್ಯ ಐದು ವರ್ಷಗಳನ್ನು ಕಳೆದುಕೊಂಡೆವೆಂದೂ ರೂತ್ ಹೇಳಿಕೊಳ್ಳುತ್ತಿದ್ದರು.

ಎಮಿಸಿಯ ಬ್ರಿಂಕೋವೆನೆಸ್ಕೀ ಅನಾಥಾಲಯದ ದುಸ್ವಪ್ನದಿಂದ ಹೊರ ಬಂದ ಮೇಲೆ ತನ್ನ ಧ್ವನಿಯನ್ನೇ ಕೇಳ ಬಯಸುವ ಮಗುವಿನಂತೆ ಅಸ್ಪಷ್ಟವಾಗಿ ಮಾತನಾಡತೊಡಗಿದಳು. ಒಂದು ದಿನ ಮುಂಜಾನೆ ಸ್ಮಿತ್ ತನ್ನ ಅಸಾಧಾರಣ ಗಾತ್ರದ ಟೀ ಕಪ್ ಅನ್ನ ತುಂಬಿಸುತ್ತಿದ್ದಾಗ ಎಮಿಸಿಯ "ಡ್ಯಾಡಿಯ ಟೀ" ಎಂದು ಖಚಿತವಾಗಿ ತೋರಿಸಿ ಸಂತಸದಿಂದ ಕುಣಿದಳು. ಹೀಗೆ ಅಂದಿನಿಂದ ಎಮಿಸಿ ಬೇಗ ಬೇಗನೆ ಶಬ್ದಗಳನ್ನು, ವಾಕ್ಯಗಳನ್ನು ಜೋಡಿಸಿ ಮಾತನಾಡತೊಡಗಿದಳು ಮತ್ತು ಬೇಗ ಬೇಗನೆ ಒಂದರ ಹಿಂದೆ ಒಂದರಂತೆ ಪುಂಖಾನು ಪುಂಖವಾಗಿ ಪ್ರಶ್ನೆಗಳನ್ನು ಕೇಳತೊಡಗಿದಳು. "ಗಾಳಿ ಏಕೆ ಬೀಸುತ್ತದೆ?" "ಚಿಟ್ಟೆಗಳು ಎಲ್ಲಿಂದ ಬರುತ್ತವೆ?" "ಹೂಗಳು ಹೇಗೆ ಬೆಳೆಯುತ್ತವೆ? ಸೂರ್ಯನು ರಾತ್ರಿ ಕಾಲವಲ್ಲಿ ಎಲ್ಲಿ ಹೋಗುತ್ತಾನೆ?" ಹೀಗೆ ಪ್ರಶ್ನೆಗಳನ್ನು ಕೇಳತೊಡಗಿದಳು.

ಜೇವ್ ಸ್ಮಿತ್ ಅವರಿಗೆ ದಿನ ದಿನದ ಈ ಸರಳ ಸಾಮಾನ್ಯ ಸಂಗತಿಗಳನ್ನು ಆಕೆಗೆ ವಿವರಿಸುವುದು ಹೇಗೆ ಎನ್ನುವುದೇ ತಮಗೆ ಒಂದು ಸವಾಲಾಯಿತೆಂದು ಸ್ಮಿತ್ ಹೇಳುತ್ತಾರೆ. ಆಕೆ ತನ್ನದೇ ಆದ ಅನ್ವೇಷಣೆಗಳ ಮೂಲಕ ಜೀವನದ ಅಮೂಲ್ಯ ಪಾಠ್ಯಗಳನ್ನು ಬೋಧಿಸುತ್ತಾಳೆ" ಎಂದು ರೂತ್ ಮತ್ತು ಸ್ಮಿತ್ ಹೇಳುತ್ತಾರೆ.

ಬ್ರಿಂಕೋವೆನೆಸ್ಕಿಯ ಒಂದು ಪರಿತ್ಯಕ್ತ ಮಗು ಸುಂದರವಾದ, ಲವಲವಿಕೆಯಿಂದ ಕೂಡಿದ ಪುಟ್ಟ ಹುಡುಗಿಯಾಗಿ ಎಂಟು ವರ್ಷದ ಇತರ ಮಕ್ಕಳಂತೆ ತುಂಟ ಬಾಲಕಿಯಾಗಿ ಹೂವಿನಂತೆ ಅರಳಿರುವುದನ್ನು ಕಂಡು ಎಮಿಸಿಯ

ಸಾಕು ತಾಯಿತಂದೆಯರಿಗೆ ಸಂತೋಷದಿಂದ ಮೈಮರೆಯುವಂತಾಗುತ್ತಿತ್ತು. ಕಿಲಾಮರ್ಷ್‌ದ ಗ್ರಾಮೀಣ ಶಾಲೆಯಲ್ಲಿ ಆಕೆ ತನ್ನ ಪುಟ್ಟ ಗೆಳತಿಯರೊಂದಿಗೆ ನಗುತ್ತಿರುವುದನ್ನು ಮತ್ತು ಹರಟುತ್ತಿದ್ದುದನ್ನು ಕಂಡ ರೂತ್ ಹೆಮ್ಮೆಯಿಂದ "ಎಮಿಸಿ ಬೇರಾವ ಮಕ್ಕಳಿಗಿಂತಲೂ ಭಿನ್ನಳೆಂದು ತೋರುವುದೇ ಇಲ್ಲ" ಎನ್ನುತ್ತಾರೆ. ಆಕೆಯು ಓದು ಬರಹವೆಂದರೆ ತುಂಬ ಪ್ರೀತಿ ಮತ್ತು ಆಕೆಗೆ ಹನ್ನೊಂದು ವರ್ಷ ತುಂಬುವುದರೊಳಗೆ ಆಕೆ ತನ್ನ ಸಹಪಾಠಿಗಳನ್ನು ತನ್ನೆಡೆಗೆ ಸೆಳೆಯುವವಳು ಎಂದು ರೂತ್ ದೃಢವಾಗಿ ನಂಬಿದ್ದಾರೆ.

ಎಮಿಸಿ ಎಲ್ಲವನ್ನು ಸಹಿಸಿಕೊಳ್ಳುವುದಕ್ಕೆ ಕಲಿತುಕೊಂಡಿದ್ದಾಳೆ. ಈಗ ಆಕೆಯಲ್ಲಿ ಅಸಾಧಾರಣ ಗುಣಲಕ್ಷಣಗಳು ಕಾಣಿಸತೊಡಗಿವೆ. ತನ್ನ ಮುಂದಿನ ರೊಟ್ಟಿ ಎಲ್ಲಿಂದ ದೊರಕುತ್ತದೆ ಎಂಬುದನ್ನೇ ಅರಿಯದ ಮಕ್ಕಳು ಸಾಮಾನ್ಯವಾಗಿ ಸ್ವಾರ್ಥಿಗಳಾಗಿ—ಆತ್ಮರಕ್ಷಣೆಯಲ್ಲಿ ತೊಡಗಿರುತ್ತವೆ ಎಂದು ನಾವು ನಿರೀಕ್ಷಿಸುತ್ತೇವೆ. ಆದರೆ ಎಮಿಸಿ ಅದಕ್ಕೆ ವಿರುದ್ಧವಾಗಿದ್ದಾಳೆ. ಆಕೆ ವಿಚಾರವಂತೆ. ತನ್ನ ತಂಗಿಯರು ತನಗಿಂತ ಕೆಲವು ರೀತಿಗಳಲ್ಲಿ ಭಿನ್ನವಾಗಿದ್ದಾರೆ ಎಂಬ ಅರಿವನ್ನು ಹೊಂದಿದವಳಂತೆ ತುಂಬ ಕೋಮಲಹೃದಯದವಳಾಗಿದ್ದಾಳೆ ಎಂದು ರೂತ್ ದಂಪತಿಗಳಿಗೆ ಅನ್ನಿಸಿದೆ.

ಮಾತನಾಡಲಾಗದ ಮತ್ತು ನಡೆಯಲಿಕ್ಕೂ ಆಗದಂತಿದ್ದ ಅನಾಥ ಹುಡುಗಿ ಎಮಿಸಿ ಈಗ ಡರ್ಬಿಶೈರಿನ ಉಚ್ಚಾರಣಾ ರೀತಿಯಲ್ಲಿ ನಿರರ್ಗಳವಾಗಿ ಮಾತನಾಡುತ್ತಾಳೆ. ಬ್ಯಾಲೆಟ್ ತರಗತಿಗಳನ್ನು ಆರಂಭಿಸಿದ್ದಾಳೆ ಮತ್ತು ಈಚೆಗಂತೂ "ಸಿಂಗ್ ಎರೇನ್ ಬೋ" ಎಂಬ ತನ್ನ ಮೆಚ್ಚಿನ ಟ್ಯೂನ್‌ಅನ್ನು ಶಿಫೀಲ್ಡ್‌ನ ಕೂಟಗಾನದಲ್ಲಿ ಹಾಡಿ ರುಮೇನಿಯದ ನೆರವಿಗಾಗಿ ೪೨೦೦ ಪೌಂಡುಗಳನ್ನು ಸಂಗ್ರಹಿಸಿದ್ದಾಳೆ. "ರಾತ್-ಸಂಗೀತ"ದ ತಾಳಕ್ಕನುಗುಣವಾಗಿ ಆಕೆ ತನ್ನ ವಾಕ್‌ಮನ್‌ನೊಂದಿಗೆ ಮನೆಯ ಸುತ್ತ ಹರ್ಷೋಲ್ಲಾಸಗಳಿಂದ ನರ್ತಿಸಿದಾಗ ಅವಳಲ್ಲಿನ ವಿಕಲತೆ ಮತ್ತು ಮಹಾನ್ ಸಂಭ್ರಮದ ಸಮ್ಮಿಶ್ರಣವನ್ನು ಕಾಣುತ್ತೇವೆ" ಎಂದು ಬೇವ್‌ಸ್ಮಿತ್ ಹೇಳುತ್ತಾರೆ.


"ಇನ್ನೊಂದು ವಿಕಲಾಂಗ ಮಗುವನ್ನು ದತ್ತು ತೆಗೆದುಕೊಳ್ಳಬೇಕೆಂದು ನಾವು ಆಲೋಚಿಸುತ್ತಿದ್ದಾಗ ನಮ್ಮ ಅತಿಶಯಕ್ಕನುಸಾರವಾಗಿ ಎಮಿಸಿಯನ್ನು ಕಂಡೆವು ಎನ್ನುತ್ತಾರೆ ರೂತ್ ದಂಪತಿಗಳು.

ಈಗಲೂ ಸ್ಮಿತ್ ದಂಪತಿಗಳಲ್ಲಿ ಅಂಗವಿಕಲ ಮಕ್ಕಳ ಬಗೆಗಿನ ಅನುಕಂಪಕ್ಕೆ ಪಾರವೇ ಇಲ್ಲ. ಈ ದಂಪತಿಗಳು ಹೀಗಾಗಿ ಅತಿ ಶೀಘ್ರದಲ್ಲಿಯೇ ಮಿದುಳು—

ಪಾರ್ಶ್ವವಾಯು—ಪೀಡಿತ ಮತ್ತೊಂದು ಬಾಲಕಿಯನ್ನು ಪೋಷಿಸಲಿದ್ದಾರೆ. ಸಂಗೀತದ ನಾದದಿಂದ ಪ್ರೀತಿ ಮತ್ತು ನಗುವಿನಿಂದ ತುಂಬಿದ ಆ ಮನೆಯನ್ನು ಅದು ಸೇರಲಿದೆ.

ಆ ಮನೆಯಲ್ಲಿಯ ಪ್ರತಿಯೊಬ್ಬರೂ ಪರಸ್ಪರ ಸಹಾಯ ಮಾಡುತ್ತಾರೆ. ತನ್ನ ಮಕ್ಕಳ ಬಗೆಗೆ ಹೇಳುತ್ತಾ ರೂತ್ "ಅವರೆಲ್ಲರೂ ಅದ್ಭುತ ಕಾರ್ಯ ಸಾಧಕರು. ಆದರೆ ಎಮಿಸಿ ಮಾತ್ರ ಅತಿ ವಿಶಿಷ್ಟ ವ್ಯಕ್ತಿತ್ವದ ಹುಡುಗಿ. ಈಗಲೂ ನಾನು ಕೆಲವೊಮ್ಮೆ ಅವಳನ್ನೇ ನೋಡುತ್ತ ಕುಳಿತುಬಿಡುತ್ತೇನೆ. "ಕೃತಜ್ಞತೆಯಿಂದ ನನಗೆ ಅಳಬೇಕು ಅನ್ನಿಸುತ್ತದೆ. ಅವಳಿಂದ ನಮ್ಮ ಜೀವನದಲ್ಲಿ ಅದ್ಭುತ ಪವಾಡವೊಂದು ನಡೆದುಹೋಗಿದೆ ಎಂದು ನನಗೆ ಅನಿಸುತ್ತದೆ" ಎಂದು ಹೇಳಿ ಎಮಿಸಳನ್ನು ಮತ್ತಷ್ಟು ಅಭಿಮಾನದಿಂದ ನೋಡಿಕೊಳ್ಳುತ್ತಿದ್ದಾಳೆ.

ಎಂ. ಜಯಂತಿಬಾಯಿ



ತಪ್ಪುಗಳನ್ನು ಮಾಡಿದವನಿಗೆ ನಂತರ ಅದು ತಪ್ಪೆಂದು ಜ್ಞಾನೋದಯವಾಗುತ್ತದೆ. ಹೀಗೆ ನಮ್ಮ ಇಡೀ ಜೀವಮಾನದಲ್ಲಿ ನಾವು ನಮ್ಮ ತಪ್ಪುಗಳಿಂದಲೇ ಕಲಿಯುತ್ತಿರುತ್ತೇವೆ.

—ಷೆಲ್ಲಿ

ಕಾಳೂ ಗವಯಿ

ಕಾಳೂ ಗವಯಿ, ಊರಿನ ಪ್ರಸಿದ್ಧ ಗವಯಿಯ ಒಬ್ಬನೇ ಮಗ....ಅವನ ಹೆಸರು ಹೀರಾ ಎಂದಿತ್ತು. ಆದರೆ ಜನರು ಅವನನ್ನು ಕಾಳೂ ಎಂದು ಕರೆಯುತ್ತಿದ್ದರು. ನಿಜದಲ್ಲಿ ಅವನ ಬಣ್ಣ ತುಂಬಾ ಕಪ್ಪಾಗಿತ್ತು. ಎಷ್ಟು ಕಪ್ಪು ಎಂದರೆ ಕಾಳೂ ಅನ್ನೋ ಹೆಸರು ಬಿಟ್ಟರೆ, ಮತ್ತಾವ ಹೆಸರೂ ಅವನಿಗೆ ಸರಿಯಾಗಿ ಒಪ್ಪುತ್ತಿರಲಿಲ್ಲ. ದೊಡ್ಡವನಾದ ಮೇಲೆ ಅವನ ಹೆಸರೇ ಕಾಳೂ ಆಗಿ ಬಿಟ್ಟಿತು. ಬಣ್ಣ ಕರಿದಾಗಿದ್ದರೂ ದೇವರು ಅವನಿಗೆ ಒಳ್ಳೇ ಮನಮೋಹಕ ಕಂಠ ಕೊಟ್ಟಿದ್ದ. ತಂದೆಯಂತೂ ಪ್ರಸಿದ್ಧ ಗವಯಿ ಇದ್ದೇ ಇದ್ದರು. ತಂದೆಯ ತರಬೇತಿ, ಮಗನ ಜೀವನದಲ್ಲಿ ಬಂಗಾರಕ್ಕೆ ಕುಂದಣ ಕೂಡಿಸಿದಂತಾಯಿತು. ಕಾಳೂ ಬಹುಬೇಗ ಒಳ್ಳೇ ಪಂಡಿತ ಗವಯಿಯಾದ. ಈಗ ಜನ ಅವನನ್ನು ಕಾಳೂ ಗವಯಿಯೆಂದೇ ಗುರುತಿಸತೊಡಗಿದರು. ಅವನ ಕಂಠದ ಸಿರಿ....ಅವನ ಕಲೆ....ಅವನ ಕರಿಯ ಬಣ್ಣಕ್ಕೂ ಒಂದು ಬಗೆಯ ಸೌಂದರ್ಯ ತಂದಿತ್ತು.... ಪ್ರತಿಯೊಬ್ಬರೂ ಅವನ ಸ್ನೇಹಿತರಾಗಬಯಸುತ್ತಿದ್ದರು....ಸ್ಕೂಲಿನಲ್ಲಿ ಯಾವುದಾದರೂ ಸಮಾರಂಭವಾದರೆ ಎಲ್ಲರ ನಾಲಿಗೆಯ ಮೇಲೂ ಕಾಳೂನ ಹೆಸರೇ ಇರುವುದು....ಊರಲ್ಲಿ ಯಾವುದಾದರೂ ಹಬ್ಬವಾದರೆ ಭಜನೆ ಮಂಡಳಿಯ ಕಳೆಯೇ ಕಾಳೂ ಆಗುತ್ತಿದ್ದ. ಅವನ ಕರಿಯ ಬಣ್ಣದ ಕಡೆಗೆ ಯಾರ ಲಕ್ಷ್ಯವೂ ಹೋಗುತ್ತಿರಲಿಲ್ಲ. ಜನ ಅವನ ಕರಿಯ ಬಣ್ಣ ಮರೆತರು. ಅವನು ಜನರನ್ನು ಮರೆತ....ಅವನಿಗೆ ತಾನು ಗವಯಿಯಾದುದಕ್ಕೆ ಬಿಂಕ ಬಂದಿತು. ತನ್ನಷ್ಟಕ್ಕೆ ತಾನು ಎಲ್ಲರಗಿಂತಲೂ ದೊಡ್ಡವನೆಂದುಕೊಳ್ಳತೊಡಗಿದ....ಈಗ ಅವನು ನೇರವಾಗಿ ಯಾರ ಜೊತೆಗೂ ಮಾತಾಡುತ್ತಿರಲಿಲ್ಲ. ಅವನ ಕೀರ್ತಿ ಊರು ದಾಟಿ ರಾಜದರ್ಬಾರದವರೆಗೆ ಹಬ್ಬಿದಾಗಂತೂ ಅವನ ಜಂಬಕ್ಕೆ ಸೀಮೆಯೇ ಇಲ್ಲದಂತಾಯಿತು....ರಾಜನಿಗೆ ರಾಗರಂಗಿನ ಹುಚ್ಚಿದ್ದಿತು. ಅವನು ರಾಜರಥವನ್ನು ಕಳಿಸಿ, ಇವನನ್ನು ದರ್ಬಾರಕ್ಕೆ ಕರೆಸಿಕೊಂಡ. ಕಾಳೂ ಕೂಡ ತನ್ನ ಕಲೆಯ ನಿಪುಣತೆಯನ್ನು ತೋರಿಸಿದ. ರಾಜ ಸಂತೋಷಪಟ್ಟು ಇವನಿಗೆ ಬಹಳಷ್ಟು ಪಾರಿತೋಷಕ ಕೊಟ್ಟ....ಅಲ್ಲಿಂದ ಬಂದಮೇಲಂತೂ ಕಾಳೂನ ಕಾಲು ನೆಲದ ಮೇಲೆಯೇ ನಿಲ್ಲಲಿಲ್ಲ. ರಾಜದರ್ಬಾರದಲ್ಲಿ ರಾಗರಂಗಿನ ಕೂಟವಾದಾಗಲೆಲ್ಲ ಇವನನ್ನು

"ಸುರಬ್ ಗುಲಾಬ್" ಪುಸ್ತಕದಲ್ಲಿನ ಡಾ॥ ಬಿಸ್ವೇಶ್ವರಪ್ರದೀಪ್ ಅವರ ಲೇಖನದ ಅನುವಾದ.

ವಿಶೇಷವಾಗಿ ಕರೆಸಿಯೋ ಕರೆಸುತ್ತಿದ್ದರು. ಪ್ರತಿಸಲ ಬಹಳಷ್ಟು ಹಣ ಇವನ ಮೇಲೆ ಸುರಿಯುತ್ತಿದ್ದರು....ಇದರಿಂದ ಕಾಳೂ ಊರಲ್ಲಿ ಒಂದು ಉನ್ನತ ಮನೆ ಕಟ್ಟಿಸಿದ ಮತ್ತು ಬಹಳ ಠೀವಿಯಿಂದ ಇರತೊಡಗಿದ....ಈಗ ಇವನು ಊರಿನವರೊಂದಿಗೆ ಮತ್ತು ತನ್ನ ಬಾಲ್ಯದಲ್ಲಿ ಜೊತೆಗೆ ಆಡಿದ ಸಂಗಾತಿಗಳೊಂದಿಗೆ ಕೂಡುವುದನ್ನೂ ಮಾತನಾಡುವುದನ್ನೂ ನಿಲ್ಲಿಸಿದ. ಊರಿನ ಯಾವ ಹಬ್ಬದಲ್ಲೂ, ಊರವರಿಗಾಗಿ ಭಜನೆ ಹಾಡುವುದಂತೂ ದೂರ ಉಳಿಯಿತು, ಹಬ್ಬದಲ್ಲಿ ಸೇರುವುದೂ ತನ್ನ ಮರ್ಯಾದೆಗೆ ಕುಂದು ಎಂದು ಭಾವಿಸಿದ. ಊರವರೂ ಇಂಥ ಸಂದರ್ಭವಲ್ಲಿ ಕರೆಯಲೂ ಹೆದರುತ್ತಿದ್ದರು. ಏಕೆಂದರೆ ಒಂದೆರಡುಸಲ ಅವರನ್ನು ಇವನು ಚೆನ್ನಾಗಿ ಬೈದು ಕಳಿಸಿದ್ದ. "ಹೋಗಿ....ಹೋಗಿ....ನಿಮ್ಮ ಸ್ಥಿತಿ ಅರಿತುಕೊಂಡು ಮಾತನಾಡಿ....ನಾನು ಈಗ ರಾಜದರ್ಬಾರಕ್ಕೆ ಹೋಗುತ್ತಿರುವುದು ನಿಮಗೆ ಗೊತ್ತಿಲ್ಲವೆ?"

ಆದರೆ ಕಾಳೂ ಗವಯಿಯ ತಂದೆ ಈಗಲೂ ಊರಿನ ಅಚ್ಚುಮೆಚ್ಚಿನ ಗವಯಿಯಾಗಿದ್ದರು. ಅವರಲ್ಲಿ ಬಿಂಕ ಎಳ್ಳಷ್ಟೂ ಇರಲಿಲ್ಲ....ಊರಿನವರಿಗಾಗಿ ಅವರ ಹೃದಯದಲ್ಲಿ ಪ್ರೀತಿ ಇತ್ತು. ಗೌರವವಿತ್ತು.

ಕಾಳೂ ಅನೇಕಸಲ ತಂದೆಯನ್ನು ತಡೆದ. "ಬಾಪೂ! ನಿಮಗೆ ಏಕೆ ತಿಳಿಯುತ್ತಿಲ್ಲ....ಈಗ ನಾವು ದೊಡ್ಡ ಮನುಷ್ಯರಾಗಿದ್ದೇವೆ. ಈಗ ಇಂಥ ಚಿಕ್ಕ ಪುಟ್ಟ ಹಬ್ಬದ ಸಂದರ್ಭಗಳಲ್ಲಿ ಹಾಡಬಾರದು."

ಆದರೆ ಇವನ ತಂದೆ, ಪ್ರತಿಸಲವೂ ಇವನಿಗೆ...."ಮಗೂ! ಈ ಊರಿನ ಮಣ್ಣು ನಮ್ಮನ್ನು ಲಾಲಿಸಿ ಪಾಲಿಸಿದೆ. ಈ ಊರಿನವರೆಲ್ಲರೂ ನಮ್ಮವರಾಗಿದ್ದಾರೆ. ಭಜನೆ, ಆ ಪ್ರಭುವಿನ ಎದುರಿಗೆ ಪ್ರಾರ್ಥಿಸುವುದಕ್ಕೆ ಹೇಳುತ್ತೇವೆ. ಅಂದಮೇಲೆ ನೀನು ಹೀಗೆ ವಿಚಾರಮಾಡಬಾರದು" ಎಂದು ಉತ್ತರಿಸಿದರು.

ಆದರೆ ಕಾಳೂಗೆ ಐಶ್ವರ್ಯದ ಮದ ನೆತ್ತಿಗೇರಿತ್ತು....ತಂದೆಯ ಈ ಮಾತುಗಳು ಅದು ಹೇಗೆ ಇವನಿಗೆ ಸರಿ ಎನಿಸಬೇಕು! ತಂದೆಯ ಜೊತೆಗೆ ಸಿಡುಕಿನಿಂದ ಇರಲಾರಂಭಿಸಿದ. ಒಂದು ದಿವಸ ಅವರನ್ನು ಬಿಟ್ಟು ಬೇರೆಯಾಗಿ ಹೋದ.... ಮಗ ತನ್ನ ಹೊಸ ಮನೆಯಲ್ಲಿ ಇರುತ್ತಿದ್ದ. ತಂದೆ ತಮ್ಮ ಹರಕಲು ಮುರಕಲು ಗುಡಿಸಲಿನಲ್ಲಿ....ಈ ವಿಷಯದ ಬಗ್ಗೆ ಯಾರಿಗೂ ಹೇಳುವುದಕ್ಕೂ, ಕೇಳುವುದಕ್ಕೂ ಧೈರ್ಯವಾಗುತ್ತಿರಲಿಲ್ಲ....ಇವನಿಗಾಗಿ ಊರಿನವರ ಬಾಯಿಂದ ಕೆಟ್ಟ ನುಡಿಗಳೇ ಹೊರಡುತ್ತಿದ್ದವು... ತಂದೆಯೂ ದುಃಖಭರಿತರಾಗಿ, "ಇಂಥ ಅಯೋಗ್ಯ ಮಕ್ಕಳಿಗಿಂತ....ಮಕ್ಕಳಾಗಿರದಿದ್ದರೇ ಒಳ್ಳೆಯದಿತ್ತು...." ಅನ್ನು

ತ್ತಿದ್ದರು. ಕೊನೆಗೆ ಈ ದುಃಖ ಇವನ ತಂದೆಯನ್ನು ನುಂಗಿಯೇ ಬಿಟ್ಟಿತು. ....ವಯಸ್ಸಾದ ಗವಯಿ ಊರಿನವರನ್ನು ಶೋಕದಲ್ಲಿ ಮುಳುಗಿಸಿ ಕಣ್ಣು ಮುಚ್ಚಿದರು.

ಅವರು ಗತಿಸಿದ ಮೇಲೆ ಊರಿನ ಹಬ್ಬಗಳಿಗೆ ಕಳೆಯೇ ಇರಲಿಲ್ಲ....ಕಾಳೂ ಗವಯಿಯಂತೂ ಊರಿನವರ ಪಾಲಿಗೆ ಇರಲೇ ಇಲ್ಲ....ರಾಜದರ್ಬಾರಕ್ಕೆ ಮಾತ್ರವಿದ್ದ....ಆದರೆ ಎಲ್ಲ ಕಾಲ ಒಂದೇ ಇರುವುದಿಲ್ಲ. ರಾಜನಿಗೆ ಹೃದಯದ ಬೇನೆ ಇತ್ತು....ಒಂದು ದಿವಸ ಅಕಸ್ಮಾತ್ತಾಗಿ ಅವನು ಸ್ವರ್ಗಸ್ಥನಾದ. ಅವನ ಮಗ, ಅವನ ಸ್ಥಾನದಲ್ಲಿ ಪಟ್ಟಕ್ಕೆ ಬಂದ....ಹೊಸ ರಾಜನಿಗೆ ರಾಗರಂಗು ಕೂಟಗಳಲ್ಲಿ ಆಸಕ್ತಿ ಇರಲಿಲ್ಲ. ಕಾಳೂ ಗವಯಿಗೆ ರಾಜದರ್ಬಾರದಿಂದ ಕರೆ ಬರಲಿಲ್ಲ.

ಈಗ ರಾಜದರ್ಬಾರದಲ್ಲಿ ಇವನ ಕಲೆಗೆ ಮಾನ್ಯ ಕೊಡುವವರು ಯಾರೂ ಇರಲಿಲ್ಲ....ತನ್ನೂರವರ ಎದುರಿಗೆ, ಅವನು ಹಾಡಲೂ ಬಯಸುತ್ತಿರಲಿಲ್ಲ.... ಇವನು ಮಾಡುವುದಾದರೂ ಏನು!....ಈಗ ಇವನು ತನ್ನ ಮನೆಯಲ್ಲಿಯೇ ಏಕಾಕಿಯಾಗಿ ಕುಳಿತು ಹಾಡುತ್ತಿದ್ದ....ತಾನೇ ಹಾಡುತ್ತಿದ್ದ. ತಾನೇ ಕೇಳುತ್ತಿದ್ದ. ಈಗ ಅವನ ಜಂಬವೇ ಅವನಿಗೆ ಅಡ್ಡ ಬರುತ್ತಿತ್ತು....ಜನರಂತೂ ಅವನು ಗವಯಿಯಿದ್ದುದನ್ನೂ ಮರೆತುಬಿಟ್ಟರು....ಇದನ್ನು ಕಂಡು ಇವನಿಗೆ ವಿಪರೀತ ಕೋಪ ಬರುತ್ತಿತ್ತು....ಸಿಟ್ಟಿನಿಂದ ಒಳಗೊಳಗೇ ಕುದಿಯುತ್ತಿದ್ದ.... ಇವನು ತನ್ನ ಮನೆಯ ಅತಿ ಎತ್ತರದ ಕೋಣೆಯೊಳಕ್ಕೆ ಸೇರಿಕೊಂಡ....ಕೆಳಗಿನ ಎಲ್ಲ ಕೋಣೆಗಳನ್ನೂ ಮುಚ್ಚಿಬಿಟ್ಟ....ಮೇಲಿನ ಕೋಣೆಯಿಂದ ಇವನು ಹಾಡುವ ಧ್ವನಿ ಕೇಳಬರುತ್ತಿತ್ತು....ಆದರೆ ಆ ಧ್ವನಿಯಲ್ಲಿ ಯಾವ ರಸವೂ ಇರಲಿಲ್ಲ....ಯಾವ ಲಯವೂ ಇರಲಿಲ್ಲ....ಏಕೆಂದರೆ ಆ ಧ್ವನಿಗಳೆಲ್ಲ ಸಿಟ್ಟಿನಿಂದ ತುಂಬಿರುತ್ತಿದ್ದುವು. ಒಂದು ದಿವಸ ಆ ಧ್ವನಿ ಬರುವುದೂ ನಿಂತುಹೋಯಿತು ....ಬಹಳ ದಿವಸಗಳವರೆಗೆ ಧ್ವನಿ ಬರುವುದು ನಿಲ್ಲುತ್ತಲು, ಜನರಿಗೆ ಶಂಕೆಯಾಯಿತು....ಅವರೆಲ್ಲ ಇವನ ಮನೆಯ ಬಾಗಿಲನ್ನು ಒಡೆದರು....ಮೇಲೆ ಹೋದರು....ನೋಡಿದರು. ಕೋಣೆ ಖಾಲಿ ಇತ್ತು....ಮತ್ತೆ....ಮತ್ತೆ.... ಅಕಸ್ಮಾತ್ತಾಗಿ, ಎದುರಿಗಿರುವ ಅಲ್ಮಾರಿಯಿಂದ ಒಂದು ಕಾಗೆ ಹಾರಿತು. ಕಾ ಕಾ ಎನ್ನುತ್ತ ಬಂದು ಹೊರಗೆ ಚಪ್ಪರದ ಮೇಲೆ ಕುಳಿತಿತು.

ಮಾಧವರಾವ್ ಮುಧೋಳ್

ಸಂತೋಷದ ಬೆನ್ನಟ್ಟುವಿಕೆ

"ದೊರಕದ ವಸ್ತುವು ದೊರಕಿತು ತನಗೆಂದು" ಗೋಪಿ ಸಂತೋಷಪಟ್ಟ ಳಂತೆ." ಕಾರ್ಯದ ಮಗ್ನತೆಯೇ ಸಂತೋಷದ ಮೂಲ." "ಗಮನ ದಲ್ಲಿರುವ ಸಂತೋಷ ಗಮ್ಯವನ್ನು ತಲುಪಿದಾಗ ಉಳಿದಿರದು." ಇವೆಲ್ಲ ಅನುಭವೋಕ್ತಿಗಳು ನೀಡುವ ಸಂದೇಶ ಒಂದೇ : ಸಂತೋಷ ವ್ಯಕ್ತಿ ಮೂಲವಾದದ್ದು, ಬಾಹ್ಯ ಪ್ರೇರಕವಾದದ್ದಲ್ಲ! ನಿನಗೆ ನೀನೇ ಗೆಳೆಯಾ, ನಿನಗೆ ನೀನೇ !

ಒಮ್ಮೆ, ನನ್ನ ತಮ್ಮನನ್ನು "ನೀನು ಸಂತೋಷವಾಗಿದ್ದೀಯಾ ?" ಎಂದು ಕೇಳಿದೆ. "ಹೌದು, ಇಲ್ಲ. ಅದು ನೀನು ಅಭಿಪ್ರಾಯ ಪಡುವುದರನ್ನು ಅವಲಂಬಿಸಿದೆ" ಎಂದ. "ಹಾಗಾದರೆ ನೀನು ಕಡೆಯದಾಗಿ ಸಂತೋಷವಾಗಿದ್ದದ್ದು ಯಾವಾಗ ?" ಎಂದು ಕೇಳಿದೆ. "ಏಪ್ರಿಲ್ ೧೯೬೭" ಎಂದನವನು ಅವನ ಉತ್ತರ. ಜೀವನವನ್ನು ಲಘುವಾಗಿ ಕಳೆಯುವ ಯಾರನ್ನಾದರೂ ಪ್ರಶ್ನಿಸಲು ಸಾಧ್ಯವಾದೀತು !

ಇಯಾನನ ಉತ್ತರದಿಂದ ಸಂತೋಷದ ಬಗ್ಗೆ ಯೋಚಿಸಿದೆ. ನಾವು ಸಾಮಾನ್ಯ ವಾಗಿ ಅಸಾಧಾರಣವಾದದನ್ನು ಆನಂದದ ಪರಾಕಾಷ್ಠೆ ಎಂದು ಭಾವಿಸುತ್ತೇವೆ. ಮಗುವಿಗೆ ಸಂತೋಷ ಮಾಂತ್ರಿಕ ಗುಣವುಳ್ಳದಾಗಿದೆ. ಹೊಸದಾದ ಹುಲ್ಲುಮೆಡೆ ಯಲ್ಲಿ ಕಣ್ಣಾಮುಚ್ಚಾಲೆಯಾಡಿದ್ದು, ಕಾಡಿನಲ್ಲಿ ಕಳ್ಳ-ಪೋಲಿಸ್ ಆಟ ಆಡಿದ್ದು, ಶಾಲೆಯಲ್ಲಿ ಭಾಷಣ ಮಾಡಲು ಅವಕಾಶ ಸಿಕ್ಕದ್ದು, ಇವೆಲ್ಲಾ ನನಗೆ ಜ್ಞಾಪಕಕ್ಕೆ ಬರುತ್ತವೆ. ಕೆಲವು ಸಲ ಮಕ್ಕಳಿಗೆ ಕೀಳರಿಮೆಯ ಅನುಭವ ಆಗಬಹುದು. ಆದರೆ ಪಂದ್ಯದಲ್ಲಿ ಗೆದ್ದಾಗ ಅಥವಾ ಹೊಸ ಸೈಕಲ್ಲನ್ನು ಕೊಂಡಾಗ ಅವರಿ ಗಾಗುವ ಸಂತೋಷದ ಪರಮಾವಧಿ !

ಹದಿಹರೆಯದವರಿಗೆ ಸಂತೋಷದ ಅರ್ಥವೇ ಬೇರೆ. ಇದ್ದಕ್ಕಿದ್ದಂತೆ ಮೂಡುವ ಸಡಗರ, ಪ್ರೀತಿ, ಕೀರ್ತಿಯ ಸಂಭ್ರಮಗಳಿರಬಹುದು ಅಥವಾ ರಾತ್ರಿಕೂಟಕ್ಕೆ ಮುನ್ನ ಮೊಡವೆ ಒಡೆದಾಗ ಕೂಡ ಅವರಿಗೆ ಸಂತೋಷವಾಗಬಹುದು.

೧೯೯೪ನೇ ಜನವರಿ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟ ವಾಹೆಸ್ಟೈನ್ ಪೀಟರ್ಸ್ ಅವರ "ಅವರ್ ಪರ್ಸೂಟ್ ಆಫ್ ಹ್ಯಾಪಿನೆಸ್" ಲೇಖನದ ಅನುವಾದ.

ಅವರಿಗೆ ಸಂತೋಷ ಕ್ಷಣಿಕಅರ್ಥ ಹೊಂದುತ್ತದೆ. ಒಮ್ಮೆ, ರಾತ್ರಿಕೂಟಕ್ಕೆ ನನ್ನನ್ನು ಕರೆಯದೆ ಮಿಕ್ಕವರೆಲ್ಲಾ ಹೋದಾಗ ಉಂಟಾದ ದುಃಖವನ್ನು ಈಗಲೂ ನಾನು ಮರೆಯಲಾರೆ" ಜಾನ್‌ಟ್ರಪ್ರೊಲ್ಟಾನಂತಿದ್ದವನೊಂದಿಗೆ ನೃತ್ಯ ಮಾಡಿದಾಗ ಉಂಟಾದ ಸಂತೋಷ, ಭಾವೋದ್ರೇಕ ನನಗೀಗಲೂ ಚೆನ್ನಾಗಿ ನೆನಪಿದೆ.

ನಡುಪ್ರಾಯದಲ್ಲಿ ಪರಮಸಂತೋಷವನ್ನು ನೀಡುವ ಹುಟ್ಟು, ಪ್ರೀತಿ, ಮದುವೆಗಳು ಜವಾಬ್ದಾರಿಯನ್ನೂ, ಅವಪ್ರೊಮ್ಮೆ ನಷ್ಟವನ್ನೂ ಉಂಟುಮಾಡ ಬಲ್ಲವು. ಪ್ರೀತಿಯ ವೈಫಲ್ಯ, ಲೈಂಗಿಕತೆಯಿಂದ ಉಂಟಾದ ತೊಂದರೆಗಳು, ಪ್ರೀತಿಸಲ್ಪಟ್ಟವರ ಸಾವು—ಇವು ಮಧ್ಯಪ್ರಾಯದವರಿಗೆ ಸಂತೋಷದ ತೊಡಕು ಗಳಾದಾವು.

ನನ್ನ ನಿಘಂಟು 'ಸಂತೋಷ ಎಂದರೆ 'ಅದೃಷ್ಟ' ಅಥವಾ 'ಭಾಗ್ಯ' ಎಂದು ನಿರೂಪಿಸುತ್ತದೆ. ಆದರೆ ಇದಕ್ಕಿಂತ ಉತ್ತಮವಾದ ನಿರೂಪಣೆ ಏನೆಂದರೆ 'ಸಂತೋಷ' ಎನ್ನುವುದು 'ಆನಂದಪಡುವ ಸಾಮರ್ಥ್ಯ' ಎಂದು ನನಗನ್ನಿಸು ತ್ತದೆ.

ನಮ್ಮಲ್ಲಿರುವುದನ್ನು ನಾವು ಎಷ್ಟೆಷ್ಟು ಭೋಗಿಸುತ್ತೇವೋ ಅಷ್ಟಷ್ಟು ಸಂತೋಷವಾಗಿರುತ್ತೇವೆ. ಪ್ರೀತಿಸುವುದು, ಪ್ರೀತಿಸಲ್ಪಡುವುದು, ಒಳ್ಳೆಯ ಸ್ನೇಹಿತರ ಒಡನಾಟ, ನಮಗೆ ಬೇಕಾದಲ್ಲಿ ಸ್ವೇಚ್ಛೆಯಿಂದ ವಾಸ, ಕಡೆಗೆ ಒಳ್ಳೆಯ ಆರೋಗ್ಯ ಇಂಥವುಗಳಿಂದ ನಮಗೆ ಸುಲಭವಾಗಿ ದೊರಕುವ ಸಂತೋಷ ವನ್ನು ನಾವು ಸುಲಭವಾಗಿ ಉಪೇಕ್ಷಿಸುತ್ತೇವೆ!

ನಿನ್ನೆ ನನಗೆ ಸ್ವಲ್ಪ ಕಾಲ ಸಂತೋಷಪಡುವ ಅವಕಾಶ ಸಿಕ್ಕಿತು. ನನ್ನ ಊಟ ಮುಗಿಸಿ ಮನೆಯಲ್ಲಿ ನಾನೊಬ್ಬಳೇ ಇದ್ದಾಗ ನನಗೆ ಪರಮಾನಂದ ವಾಯಿತು. ಯಾವ ಅಡಚಣೆಯೂ ಇಲ್ಲದೆ, ಬೆಳಿಗ್ಗೆ ನನಗೆ ಬಹಳ ಇಷ್ಟವಾದ ಬರವಣಿಗೆಯಲ್ಲಿ ಕಳೆದೆ. ದಿನದ ನೀರವತೆಯ ನಂತರ ಮಕ್ಕಳು ಮನೆಗೆ ಬಂದಾಗ ಅವರ ಗಲಾಟೆಯನ್ನು ಆನಂದಿಸಿದೆ. ಅನಂತರ ಮತ್ತೆ ಶಾಂತಿ ಆವರಿಸಿತು. ನನ್ನ ಪತಿಯೊಡನೆ, ಅನ್ಯೋನ್ಯತೆಯ ಮತ್ತೊಂದು ಸುಖವೂ ಸಿಕ್ಕಿತು. ಕೆಲವು ಸಲ 'ನನ್ನವರಿಗೆ ನಾನು ಬೇಕು' ಎನ್ನುವ ಅರಿವೇ ನನಗೆ ಸಂತೋಷವನ್ನು ನೀಡಬಲ್ಲುದು.

ಸಂತೋಷ ಹೇಗೆ ರೂಪ ತಳೆಯುತ್ತದೆ ಎನ್ನುವುದೇ ಕೆಲವು ಕಾಲ ತಿಳಿಯು ವುದಿಲ್ಲ, ನನ್ನ ಸ್ನೇಹಿತರನ್ನು 'ಯಾವುದು ನಿಮಗೆ ಸಂತೋಷಕೊಡುತ್ತದೆ

ಎಂದು ಕೇಳಿದಾಗ, ಕ್ಷುಲ್ಲಕ ಕಾರಣಗಳನ್ನು ಕೊಟ್ಟರು. ಒಬ್ಬರು 'ನನಗೆ ಪೇಟೆಗೆ ಹೋಗುವುದೇ ಇಷ್ಟವಿಲ್ಲ. ಆದರೆ ಅಲ್ಲಿ ಮಾರಾಟ ಮಾಡುವವನು ಚೆನ್ನಾಗಿ ಮಾತನಾಡಿದಾಗ ಸಂತೋಷವಾಗುತ್ತದೆ' ಎಂದರು. ಮತ್ತೊಬ್ಬರಿಗೆ ದೂರವಾಣಿ ಎಂದರೆ ಇಷ್ಟವಂತೆ. 'ಪ್ರತಿ ಸಲ ಅದು ಧ್ವನಿ ಮಾಡಿದಾಗಲೂ, ಬೇರೆಯವರು ನನ್ನ ಬಗ್ಗೆ ಯೋಚಿಸುತ್ತಾರೆ ಎನಿಸಿ ಸಂತೋಷವಾಗುತ್ತದೆ' ಎಂದರು. ನನಗೆ ಕಾರು ಓಡಿಸುವುದೆಂದರೆ ಬಹಳ ಆನಂದ. ನಿನ್ನೆ ಶಾಲೆಯ ಬಸ್ ತಿರುವು ತೆಗೆದುಕೊಳ್ಳಲು, ನನ್ನ ಕಾರನ್ನು ನಿಲ್ಲಿಸಿದೆ. ಬಸ್ ಚಾಲಕ ನನ್ನತ್ತ ತಿರುಗಿ ನೋಡಿ ಹೆಬ್ಬೆರಳು ಮೇಲೆ ಮಾಡಿ ತೋರಿಸಿದ. ಆ ನಿಮಿಷದಲ್ಲಿ ಈ ಹುಚ್ಚು ಮೋಟಾರಿಗರ ಪ್ರಪಂಚದಲ್ಲಿ ನಾವಿಬ್ಬರೂ ಸ್ನೇಹಿತರಾಗಿದ್ದೆವು. ಅದು ನನಗೆ ನಗೆ ತರಿಸಿತು. ನಾವೆಲ್ಲಾ ಈ ರೀತಿಯ ಕ್ಷಣಗಳನ್ನು ಅನುಭವಿಸುತ್ತೇವೆ. ಆದರೆ ನಮ್ಮಲ್ಲಿ ಕೆಲವರು ಮಾತ್ರ, ಅದನ್ನು, 'ಸಂತೋಷದ ವಿಚಾರ' ಎಂದು ಪರಿಗಣಿಸುತ್ತೇವೆ.

ಸಂತೋಷವಾಗಿರಬೇಕಾದರೆ ಸುಖಪಡುವಂಥ ವಿರಾಮ ಕಾಲ ಮತ್ತು ತೃಪ್ತಿಕೊಡುವ ಕೆಲಸಗಳ ಸಮ್ಮಿಲನವಾಗಬೇಕು' ಎಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಹದಿನಾಲ್ಕು ಮಕ್ಕಳನ್ನು ಹೆತ್ತು, ಸಾಕಿ, ಸಲಹಿದ, ಅಗಸಗಿತ್ತಿಯಾಗಿದ್ದ ನನ್ನ ಮುತ್ತಜ್ಜಿಗೆ ಇವೆರಡೂ ಇದ್ದದ್ದು ಸಂದೇಹವೇ! ಅವಳಿಗೆ ದೊಡ್ಡ ಬಂಧು-ಬಳಗವಿತ್ತು. ಇದೇ ಅವಳಿಗೆ ತೃಪ್ತಿಕೊಟ್ಟಿತ್ತು. ಅವಳು ತನಗಿದ್ದದ್ದರಲ್ಲಿ ಸಂತೋಷವಾಗಿದ್ದಳೆಂದರೆ, ಅವಳು ಜೀವನವನ್ನು ಬೇರೆ ರೀತಿಯಾಗಿ ಎದುರು ನೋಡದೇ ಇದ್ದುದೇ ಅದಕ್ಕೆ ಕಾರಣವಿರಬೇಕು!

ನಮಗಾದರೋ ಅನೇಕ ಆಯ್ಕೆಗಳಿವೆ. ಪ್ರತಿಯೊಂದು ನಿಟ್ಟಿನಲ್ಲೂ ಗೆಲ್ಲಬೇಕೆಂಬ ಒತ್ತಡವಿದೆ. ಇದರಿಂದಾಗಿ, ನಾವು ಸಂತೋಷವನ್ನು, 'ಹೊಂದಿರಲೇಬೇಕಾದ ವಸ್ತು' ಎಂದು ತಿಳಿಯುತ್ತೇವೆ. ಅವನ್ನು ಹೊಂದಲು ನಾವು ಹಕ್ಕು ಜಮಾಯಿಸಿದಷ್ಟೂ, ಅದು ನಮ್ಮನ್ನು ಸಂಕಟಕ್ಕೊಳಗಾಗಿಸುತ್ತದೆ.

ಸಂಪತ್ತು-ಗೆಲುವು ಇರುವವರು ಸಂತೋಷವಾಗಿಲ್ಲದೆಯೂ ಇರಬಹುದು ಎನ್ನುವುದನ್ನು ಗಮನಿಸದೆ, ನಾವು ಸಂತೋಷದ ಬೆನ್ನಟ್ಟುತ್ತೇವೆ. ಸಂತೋಷವನ್ನು ಸಂಪತ್ತು ಹಾಗೂ ಗೆಲುವಿಗೆ ಸರಿದೂಗಲು ನೋಡುತ್ತೇವೆ. ಸಂತೋಷವು ನಮಗೆ ಜಟಿಲವಾದಷ್ಟೂ, ಪರಿಹಾರ ಒಂದೇ ತೆರನಾಗಿರುತ್ತದೆ.

ಸಂತೋಷ ಎನ್ನುವುದು 'ನಮಗೇನಾಗುತ್ತದೆ?' ಎನ್ನುವುದಲ್ಲ. ನಮಗೆ ಉಂಟಾಗುವುದನ್ನು 'ಹೇಗೆ ನೋಡುತ್ತೇವೆ' ಎಂಬುದರ ಮೇಲೆ ಅವಲಂಬಿಸಿದೆ. ಕೆಟ್ಟದರಲ್ಲಿ ಒಳ್ಳೆಯದನ್ನು ಹುಡುಕುವ ಕಲೆಯೇ ಸಂತೋಷ. ಸೋಲೆಂದು ಹಿಮ್ಮೆಟ್ಟದೆ, ಅದು ಗೆಲುವಿಗೆ ಅಡಿಪಾಯ ಎಂದು ಸವಾಲಾಗಿ ನೋಡುವ ಎದೆಗಾರಿಕೆಯೇ ಸಂತೋಷ. ಸಂತೋಷ ಎನ್ನುವುದು–ನಮಗಿಲ್ಲದಕ್ಕೆ ಆಸೆ ಪಡುವುದಲ್ಲ; ಇರುವುದನ್ನು ಇಟ್ಟುಕೊಂಡು ಆನಂದಪಡುವುದು.

ಜಯಸಿಂಹ

ಪುಸ್ತಕ ಪರಿಚಯ

ಶ್ರೀ ಹರಿಕಥಾಮೃತ ಸಿಂಧು (ರಾಮಕಥಾವಾಹಿನಿ) ಲೇಖಕರು : ಸಂತ ಭದ್ರಗಿರಿ ಅಚ್ಯುತದಾಸರು. ಪ್ರಕಾಶಕರು : ಶ್ರೀ ಸುಧೀಂದ್ರ ಪಬ್ಲಿಷಿಂಗ್ ಹೌಸ್, ಎಂಟನೆಯ ಅಡ್ಡ ರಸ್ತೆ, ಮಲ್ಲೇಶ್ವರ, ಬೆಂಗಳೂರು ೫೬೦೦೦೩, ಡೆಮಿ ೧/೮. ಪುಟಗಳು ೬೮೦. ಸಚಿತ್ರ ೧೯೯೨. ಬೆಲೆ ರೂ ೨೫೦.

ಜೀವಿಸೃಷ್ಟಿ ಕುರಿತಂತೆ ನಿಸರ್ಗಕ್ಕೆ ಏನಾದರೂ ಉದ್ದೇಶವಿದೆಯೆಂದು ಭಾವಿಸುವುದಾದರೆ ಅದು : ಸಕಲ ಜೀವಿಗಳೂ ಅನ್ಯೋನ್ಯವಾಗಿ ಬಾಳಿ ಅರಳಿ ಪರಿಮಳಿಸಿ 'ಹರುಷ ಹೆಚ್ಚಿಸಬೇಕು'; ಪರಸ್ಪರ ವಿರೋಧಿಗಳಾಗಿ ಕಾದಾಡಿ ಅಸುತೆತ್ತು ನಿಶ್ಶೇಷವಾಗತಕ್ಕದ್ದಲ್ಲ. ಆದರೆ "ಅನ್ಯೋನ್ಯವಾಗಿ ಬಾಳುವುದು" ಎಂಬುದು ದಿವ್ಯ ಆದರ್ಶವಾಗಿ ಉಳಿದಿದೆಯೇ ಹೊರತು ವಾಸ್ತವಾಚರಣೆಯಾಗಿ ವ್ಯಕ್ತವಾದುದು ದಿಲ್ಲ ಎಂಬುದು ಸರ್ವವೇದ್ಯ. ಪೌರಾಣಿಕ ಯಾದವೀ ಕಲಹ, ಐತಿಹಾಸಿಕ ಕಳಿಂಗ ಸಮರ ಅಥವಾ ಆಧುನಿಕ ಜಾಗತಿಕ ಯುದ್ಧ ಪ್ರತಿಯೊಂದೂ ಗುರಿ ಹಿಡಿದು ತೋರಿಸುತ್ತಿರುವುದು ಈ ಅನ್ಯೋನ್ಯತೆಯ ಅನಸ್ತಿತ್ವವನ್ನು. ಅಂದ ಮಾತ್ರಕ್ಕೆ ಯುದ್ಧ-ಮರಣ-ನಾಶವೇ ನಾಗರಿಕತೆಯ ಗಮ್ಯವೆಂದು ತೀರ್ಮಾನಿಸಲಾಗದು. ಏಕೆಂದರೆ ಮಾನವಮತಿಯ ಕರಾಳ ಮುಖದ ಜೊತೆಗೆ ಸಮತೂಕವಾಗಿ ಅಥವಾ ತುಸು ಹೆಚ್ಚಾಗಿಯೇ, ವಿವೇಕ ಮುಖವೂ ವರ್ತಿಸುತ್ತ ನಾಗರಿಕತೆಯ ಪ್ರವಾಹಗತಿಯನ್ನು ನಿಯಂತ್ರಿಸುತ್ತ, ವರ್ತಮಾನ ಯುಗದ ತನಕವೂ ಬಂದಿದೆ.

ನಾಗರಿಕತೆಯ ಪ್ರವಾಹ? ಸಕಲ ಜೀವಿಗಳ ಪೈಕಿ ಮಾನವ ಮಾತ್ರ ಯೋಚಿಸಬಲ್ಲ, ಮಾತಾಡಬಲ್ಲ ಮತ್ತು ತದನುಸಾರ ವರ್ತಿಸಬಲ್ಲ; ತನ್ನ ಅನುಭವವನ್ನೂ ಊಹನೆಯನ್ನೂ ನಿಸರ್ಗಕ್ಕೆ ಅನ್ವಯಿಸಿ ಇದರ ತಳರೂಪಿಕೆಯನ್ನು ಗ್ರಹಿಸಬಲ್ಲ (ಇದು ವಿಜ್ಞಾನ); ಹೀಗೆ ಕಲಿತ ಪಾಠವನ್ನು ಪುನಃ ನಿಸರ್ಗಕ್ಕೆ ಅನ್ವಯಿಸಿ 'ನವಸೃಷ್ಟಿ'ಗೈಯಬಲ್ಲ (ಇದು ತಂತ್ರವಿದ್ಯೆ); ಲಭ್ಯ ಮಾಹಿತಿಗಳನ್ನು ಚಿತ್ರ, ಭಾಷೆ, ಸಮೀಕರಣ, ಪ್ರತಿರೂಪ ಮುಂತಾದವುಗಳಲ್ಲಿ 'ಘನೀಕರಿಸಿ' ಇಡಬಲ್ಲ (ಇವು ದಾಖಲೆಗಳು). ಈ ಎಲ್ಲ ಚಟುವಟಿಕೆಗಳ ಸಾರಾಂಶವಿದು : ಒಂದು ಕಾಲದ ಸಂಚಿತಾನುಭವ ಮುಂದಿನ ಕಾಲಕ್ಕೆ ವರ್ಗಾಯಿಸಲ್ಪಡುವುದು. ಎಂದೇ ಇಂದಿನ ನಾವು ಹೇಗೆ ಸಂದ ಸಕಲ ಯುಗಗಳ ದಾಖಲೆಗಳಿಗೂ

ಉತ್ತರಾಧಿಕಾರಿಗಳೋ ಹಾಗೆ ಇವನ್ನು ನಮ್ಮ ದೇಣಿಗೆ ಸಹಿತ ಮುಂಬರಲಿರುವ ಪೀಳಿಗೆಗಳಿಗೆ ವರ್ಗಾಯಿಸಲು ಬದ್ಧರಾಗಿರಬೇಕಾದ ನ್ಯಾಸಧಾರಿಗಳೂ ಹೌದು. ನಾಗರಿಕತೆಯ ಪ್ರವಾಹವೆಂದರೆ ಇದೇ : ಅನುಭವದ ಉತ್ತರೋತ್ತರ ಸಂಚಯನ ಮತ್ತು ವರ್ಗಾವಣೆ—ಹೊಳೆಯ ನೀರಿನ ಹರಿವಿನಂತೆ.

ಕರಾಳತೆ–ವಿವೇಕ, ಕ್ರೌರ್ಯ–ಕರುಣೆ, ಪಾಶವೀಯತೆ–ಸಭ್ಯತೆ ಮುಂತಾದ ದ್ವಂದ್ವಗಳ ಸಂಘಟ್ಟನೆ ನಾಗರಿಕತೆಯ ಪ್ರವಾಹಕ್ಕೆ ಚಾಲಕಬಲ. ಈ ಪ್ರವಾಹದ ಮುನ್ನಡೆಯ ವೇಳೆ, ಆಯಾ ಯುಗ ಧರ್ಮಾನುಸಾರ, ಹಲವಾರು ಮಾನವೀಯ ಮೌಲ್ಯಗಳು ಹೆಪ್ಪುಗಟ್ಟುತ್ತವೆ. ನಿದರ್ಶನ : "ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸ ಬೇಡ, ಇದಿರ ಹಳಿಯಲುಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ, ಇದೇ ನಮ್ಮ ಕೂಡಲ ಸಂಗನನೊಲಿಸುವ ಪರಿ!"

ಕದಿಯಬಾರದೇಕೆ? ನಿಸರ್ಗ ಕುರಿತಂತೆ ಇದರಿಂದ—ಅಂದರೆ ರಾಮನ ಮಡದಿಯನ್ನು ರಾವಣ ಕದ್ದೊಯ್ದದ್ದರಿಂದ—ಯಾವ ಬಾಧಕವೂ ಇಲ್ಲ, ಸಾಧಕವೂ ಇಲ್ಲ. ಏಕೆಂದರೆ ನಿಸರ್ಗಕ್ಕೆ ಮನವಿಲ್ಲ, ರಾಗ ಭಾವಗಳಿಲ್ಲ, ಮನುಷ್ಯನ ಆಸೆ ನಿರಾಶೆ ಕುರಿತಂತೆ ಅದು ನಿರ್ಲಿಪ್ತ. ಆದರೆ ರಾವಣನಿಗೆ? ಈತನ ಅನುಚರರಿಗೆ? ಸೀತಾಲಕ್ಷ್ಮಣರಾಮರಿಗೆ? ಸ್ವಂತ ಹಿತದೃಷ್ಟಿಯಿಂದ ರಾವಣ ಈ ಕುಕೃತ್ಯಕ್ಕೆ ಇಳಿಯಬಾರದಿತ್ತು. ಅಧಿಕಾರ, ವಯಸ್ಸು ಮತ್ತು ವಿಷಯಾಸಕ್ತಿ ಸಂಗಮಿಸಿದ್ದುವು ರಾವಣನಲ್ಲಿ. ಮಾಡಬಾರದ್ದನ್ನು ಮಾಡಿದ, ಆಗಬಾರದ್ದು ಆಯಿತು.

ಮಾನವೀಯ ಮೌಲ್ಯಗಳೆಂದರೆ ನಾಗರಿಕತೆಯ ಪ್ರವಾಹದಲ್ಲಿ ಮೈದಳೆವ ಶಾಶ್ವತ ದ್ವೀಪಗಳು, ದೀಪಸ್ತಂಭಗಳು ಕೂಡ. ಘಟನೆ ಅಥವಾ ಅನುಭವ ಕಾಲದೇಶಬಂಧಿತವಾಗಿರಬಹುದು. ಅಂದರೆ ಒಂದು ಸ್ಥಳಕ್ಕೆ ಮತ್ತು ಒಂದು ಕಾಲಕ್ಕೆ ಸೀಮಿತವಾಗಿರಬಹುದು. ಆದರೆ ತಜ್ಜನ್ಯ ಮೌಲ್ಯ ಕಾಲದೇಶಾತೀತವಾಗಿರುವುದು. ಆದ್ದರಿಂದ ಇಂದು 'ರಾಮಾಯಣ' ವಾಸ್ತವ ಘಟನೆಯೇ ಕವಿ ಕಲ್ಪನೆಯೇ ಎಂಬ ಜಿಜ್ಞಾಸೆ ಅಪ್ರಸ್ತುತ; 'ರಾಮಾಯಣ'ದ ಸಂದೇಶ ಇಂದಿಗೂ ಸಾಧುವೇ ಪ್ರಸ್ತುತವೇ ಎಂಬ ಪ್ರಶ್ನೆಗಳು ಮಾತ್ರ ಸಂಗತವಾಗುತ್ತವೆ.

ವಿಭೀಷಣ ತನ್ನ ಅಣ್ಣ ರಾವಣನಿಗೆ ಬೋಧಿಸುತ್ತಾನೆ: "ಹೇ ಮಹಾರಾಜನೇ! ಪ್ರಿಯವಾದ ಮಾತನ್ನು ಆಡುವವರು ನಿನಗೆ ಸುಲಭವಾಗಿ ಸಿಗುತ್ತಾರೆ. ಅಪ್ರಿಯವಾದರೂ ಸತ್ಯವಾದ, ಪಥ್ಯವಾದ ಮಾತನ್ನಾಡುವವರು ಸಿಗುವುದು ದುರ್ಲಭ. ಇನ್ನಾದರೂ ವಿಚಾರಮಾಡು. ಶ್ರೀರಾಮನ ಕುರಿತು, ಸೀತೆಯ ಕುರಿತು ನೀನು

ತಿಳಿದುದೂ ನಿನ್ನ ಮಂತ್ರಿಗಳು, ಸೇನಾ ಪ್ರಮುಖರು ತಿಳಿದುದೂ ಸರಿಯಲ್ಲ.... ಅಣ್ಣಾ! ಛಲದಂಕನಾದ ನಿನಗೆ ಜಾನಕಿಯನ್ನು [ರಾಮನಿಗೆ] ಮರಳಿ ಒಪ್ಪಿಸಲು ನಾಚಿಕೆಯಾಗುವುದಾದರೆ ಭುವನ ಮಾತೆಯಾದ ಜಾನಕಿಯನ್ನು ನಾನೇ ಕೊಂಡೊಯ್ದು ಶ್ರೀ ರಾಮನಿಗೊಪ್ಪಿಸಿ, ನಿನ್ನನ್ನು ಕ್ಷಮಿಸುವಂತೆ ಕೇಳುತ್ತೇನೆ ...." ಮಂತ್ರಿ, ವೈದ್ಯ, ಗುರು ಈ ಮೂವರು ಭಯಕ್ಕೆ ಅಥವಾ ಲಾಭದಾಸೆಗೆ ಬಲಿಯಾದವರಾದರೆ, ಅವರು ಪ್ರಿಯವಾದ ಮಾತನ್ನಾಡುತ್ತ ರಾಜನ ರಾಜ್ಯ, ಆರೋಗ್ಯ ಹಾಗೂ ಧರ್ಮ ಮೂರನ್ನೂ ಕೆಡಿಸುತ್ತಾರೆ (ಪುಟ ೪೮೭–೪೮೮).

ವರ್ತಮಾನ ಕಾಲದ ಭಾರತದಲ್ಲಿಯ ವಿದ್ಯಮಾನಗಳಿಗೆ ಮಾತ್ರವಲ್ಲ ಪ್ರಪಂಚದ ಬೇರೆಬೇರೆ ಕಡೆಗಳಲ್ಲಿಯ ನಡವಳಿಕೆಗಳಿಗೆ ಕೂಡ ಪ್ರತೀಕಾತ್ಮಕವಾಗಿ ಹಿಡಿದ ಕನ್ನಡಿಯಲ್ಲವೇ ಮೇಲಿನ ನುಡಿಗಳು! ಅಭಿಜಾತ ವಾಙ್ಮಯದ ಪ್ರಸ್ತುತತೆ ಮತ್ತು ಸ್ವಾರಸ್ಯವಿರುವುದೇ ಇಲ್ಲಿ—ಅದು ಸಾರ್ವಕಾಲಿಕ ಮತ್ತು ಸಾರ್ವದೈಶಿಕವಾಗಿರುವಾಗಲೇ ಸಮಕಾಲೀನ ಮತ್ತು ಸ್ಥಳೀಯವೂ ಆಗಿರುವುದು, ದೇಹದಲ್ಲಿಯ ಅಂತಸ್ಸ್ರಾವಕ ಗ್ರಂಥಿಗಳಂತೆ ಯುಕ್ತ ವೇಳೆಯಲ್ಲಿ ಮತ್ತು ಯುಕ್ತ ನೆಲೆಯಲ್ಲಿ ರಾಷ್ಟ್ರಪುರುಷನ ದೇಹಕ್ಕೆ ಜೀವಪೋಷಕ ರಸವನ್ನು ಸ್ರವಿಸುತ್ತಿರುವುದು.

"ಕಲೆಯನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ? ತನು ನಿನ್ನದಾದೊಡಂ ಚೈತನ್ಯಮೆನ್ನದೆನೆ...." (ಆದಿಕವಿ ವಾಲ್ಮೀಕಿಗೆ ಕುವೆಂಪು ಅವರು ಸಲ್ಲಿಸಿರುವ ನುಡಿನಮನ) 'ಶ್ರೀ ರಾಮಕಥಾ ವಾಹಿನಿ' ಎಂಬ ಪ್ರಸಕ್ತ ಉದ್ಗ್ರಂಥದಲ್ಲಿ ಭದ್ರಗಿರಿಯವರು ವಾಲ್ಮೀಕಿಯ 'ಆದಿ' ತನುವಿಗೆ ತಮ್ಮ 'ವರ್ತಮಾನ' ಚೇತನ ವನ್ನು ಧಾರೆಯೆರೆದು ನವಸೌಂದರ್ಯವನ್ನು ಅನಾವರಣಗೊಳಿಸಿದ್ದಾರೆ.

ಅಶೋಕವನದಲ್ಲಿ "ರಘುಪುಂಗವನ ಅಂಗನೆಯಾದ ಮಂಗಳಾಂಗಿ ಸೀತಾದೇವಿಗೆ ಹನುಮಂತ ಅಂಗುಲೀಯಕವನ್ನು" ಕೊಡುವ ಮುನ್ನ ಮರೆಯಲ್ಲಿ ನಿಂತು (ಅಂದರೆ ಅಶರೀರನಾಗಿ) ಸಶರೀರವಾಣಿಯಿಂದ "ರಾಮಕಥೆಯನ್ನು ಸಂಗ್ರಹ ವಾಗಿ ಹೇಳುತ್ತಾನೆ. 'ಅಜಮಹಾರಾಜನ ಪುತ್ರನಾದ ದಶರಥ ಮಹಾರಾಜನು ತನ್ನ ಕೌಸಲ್ಯೆ, ಕೈಕೆ, ಸುಮಿತ್ರೆಯರೆಂಬ ನಿಜಸತಿಯರಲ್ಲಿ ಸಂತಾನವಾಗಲಿಲ್ಲ ವೆಂದು ಪುತ್ರಕಾಮೇಷ್ಟಿಯನ್ನು ಗೈದು ಶ್ರೀರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ಸುತರನ್ನು ಪಡೆದನಂತೆ. ಶ್ರೀರಾಮನು ಹದಿನಾರರ ಹರೆಯ ದಲ್ಲೇ ವಿಶ್ವಾಮಿತ್ರರೊಡನೆ ಸಿದ್ಧಾಶ್ರಮಕ್ಕೈತಂದು, ಮಾರ್ಗದಲ್ಲಿ ತಾಟಕಿ ಯನ್ನು ವಧಿಸಿ, ಸುಬಾಹುವನ್ನು ಮರ್ದಿಸಿ, ಮಾರೀಚನನ್ನು ಶಿಕ್ಷಿಸಿ, ಯಜ್ಞ.

ರಕ್ಷಣೆಗೈದು, ಅಲ್ಲಿಂದ ಮಿಥಿಲಾನಗರವನ್ನು ಪ್ರೊಕ್ಕು, ಹರಧನುವನ್ನು ಭಂಗಿಸಿ, ಸೀತಾದೇವಿಯನ್ನು ವಿವಾಹವಾಗಿ ಮಾರ್ಗದಲ್ಲಿ ಭಾರ್ಗವ ರಾಮರನ್ನು ಒಲಿಸಿ, ಅಯೋಧ್ಯೆಗೈತಂದು ಸುಖದಿಂದಿರಬೇಕೆಂಬಾಗ, ಪಿತೃವಾಕ್ಯ ಪರಿಪಾಲನೆಗಾಗಿ ಕೈಕೇಯಮ್ಮನವರ ಕಟ್ಟಪ್ಪಣೆಯಂತೆ, ಸೀತಾಲಕ್ಷ್ಮಣಸಮೇತನಾಗಿ ವನವಾಸವನ್ನು ಕೈಕೊಂಡು, ಅತ್ರಿಯಿಂದ ಅಗಸ್ತ್ಯರ ತನಕ ಪ್ರಯಾಣಗೈದು, ರಾವಣನಿಂದ ಸೀತೆಯನ್ನು ಹೋಗಲಾಡಿಸಿಕೊಂಡು, ಪಕ್ಷಿರಾಜನಾದ ಜಟಾಯುವಿನಿಂದ ಆ ರಾವಣನ ವೃತ್ತಾಂತವನ್ನು ತಿಳಿದು ಶಬರಿಗೆ ಮೋಕ್ಷವನ್ನಿತ್ತು, ಪಂಪಾತೀರಕ್ಕಾಗಮಿಸಿ, ಸುಗ್ರೀವನ ಸಖ್ಯದಿಂದ ವಾಲಿಯನ್ನು ನಿಗ್ರಹಿಸಿ, ಸೀತಾನ್ವೇಷಣಕ್ಕಾಗಿ ಪೂರ್ವ, ಪಶ್ಚಿಮ ಉತ್ತರಕ್ಕೆ ಸುಗ್ರೀವನಿಂದ ಕಳುಹಲ್ಪಟ್ಟ ವಾನರರ ದಂಡು ಸುದ್ದಿ ತಿಳಿಯದೇ ಹಿಂದೆ ಬಂದ ಮೇಲೆ, ಶ್ರೀರಾಮನ ಆಜ್ಞೆಯಂತೆ ಅವನ ಬಿಟ್ಟ ಬಾಣದಂತಿರುವ ನಾನು ಸಂಪಾತಿಯ ನುಡಿಯಂತೆ ಈ ಲಂಕೆಗೆ ಬಂದು ನಿಮ್ಮನ್ನು ಕಂಡು ಧನ್ಯನಾದೆನಮ್ಮಾ ! ಎಂದು ಹೇಳಿದ ಆಂಜನೇಯನು ಸೀತಾದೇವಿಯರ ಪ್ರತಿಕ್ರಿಯೆಯನ್ನು ತಿಳಿಯಲು ಅಲ್ಲಿಗೆ ಶ್ರೀರಾಮ ಕಥೆಯನ್ನು ನಿಲ್ಲಿಸಿದನು.” (ಪುಟ ೩೮೮–೩೮೯)

ಇದೊಂದು ವಿನೂತನ ಕಥನಶೈಲಿ: ಇಲ್ಲಿ ಕಥೆ ಇದೆ, ಉಪಕಥೆ ಇದೆ, ವ್ಯಾಖ್ಯಾನವಿದೆ, ನೀತಿಬೋಧೆ ಇದೆ, ಅಲ್ಲಿಗಲ್ಲಿಗೆ ಒಪ್ಪುವ ಪದ್ಯ, ಹಾಡು, ಶ್ಲೋಕ ಎಲ್ಲವೂ ಇವೆ—ತುಂಬು ಹೊನಲಿನಲ್ಲಿ ಸಾಗುವ ಗಂಗಾನದಿಯಂತೆ. ಆರಂಭದಿಂದ ಕೊನೆಯವರೆಗೆ ಓದಬಹುದು, ನಡುವೆ ಎಲ್ಲಿಬೇಕಾದರೂ ಓದಬಹುದು—ಈ ರಾಮಾಯಣ ಪಿರಾಮಾಯಣವಾಗಿ ಓದುಗನ ಗಮನ ಸೆಳೆದು ಮುಂದೆ ಮುಂದೆ ಒಯ್ಯುತ್ತದೆ. ಅಚ್ಯುತದಾಸರ ಹರಿಕಥೆ ಕೇಳಿದವರಿಗೆ ಒಂದು ಸಂಗತಿ ಗೊತ್ತುಂಟು: ಪ್ರಾಚೀನ ಕಥೆಯನ್ನು (ಮನುಕುಲದ ಗಾಥೆಯನ್ನು) ಅರ್ವಾಚೀನ ಶ್ರೋತೃಗಳಿಗೆ ತಿಳಿಯ ಹೇಳುವುದರಲ್ಲಿ ಮತ್ತು ಹಾಗೆ ಹೇಳಿ ವರ್ತಮಾನ ಜೀವನಕ್ಕೆ ಅರ್ಥವನ್ನೂ ಚಾಲನೆಯನ್ನೂ ನೀಡುವುದರಲ್ಲಿ ಇವರೊಂದು ದಾಖಲೆ ಸ್ಥಾಪಿಸಿದ್ದಾರೆ. ಇವರ ಪ್ರವಚನದಲ್ಲಿ ಘನಸಂಗೀತವಿದೆ, ತಿಳಿಗನ್ನಡವಿದೆ, ಲಘು ಹಾಸ್ಯವಿದೆ, ಗಂಭೀರ ಮೌಲ್ಯವಿದೆ—ಎಲ್ಲವೂ ದ್ರಾಕ್ಷಾಪಾಕದಂತೆ, ಕಾಂತಾಸಮ್ಮಿತಿಯಂತೆ. ಪ್ರಸಕ್ತ ಗ್ರಂಥದ ವಾಚಕ ಮಾಡಬೇಕಾದ ದ್ದಿಷ್ಟೇ: ಭದ್ರಗಿರಿಯವ ಶೈಲಿಗೆ ತನ್ನ ಹೃದಯವನ್ನು ಶ್ರುತಿಗೊಳಿಸಿ ಬುದ್ಧಿಯನ್ನು ಮುದ್ರಿತಾಕ್ಷರಗಳ ಮೇಲೆ ಸರಿಯಗೊಡಬೇಕು ; ಆಗ ಈತನಿಗೆ ತಿಳಿಯದಂತೆ ಸಾಕ್ಷಾತ್ ಅಚ್ಯುತದಾಸರೇ ಈ ಕಥಾನಕವನ್ನು ವಾಚಕನ ಕಿವಿಯೊಳಗೆ

ಅವರ ಅದ್ವಿತೀಯ ಶೈಲಿಯಲ್ಲಿ ಉಸುರುವವರು. ಇದು ನನ್ನ ವೈಯಕ್ತಿಕ ಅನುಭವ.

ಆಧುನಿಕ ವಿಜ್ಞಾನ-ತಂತ್ರವಿದ್ಯಾಯುಗದ ಪ್ರಗತಿಯಲ್ಲಿ ರಾಮಾಯಣದಂಥ ಅಡುಗೂಲಜ್ಜಿ ಕತೆ ಹರಿಕಥೆಯಂಥ ಪಳೆಯುಳಿಕೆ ಮಾಧ್ಯಮದಲ್ಲಿ ಬಿತ್ತರವಾದರೆ ಕೇಳುವವರು ಯಾರು? ಅಲಸಿಗರು, ಮೂಢರು ಹಾಗೂ ಪಲಾಯನವಾದಿಗಳು. Disinformation (ಉದ್ದೇಶಪೂರ್ವಕವಾಗಿ ಎರೆಯುವ ಅಪಮಾಹಿತಿ) ಹೊರತಾಗಿ ಬೇರೇನನ್ನು ತಾನೇ ಹರಿಕಥೆಯಿಂದ ಪಡೆಯಲಾದೀತು? ಇಂಥ ವಾದವನ್ನು ಆಧುನಿಕ ವಿಜ್ಞಾನ ಸುಶಿಕ್ಷಿತರು (?), ಯಾವ ಹರಿಕಥೆಯನ್ನೂ ಕೇಳದೇ ಅಭಿಜಾತ ವಾಙ್ಮಯವನ್ನೂ ಓದದೇ, ಅಪ್ಪಣೆಕೊಡಿಸುವುದು ವಿರಳವಲ್ಲ. ಇಂಥ ನಿಜಜ್ಞಾನಶತ್ರುಗಳಿಗೆ ಋಜುಜೀವನವಿದೂರರಿಗೆ ಎರಡು ಮಾತು ಹೇಳಲೇಬೇಕು:

ಒಂದು ದೇಶದ ಮನೋಭೀಪ್ಸೆ, ಜೀವನರೀತಿ, ಆಶೋತ್ತರಗಳು—ಸಮಗ್ರವಾಗಿ ಜೀವನದೃಷ್ಟಿ—ಅರಿಯಬೇಕಾದರೆ ಅತ್ಯಂತ ಸುಲಭ ಹಾಗೂ ವಿಶ್ವಾಸಾರ್ಹ ಮಾರ್ಗ ಆ ಜನರ ಅಭಿಜಾತ ವಾಙ್ಮಯದ ಅಧ್ಯಯನ. ಭಾರತೀಯ ಪರಂಪರೆಯ ಅಭಿಜಾತ ವಾಙ್ಮಯದಲ್ಲಿ ರಾಮಾಯಣ ಮಹಾಭಾರತಗಳ ಸ್ಥಾನಗಳು ಗಂಗಾ ಬ್ರಹ್ಮಪುತ್ರ ನದಿಗಳಿಗೆ ಹಿಮಾಲಯವಿರುವಂತೆ: ಮೊದಲನೆಯದು ಕಾವ್ಯ ಎರಡನೆಯದು ಇತಿಹಾಸ, ಎರಡೂ ಸೇರಿ ಭಾರತೀಯ ಸಂಸ್ಕೃತಿ. ಖುದ್ದು ವಿಜ್ಞಾನದ ಸಂಶೋಧನೆಗಳಿಗೇ ಸ್ಫೂರ್ತಿ ಬರುವುದು ಮತ್ತು ಪ್ರವರ್ತನಶೀಲತೆ ಒದಗುವುದು ಆಯಾ ಜನಾಂಗದ ಸಂಸ್ಕೃತಿಯಿಂದ. ಆದ್ದರಿಂದ ಯಾವುದೇ ಕಾರಣಕ್ಕಾಗಿ ರಾಮಾಯಣಾದಿ ಅಭಿಜಾತ ವಾಙ್ಮಯವನ್ನು ದೂರೀಕರಿಸುವವರು ಸ್ವತಃ ಜೀವನವಿದೂರರಾಗುತ್ತಾರೆ ಮತ್ತು ಅಷ್ಟರ ಮಟ್ಟಿಗೆ ಅವರ ಜೀವನ ಅಪೂರ್ಣವಾಗುತ್ತದೆ.

'ರಾಮಕಥಾ ವಾಹಿನಿ'ಯನ್ನು ಓದಿ ಮುಗಿಸಿದಾಗ (ಇದೊಂದು ನಿರಂತರ ಪ್ರಕ್ರಿಯೆ) ಪ್ರತಿಸಲವೂ ನನ್ನ ಮನಸ್ಸಿನಲ್ಲಿ ಮಿಡಿಯುವ ಭಾವನೆಯನ್ನು ವಿ. ಎಸ್. ಶ್ರೀನಿವಾಸಶಾಸ್ತ್ರಿಯವರ (Lectures on the Ramayana by the Right Hon'ble V. S. Srinivasa Sastri) ಈ ನುಡಿಗಳು ಪ್ರತಿಬಿಂಬಿಸುತ್ತವೆ: "But am I being too much of a pessimist, am I being a hopeless misreader of things around me, when I say—with a good deal

of grief and sorrow—that, perhaps, the Ramayana is not quite familiar to the younger generations that are coming up as it was to us of an older day?'' (ಹಿಂದಿನ ದಿನಗಳಲ್ಲಿಯ ಯುವ ಪೀಳಿಗೆಗಳವರಿಗೆ ರಾಮಾಯಣ ಸುಪರಿಚಿತವಾಗಿತ್ತು. ಇಂದಿನವರಿಗಾದರೋ, ಪ್ರಾಯಶಃ, ಅದು ಅಷ್ಟೇನೂ ಆತ್ಮೀಯವಾಗಿಲ್ಲ. ಅತ್ಯಂತ ಖೇದದಿಂದ ಈ ಮಾತು ಹೇಳುತ್ತಿರುವಾಗ ನಾನು ತೀರ ನಿರಾಶಾವಾದಿ ಆಗಿರುವೆನೇ? ನನ್ನ ಸುತ್ತಲಿನ ವಿದ್ಯಮಾನಗಳನ್ನು ಸರಿಯಾಗಿ ಓದಲಾಗದವನಾಗಿರುವೆನೇ?)

ಕನ್ನಡ ಓದಬಲ್ಲವರಿಗೆ, ಅವರ ಪ್ರಾಯ ಅನುಭವ ಏನೇ ಇದ್ದರೂ, ಇಲ್ಲೊಂದು ಅಮೃತ ಕುಂಭವಿದೆ. ಇದನ್ನು ಕಥೆಯಾಗಿ ಸವಿಯಬಹುದು; ಜೀವನಧರ್ಮವಾಗಿ ಆಸ್ವಾದಿಸಬಹುದು; ವರ್ತನಸಂಹಿತೆಯಾಗಿ ಸ್ವೀಕರಿಸಬಹುದು; ಮತ್ತು ಸಂಸ್ಕೃತಿಯ ರಸಬಿಂದುವಾಗಿಯೂ ಮೌಲ್ಯಗಳ ಹೆಗ್ಗಯಾಗಿಯೂ ಸ್ವಾಂಗೀಕರಿಸಬಹುದು. ಮನೆ ಮನೆಯನು ಮತ್ತು ಮನ ಮನವನು ಬೆಳಗಿಸಬಲ್ಲ ನಿರಂತರ ಜ್ಯೋತಿ 'ರಾಮಕಥಾ ವಾಹಿನಿ.' "ಅಚ್ಯುತದಾಸರು ಹಾಡಿದರೆಂದರೆ ಮೆಚ್ಚುತ ಹರಿ ತಾನೊಲಿಯುವನು, ಎಚ್ಚರದಿಂಜೀವನಮೌಲ್ಯಗಳನ್ನು-ಚ್ಚರಿಸುತ ತಾನಲಿಯುವನು!"

ಜಿ. ಟಿ. ನಾರಾಯಣರಾವ್

ಇತರರ ಅನುಗ್ರಹಕ್ಕೆ ಪಾತ್ರನಾಗುವುದಕ್ಕಿಂತ ಅವರ ಅಸೂಯೆಗೆ ಪಾತ್ರನಾಗುವುದು ಮೇಲು. ಏಕೆಂದರೆ ಇತರರ ಅನುಗ್ರಹದ ಹಿಂದೆಯೇ ನೀನವರ ಅಸೂಯೆಗೆ ಪಾತ್ರನಾಗುವೆ ಎಂಬುದನ್ನು ನೆನಪಿನಲ್ಲಿಟ್ಟುಕೋ.

—ಹೆರೋಡೋಟಸ್

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಚಂದಾ ವಿವರಗಳು :

ಬಿಡಿ ಪತ್ರಿಕೆ	ರೂ. 3-00
ವಾರ್ಷಿಕ ಚಂದಾ	ರೂ. 30-00

ಆಜೀವ ಸದಸ್ಯತ್ವದ ಚಂದಾ ವಿವರ:

ಸಂಸ್ಥೆಗೆ	ರೂ. 500-00
ವ್ಯಕ್ತಿಗೆ	ರೂ. 300-00

ಕಛೇರಿ ವಿಳಾಸ :

ಪ್ರಧಾನ ಸಂಪಾದಕರು
'ಪುಸ್ತಕ ಪ್ರಪಂಚ' ಮಾಸಪತ್ರಿಕೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬ ರಸ್ತೆ, ಮಾನಸಗಂಗೋತ್ರಿ ಕ್ಯಾಂಪಸ್
ಮೈಸೂರು-570006

ದೂರವಾಣಿ : 20435

Reg. No. KRNN 29 / WPP 6

LICENSE No. 21
LICENSED TO POST WITH PAYMENT

Edited by R. Boraiah, Printed by H. V. Sreenivasachar, Manage[r] at Karnataka State Adult Education Council Press and Publishe[d] by Karnataka State Adult Education Council, Mysore city (India)